

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 25 ಸಂಚಿಕೆ 46
ನವಂಬರ್ 16, 2003 ಬೆಲೆ ರೂ. 3.00



ಭ್ರಷ್ಟಾಚಾರ ಮತ್ತು ಬಾಂಬ್ : ಎತ್ತಣದ ಸಂಬಂಧ ?!



ಅಕ್ಟೋಬರ್ ಮಹಾನ್‌ಕ್ರಾಂತಿ ಭವಿಷ್ಯತ್ತಿನ ದಾರಿದೀಪ




ರಿಲೆಯನ್ಸ್ ಕೊಬ್ಬಿಸುವ ಟೆಲಿಕಾಂ ನೀತಿ!



ಹೆಚ್ಚುತ್ತಿರುವ ಮತಾಂಧರ ಅಟ್ಟಹಾಸ

ಪ್ಯಾಲೆಸ್ಟೈನ್ : ಇಸ್ರೇಲಿ ಭಯೋತ್ಪಾದನೆ

ಸೋವಿಯತ್ ಮೈತ್ರಿ: ಖ್ಯಾತ ಬರಹಗಾರರ ಒಡನಾಟ-ಅರಿವಿನ ವಿಸ್ತಾರ



1948 ರ ಅಂತ್ಯ ಭಾಗದಲ್ಲಿ ಅಂದರೆ ಅಕ್ಟೋಬರ್ ತಿಂಗಳಲ್ಲಿ ನಾನು ಮುಂಬಾಯಿಗೆ ಹೋದೆ. ಅದಕ್ಕೆ ಎರಡು ಕಾರಣ, ಒಂದು ನಮ್ಮ ಸಂಬಂಧಿಕರೆಲ್ಲ ಮುಂಬಯಿಯಲ್ಲಿದ್ದರು ಮತ್ತು ದಬ್ಬಾಳಿಕೆ ಸಹಿಸಲಸಾಧ್ಯವಾಗಿ ನಮ್ಮ ಸ್ನೇಹಿತರಾದ ಮುಖ್ಯ ಸಂಗಾತಿಗಳು ಕೂಡಾ ಮುಂಬಾಯಿಗೆ ಹೋದುದೇ ಕಾರಣವಾಗಿತ್ತು. ಒಂದೆರಡು ತಿಂಗಳವರೆಗೆ ನನಗೆ ಮುಂಬಾಯಿಯ ಜೀವನದ ಬಗ್ಗೆ ತಿಳಿಯಲು ಬೇಕಾಯಿತು. ನಂತರದಲ್ಲಿ ಪಕ್ಷದ ಪತ್ರಿಕೆಗಳು ದೊರೆಯುವ ಸ್ಥಳಗಳನ್ನು ಗುರುತಿಸಿ ಪತ್ರಿಕೆ ಕೊಳ್ಳಲು ಪ್ರಾರಂಭಿಸಿ ಹಿಂದಿಯಲ್ಲಿ ಮತ್ತು ಜನಶಕ್ತಿ ದೊರೆಯಿತು. ನಂತರ ಮಂಗಳೂರಿಗೆ ಸಂಪರ್ಕ ಬೆಳೆಸಿ "ಅರುಣ" ವಾರಪತ್ರಿಕೆಯನ್ನು ಏಜೆನ್ಸಿ ಮೂಲಕ ಮಾರಾಟ ಮಾಡಲು ಪ್ರಾರಂಭಿಸಿದೆ. ಜಿಲ್ಲೆಯ ಹಲವಾರು ಸಂಗಾತಿಗಳ ಪರಿಚಯವಾಯಿತು. ಅವರೆಲ್ಲರೂ ಪಕ್ಷದ ಅಭಿಮಾನಿಗಳಾಗಿದ್ದರು. ಪಕ್ಷದ ಸದಸ್ಯರಾಗಿದ್ದು ಹೈಕೋರ್ಟಿನ ಪ್ರಸಿದ್ಧ ವಕೀಲರಾದ ಕಾಂ.ಟಿ.ಸಂಜೀವ ಹೆಗ್ಡೆಯವರ ಪರಿಚಯವಾಯಿತು ಮತ್ತು ತೀರಾ ಹತ್ತಿರದ ಗೆಳೆಯರಾಗಿ ಆತ್ಮೀಯ ಬಂಧುಗಳಾದೆವು. ಇದರಿಂದಾಗಿ ಅದುವರೆಗೆ ಕೆಲಸ ಮಾಡುತ್ತಿದ್ದ ಭಾರತ ರಶಿಯಾ ಸ್ನೇಹ ಸಂಘ (friends of the soviet union)ದ ಬದಲಿಗೆ ಇಂಡೋ ಸೋವಿಯತ್ ಕಲ್ಚರಲ್ ಸೋಸೈಟಿ ಅಸ್ತಿತ್ವಕ್ಕೆ ಬರುವಾಗ ನಾನು ಅದರ ಸಭೆಗಳಿಗೆ ಹೋಗುತ್ತಿದ್ದುದರಿಂದ ಅಂದಿನ ಡಾ.ಎ.ವಿ. ಬಾಳಿಗಾ, ರಜನಿ ಪಠೇಲ್, ಡೇನಿಯಲ್ ಲತೀಫ್, ಹೈಕೋರ್ಟು ಜಡ್ಜರಾಗಿದ್ದ ಜಸ್ಟೀಸ್ ಕರಿಂ (ಛಾಗ್ಲ) ಛಾಗ್ಲ ಮುಂತಾದವರ ಸಂಪರ್ಕ ಬೆಳೆಯಿತು. ಅವರೆಲ್ಲರೂ ಉನ್ನತ ಮಟ್ಟದಲ್ಲಿ ಅಂದಿನ ದಿನಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿ ಭಾರತ ಸರಕಾರದ ಸೋವಿಯತ್ ವಿರೋಧಿಯಾದ ನೀತಿಯನ್ನೇ ಬದಲಾಯಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಮಹನೀಯರಾಗಿದ್ದರು. 1952 ರವರೆಗೆ ಸೋವಿಯತ್ ಸಾಹಿತ್ಯಗಳನ್ನು ರೈಲ್ವೆ ಸ್ಟೇಶನ್ನಿನ ಬುಕ್‌ಸ್ಟಾಲ್‌ಗಳಲ್ಲಿ ಮಾರಾಟ ಮಾಡಲು ನಿಷೇಧವಿತ್ತು. ನಂತರದಲ್ಲಿ ಮೇಲಿನವರೆಲ್ಲರ ಪ್ರಯತ್ನದ ಫಲವಾಗಿ ಭಾರತ ಸೋವಿಯತ್ ಮೈತ್ರಿ ಏರ್ಪಟ್ಟು ಪಂಚವಾರ್ಷಿಕ ಯೋಜನೆಗಳಿಗೆ ಸೋವಿಯತ್ ಯೂನಿಯನ್ನಿನಿಂದ ಅಪಾರವಾದ ನೆರವು ಹರಿದು ಬರುವಂತಾಯಿತು. ಹಲವಾರು ಘನ ಕೈಗಾರಿಕೆಗಳನ್ನು ಕಟ್ಟಿ ಬೆಳೆಸುವಲ್ಲಿ ಅಂದಿನ ಸೋವಿಯತ್ ಯೂನಿಯನ್ ನೀಡಿದ ನಿಸ್ವಾರ್ಥ ಸಹಾಯ ಮತ್ತು ಬೆಂಬಲದ ಪರಿಣಾಮವಾಗಿ ಪಂಡಿತ್ ಜವಾಹರ್‌ಲಾಲ್‌ರವರು ಹೇಳಿದಂತೆ ಆಧುನಿಕ ದೇಗುಲಗಳು ಅಂದರೆ, ಭಿಲಾಯಿ, ಬೊಕಾರೋ, ನೈವೇಲಿ ಇಂತಹ ಹಲವಾರು ಬೃಹತ್ ಸಾರ್ವಜನಿಕ ವಲಯದ ಕೈಗಾರಿಕೆಗಳ ಸ್ಥಾಪನೆಯಾಗಿ ಅದರಿಂದಾಗಿ ಸಾವಿರಾರು ಕಾರ್ಮಿಕರಿಗೆ ಕೆಲಸ ದೊರೆಯಿತು. ಅನೇಕ ತಜ್ಞರು ಉನ್ನತ ಶಿಕ್ಷಣ ಪಡೆಯಲು ತರಬೇತಿಗಾಗಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿದರು. ಪ್ರಾರಂಭದಲ್ಲಿ ಅತ್ಯುನ್ನತ ಮಟ್ಟದ ಸೋವಿಯತ್ ಫಿಲಂಗಳನ್ನು ನೋಡಲು ನಮಗೆ ಸಾಧ್ಯವಾಯಿತು. ಸ್ಟೋನ್ ಫ್ಲವರ್, ಯೂತ್ ಫೆಸ್ಟಿವಲ್, ಬ್ಯಾಟ್ಲ ಆಫ್



ಡೇವಿಡ್ ಕರ್ಕಡ, ಉಡುಪಿ

ಸ್ಟಾಲಿನ್ ಗ್ರಾಡ್, ಫಾಲ್ ಆಫ್ ಬರ್ಲಿನ್ ಇತ್ಯಾದಿ ಚಲನ ಚಿತ್ರಗಳನ್ನು ನೋಡುವ ಸುಯೋಗ ನಮಗೆ ಲಭಿಸಿತು. ಕೀಳ್ಮಟ್ಟ ಚಿತ್ರಗಳಿಗಿಂತ ಉನ್ನತ ಮಟ್ಟ ಚಲನಚಿತ್ರಗಳನ್ನು ನೋಡುವ ಕಣ್ಣೋಟವು ನಮಗೆ ಬರಲು ಸಾಧ್ಯವಾಯಿತು. ನಾವು ಎಡ ಅಭಿಪ್ರಾಯದವರು. ನ್ಯೂ ಥಿಯೇಟರ್ಸ್‌ನ ಮೂಲಕ ಬಿಡುಗಡೆಗೊಂಡ ಹಲವಾರು ಚಿತ್ರಗಳನ್ನು ನೋಡಿದೆವು. ಮೆಹಬೂಬ್‌ಖಾನ್ ಕತ್ತಿಸುತ್ತಿಗೆ ಲಾಂಛನದಡಿ ಯಲ್ಲಿ ತಯಾರಿಸಿದ. 'ಮದರ್ ಇಂಡಿಯಾ' ಜಾರತ್ 'ರೋಟಿ' ಮೊದಲಾದ ಚಲನಚಿತ್ರಗಳನ್ನು ನೋಡುವಂತಹ ಸದಾವಕಾಶ ಅಂದಿನ ದಿನಗಳಲ್ಲಿ ನಮಗಿತ್ತು. ಬೀಮಲ್ ರಾಯ್, ನಿತಿನ್ ಬೋಸ್, ಕ್ವಾಜಾ ಅಹಮ್ಮದ್ ಅಬ್ಬಾಸರ ಹೆಸರು ಕೇಳಿದರೆ ರೋಮಾಂಚನಗೊಳ್ಳುತ್ತಿದ್ದೆವು. ಸಜ್ಜದ್ ಜಹೀರ್, ಕೈಫಿ ಅಜ್ಮಿ, ಜೋ ಅನ್ಸಾರಿ ಮುಂತಾದ ಪ್ರಗತಿಶೀಲ ಲೇಖಕರು, ಕವಿಗಳ ಪರಿಚಯವಾಯಿತು. ಮೆಹಬೂಬಖಾನರು ಸಾಮಾನ್ಯರಂತೆ ಬದುಕುತ್ತಾ ಇದ್ದು ಮೇಲಟ್ಟಕ್ಕೆ ಬಂದವರಾಗಿದ್ದರು. ಚಲನಚಿತ್ರ ಜಗತ್ತಿನಲ್ಲಿ ಅನೇಕ ಪ್ರಗತಿಪರ ಜನರನ್ನು ಈ ರೀತಿಯಾಗಿ ಗುರುತಿಸಬಹುದಾಗಿತ್ತು.

ಪ್ರಗತಿಶೀಲ ಲೇಖಕರ ಸಂಘ ಆದಾಗಲೇ ದೇಶದಲ್ಲಿ ಪ್ರಬಲವಾಗಿ ಬೆಳೆಯುತ್ತಿತ್ತು. ಅಮೃತ್ ರೋಯ್ ಡಾ.ಮುಲ್ಕರಾಜ್ ಆನಂದ್, ಪ್ರೇಮ್ ಚಂದ್, ಕಿಶನ್ ಚಂದರ್ ಮುಂತಾದವರೆಲ್ಲರೂ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದ್ದರು. ಕರ್ನಾಟಕದಲ್ಲಿ ಪ್ರಗತಿಶೀಲ ಲೇಖಕರ ಸಂಘ ಬಹಳ ಪ್ರಭಾವಶಾಲಿಯಾಗಿ ಬೆಳೆಯಿತು. ಶ್ರೀಗಳಾದ ಬಸವರಾಜ್ ಕಟ್ಟಿಮನಿ, ಅ.ನ.ಕೃ ಕುಳುಕುಂದ ಶಿವರಾವ್ (ನಿರಂಜನ) ಕೊ.ಚೆನ್ನಬಸಪ್ಪ, ಪ.ಸು.ಭಟ್ಟ, ಶಿವೇಶ್ವರ ದೊಡ್ಡಮನಿ, ಅನಂತಪದ್ಮನಾಭ ಸೋಗಾಲ, ಎಂ.ಹರಿದಾಸ್, ಸದಾಶಿವ ಇವರೆಲ್ಲ ವ್ಯಾಸರಾಯ ಬಲ್ಲಾಳರು, ಕೆ.ವಾಸುದೇವ್‌ರಾಯರು. ಮೊದಲಾದ ಸಾಹಿತಿಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಉನ್ನತ ಮಟ್ಟದ ಕೃತಿಗಳು ಮೂಡಿಬಂದವು. ದುಡಿಯುವ ಜನರ ಚಳುವಳಿ ಹೋರಾಟಗಳಿಗೆ ಸ್ಫೂರ್ತಿ ನೀಡುವ ಕೆಲಸವೂ ನಡೆಯಿತು. ಚರಿತ್ರೆಯೆಂದರೆ ರಾಜ ಮಹಾರಾಜರ ಕಥೆಯೆಂದೇ ತಿಳಿದಿದ್ದ ನಮ್ಮವರಿಗೆಲ್ಲರಿಗೂ ದುಡಿಯುವ ಜನತ್ರೆಯ ನಿರ್ಮಾಪಕರೆಂದು ಚೆನ್ನಾಗಿ ತಿಳಿಯುವಂತಾಯಿತು. 1949 ದಬ್ಬಾಳಿಕೆಯ ದಿನಗಳಾಗಿದ್ದವು. ಜೈಲುಗಳಲ್ಲಿ ಕೂಡಾ ರಾಕ್ಷಸೀ ರೀತಿಯ ಹಿಂಸೆಗಳ ಬಗ್ಗೆ ಪತ್ರಿಕೆಗಳಿಗೆ ಸೋರಿಹೋದ ವರದಿಗಳು ಬರುತ್ತಿತ್ತು. ಅದೇ ಸಂದರ್ಭ, ಗುಜರಾತಿನ ಸಬರ್‌ಮತಿ ಜೈನಿನಲ್ಲಿದ್ದ ನಮ್ಮ ಸಂಗಾತಿಗಳ ಮೇಲೆ ಗೋಳಿಬಾರು ನಡೆಯಿತು. ಜಯಂತಿಲಾಲ್ ಪಾರೇಖ್, ಜಮನ್‌ದಾಸ್ ಮೋದಿ ಅಸುನೀಗಿದ ವರದಿ ಬಂತು. ನಂತರದಲ್ಲಿ ನಾಸಿಕ್ ಜೈಲಿನಲ್ಲಿ ಗೋಳಿಬಾರು ನಡೆದಾಗ ಕರ್ನಾಟಕದ ಧೀರ ಸಂಗಾತಿ ಉತ್ತರಕನ್ನಡ ಜಿಲ್ಲೆಯ ಗಣೂ ಮಹಾಬಲ ನಾಯಕ್ ಎನ್ನುವವರು ಹುತಾತ್ಮರಾದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಸೇಲಂ ಜೈಲಿನಲ್ಲಿ 10 ಮಂದಿ ಸಂಗಾತಿಗಳನ್ನು ಗುಂಡಿಕ್ಕಿ ಕೊಲ್ಲಲಾಯಿತು. ಇದೆಲ್ಲವೂ ನಡೆದದ್ದು ಪ್ರಜಾಪ್ರಭುತ್ವದ ರಕ್ಷರೆಂದುಕೊಂಡವರು ರಾಜ್ಯವಾಳುತ್ತಿದ್ದ ಕರಾಳ ದಿನಗಳಲ್ಲಿ. ಆಳುವ ವರ್ಗ ಪಾಳೆಯಗಾರಿ ಶಕ್ತಿಗಳ ರಕ್ಷಣೆಗಾಗಿ ಯಾವ ರೀತಿ ಕೆಲಸ ಮಾಡಿದೆ ಎಂದು ನಮಗೆಲ್ಲ ಅರಿವಾಯಿತು. ತಾತ್ಕಾಲಿಕವಾಗಿ ವರ್ಗ ಹೋರಾಟಗಳ ನಿಲುಗಡೆಯಾಗಿ ರೈತ ಚಳುವಳಿ ಕೂಡಾ ಕ್ಷೀಣವಾಗುವಂತಾಯಿತು. ಜೈಲುಗಳಲ್ಲಿ ಕೊಲೆ ಮಾಡಲ್ಪಟ್ಟವರೆಲ್ಲರೂ ಅತ್ಯುನ್ನತ ಮಟ್ಟದ ತಿಳುವಳಿಕೆ ಹೊಂದಿದ ಸಂಗಾತಿಗಳಾಗಿದ್ದರು. ನಮ್ಮ ಹಿಂದಿನ ಪೀಳಿಗೆ ಪಕ್ಷ ಕಟ್ಟಲು ಯಾವ ರೀತಿಯ ತ್ಯಾಗಗಳನ್ನು ಮಾಡಿದೆ ಎಂದು ತಿಳಿಯುವಂತಾದರೆ ಸಾಕು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ನವೆಂಬರ್ 10 ರಿಂದ 17**
  ಹಳದಿ ಕಾರ್ಡ್ ನೀಡಿಕೆಗೆ ಒತ್ತಾಯಿಸಿ ಧರಣಿ, ರೈತರ ಆತ್ಮಹತ್ಯೆ ಮತ್ತು ಹಸಿವಿನ ಸಾವುಗಳನ್ನು ತಡೆಯಲು ಆಗ್ರಹಿಸಿ ಪ್ರಚಾರಾಂದೋಲನ
  ನವೆಂಬರ್ 17 - ಸರಕಾರಿ ಕಛೇರಿಗಳ ಪಿಕೆಟಿಂಗ್
- **ನವೆಂಬರ್ 16,2003**
  ಕರ್ನಾಟಕ ಲೇಬರ್ ರೆಪ್ರಸೆಂಟೇಟಿವ್ ಫೋರಂ ವಿಚಾರಸಂಕಿರಣ
  1. ಮುಷ್ಕರದ ಹಕ್ಕಿನ ಕುರಿತು ಸುಪ್ರಿಂ ಕೋರ್ಟು - ಸಾಮೂಹಿಕ ಚೌಕಾಶಿಯ ಮೇಲೆ ಅದರ ಪರಿಣಾಮ
  2. ಬಂಡವಾಳ ಹಿಂತೆಗೆತದ ಕುರಿತು ಸುಪ್ರಿಂ ಕೋರ್ಟು - ಆರ್ಥಿಕ ನೀತಿಗಳ ಮೇಲೆ ಅದರ ಪರಿಣಾಮ
  ಮುಖ್ಯ ಅತಿಥಿಗಳು: ಎಲ್.ಸಿ.ಜೈನ್, ಸುಕುಮೋಲ್ ಸೇನ್, ಎನ್.ಚಂದ್ರ ಮೊದಲಾದವರು
  ಸ್ಥಳ: ಸೆನೆಟ್ ಹಾಲ್, ಬೆಂಗಳೂರು
  ಸಮಯ : ಬೆಳಿಗ್ಗೆ 10 ರಿಂದ 6 ಗಂಟೆ
- **ನವೆಂಬರ್ 17, 2003**
  'ಸರಕಾರಿ ನೌಕರರಿಗೆ ಮುಷ್ಕರದ ಹಕ್ಕು' ಕುರಿತು ಕೇಂದ್ರ ಸರಕಾರಿ ನೌಕರರ ಸಮಾವೇಶ
  ಕೇಂದ್ರಿಯ ಸದನ- ಬೆಂಗಳೂರು
  ಬೆಳಿಗ್ಗೆ 10 ಗಂಟೆಗೆ
  ಮಾತನಾಡುವವರು:
  ಎಸ್.ಕೆ.ವ್ಯಾಸ್ - ಕೇಂದ್ರ ಸರಕಾರಿ ನೌಕರರ ಅಖಿಲಭಾರತ ಮುಖಂಡರು
  ಸುಕಮೋಲ್ ಸೇನ್ - ರಾಜ್ಯ ಸರಕಾರಿ ನೌಕರರ ಅಖಿಲ ಭಾರತ ಮುಖಂಡರು
  ಹೆಚ್.ಎನ್.ನಾಗಮೋಹನ್‌ದಾಸ್ : ಖ್ಯಾತ ವಕೀಲರು
- **ನವೆಂಬರ್ 28, 2003**
  ಬಳ್ಳಾರಿ ಜಿಲ್ಲಾ ಸಿಐಟಿಯು ವತಿಯಿಂದ 'ಬೇಡಿಕೆದಿನ' ಸಿಐಟಿಯು ಜಿಲ್ಲಾ ಸಮ್ಮೇಳನದ ಕರೆ
- **ಡಿಸೆಂಬರ್ 11,2003**
  ಅಖಿಲ ಭಾರತ ವಿದ್ಯಾರ್ಥಿ ಮುಷ್ಕರ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಶುಲ್ಕ ಮತ್ತು ಪ್ರವೇಶವನ್ನು ಕ್ರಮಬದ್ಧಗೊಳಿಸಲು ಕೇಂದ್ರ ಶಾಸನಕ್ಕೆ ಆಗ್ರಹಿಸಿ, ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ ಹಕ್ಕುಗಳಿಗೆ ಒತ್ತಾಯಿಸಿ

ಆಹಾರ ಭದ್ರತೆ, ಎಲ್ಲರಿಗೂ ಹಳದಿಕಾರ್ಡ್ ನೀಡಲು, ಆತ್ಮಹತ್ಯೆ ತಡೆಯಲು ಆಗ್ರಹಿಸಿ ಸಿಪಿಐ(ಎಂ) ಚಳುವಳಿ

ಬೆಳಗಾದರೆ ಅನ್ನದಾತರು ಆತ್ಮಹತ್ಯೆ ಮಾಡಿಕೊಂಡ ಸಾವಿನ ಸುದ್ದಿಯನ್ನು ಕೇಳುತ್ತಿದ್ದೇವೆ. ಈ ಆತ್ಮಹತ್ಯೆಯ ಸಾವುಗಳು ಒಂದಲ್ಲ ಎರಡಲ್ಲ. ಕರ್ನಾಟಕದಲ್ಲಿ ಸುಮಾರು 600 ರೈತರು - ಕೂಲಿಕಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭೀಕರ ಬರದಲ್ಲಿಯೂ ರೈತರು ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಆದರೆ ಇಂದು ತಾವು ಬೆಳೆದ ಬೆಳೆಗೆ ಬೆಲೆ ಇಲ್ಲದೆ ತಾವು ಮಾಡಿದ ಕಾಯಕಕ್ಕೆ ತಕ್ಕ ಪ್ರತಿಫಲ ಸಿಗದೆ ಬದುಕಿನ ಖರ್ಚು, ಶಿಕ್ಷಣ, ಆರೋಗ್ಯ, ಪ್ರಯಾಣ, ವಸತಿ, ಕೃಷಿ ವೆಚ್ಚ ಹೆಚ್ಚಾಗಿ ಬದುಕಿನ ಭಾರ ತಾಳದೇ ಸಾಲಗಾರರಾಗಿ ಕುಸಿದು ಆತ್ಮಹತ್ಯೆ ದಾರಿ ಹಿಡಿದಿದ್ದಾರೆ.

ಆತ್ಮಹತ್ಯೆಗೆ ಸಬ್ಸಿಡಿ ಕಡಿತ, ವಿದ್ಯುತ್ ಕಡಿತ, ಆಹಾರಧಾನ್ಯಗಳ ಬೆಲೆ ಏರಿಕೆ, ನಿರುದ್ಯೋಗ, ಇತ್ಯಾದಿಗಳಿಗೆ ಕಾರಣವಾದ ವಿಶ್ವಬ್ಯಾಂಕ್ ನಿರ್ದೇಶಿತ ಕೇಂದ್ರ - ರಾಜ್ಯ ಸರ್ಕಾರಗಳ ನೀತಿಗಳು ಕಾರಣವಾಗಿವೆ. ಹುಚ್ಚಾಸ್ಪತ್ರೆಯ ವೈದ್ಯರನ್ನು ಕರೆದು ಆತ್ಮಹತ್ಯೆಗೆ ಕಾರಣ ಹುಡುಕುವ ರಾಜ್ಯ ಸರ್ಕಾರದ ಕಪಟನಾಟಕ, ಕರ್ನಾಟಕದಲ್ಲಿ ನಡೆದ ಸಾವುಗಳ ಬಗ್ಗೆ ಗೊತ್ತಿಲ್ಲ ಎಂದು ಬಿಜೆಪಿಯ ಕೇಂದ್ರ ಸರ್ಕಾರದ ದೂರ್ತತನ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಸಿಪಿಐ(ಎಂ) ನೇತೃತ್ವದ ಆಡಳಿತವಿರುವ ಪಶ್ಚಿಮ ಬಂಗಾಳ ಮತ್ತು ತ್ರಿಪುರಾಗಳಲ್ಲಿ ಒಬ್ಬರೇ, ಒಬ್ಬ ರೈತ ಕೂಲಿಕಾರರು ಆತ್ಮಹತ್ಯೆ ಮಾಡಿಕೊಳ್ಳದೇ ಇರುವುದು ಅಲ್ಲಿನ ಸರಕಾರಗಳು ದುಡಿಯುವ ಜನರ ಪರವಾಗಿರುವುದು ಎತ್ತಿ ತೋರಿಸುತ್ತದೆ. ಇದರಿಂದ ಸುಲಿಗೆಕೋರ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಅದರಲ್ಲೂ ವಿಶೇಷವಾಗಿ ಬಿಜೆಪಿ - ಕಾಂಗ್ರೆ ಸರ್ಕಾರಗಳ ಗೋಸುಂಬೆತನ ಬಯಲಾಗಿದೆ. ಆತ್ಮಹತ್ಯೆ ತಡೆಯಲು ಬದಲಿ ನೀತಿಗಳಿಗಾಗಿ ಹೋರಾಟ ನಡೆಸುವುದು ಇಂದು ಅನಿವಾರ್ಯವಾಗಿದೆ.

ಹಸಿವು ಬಡವರ ಪಾಲಿಗೆ ಸವಾಲಾಗಿ ಪ್ರತಿಯೊಬ್ಬನಿಗೆ ಬದುಕಲು ಬೇಕಾದ 510 ಗ್ರಾಂ ಆಹಾರಧಾನ್ಯ ಸಿಗದೇ ಕೇವಲ 414 ಗ್ರಾಂ ಲಭ್ಯವಾಗುತ್ತಿದೆ. ಜಗತ್ತಿನಲ್ಲಿ 600 ಕೋಟಿ ತಿನ್ನುವ ಜನರಿದ್ದಾರೆ. ಭಾರತ ಒಂದರಲ್ಲೇ 110 ಕೋಟಿ ತಿನ್ನುವ ಜನರಿದ್ದಾರೆ, ಜನಸಂಖ್ಯೆ ಬೆಳವಣಿಗೆಗೆ ತಕ್ಕಂತೆ ಆಹಾರ ಉತ್ಪಾದನೆ ನೋಡಿದಾಗ ತೀವ್ರ ಕುಸಿದಿದೆ. ಕರ್ನಾಟಕದಲ್ಲಿ

ಪುಟ 8 ಕ್ಕೆ

ಪ್ರಾದೇಶಿಕ ಅಸಮಾನತೆ: ರಾಜ್ಯೋತ್ಸವದಂದು ಆಕಳಿಸಿದ ಕೃಷ್ಣ

ಸಾಧಿಸಿದ್ದು ಬಹಳ ಸಾಧಿಸಬೇಕಾದ್ದು ಅಪಾರ ಎಂಬಂತಹ ನೆಲಮುಗಿಲು ಬೆಸೆಯುವ ಘೋಷಣೆಯನ್ನು ಮೊಳಗಿಸುತ್ತಿರುವ ಮುಖ್ಯಮಂತ್ರಿ ಕೃಷ್ಣರವರು ಇನ್ನೂ ಐದು ವರುಷಗಳಲ್ಲಿ ಹತ್ತುಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಭಾರೀ ಭರವಸೆ ನೀಡಿದ್ದಾರೆ. ಇರುವ ಉದ್ಯೋಗದ ಅವಕಾಶಗಳನ್ನು ಹಂತಹಂತವಾಗಿ ಕತ್ತರಿಸುತ್ತಾ, ಇರುವ ಉದ್ಯೋಗ ನಾಶವಾಗುವಂತಹ ಕೈಗಾರಿಕಾ- ಕೃಷಿ ನೀತಿಗಳನ್ನು ಅನುಸರಿಸುತ್ತಿರುವ ಕೃಷ್ಣರವರು ಅಷ್ಟೊಂದು ಹುದ್ದೆಗಳನ್ನು ಎಲ್ಲಿಂದ ಸೃಷ್ಟಿಸುತ್ತಾರೆ? ಇದು ವಾಜಪೇಯಿಯವರು ವರ್ಷಕ್ಕೆ ಒಂದು ಕೋಟಿ ಉದ್ಯೋಗ ಸೃಷ್ಟಿಸುವಂತಹ ಸ್ಕೀಮು ಇರಬೇಕು. ಕೃಷ್ಣರ ಅವಧಿ ಮುಗಿಯಲು 10 ತಿಂಗಳು ಇರುವಾಗ ಇಂತಹ ಭರವಸೆ. ತಮ್ಮನ್ನು ಮುಂದೆಯೂ ಮುಖ್ಯಮಂತ್ರಿ ಮಾಡಲಿ ಎಂಬ ಆಶೆಯಿಂದ ಹೊರಟಿದ್ದೆ? ಕೃಷ್ಣರವರು ಆ ಹುದ್ದೆಗಳು ಮಾಹಿತಿ ತಂತ್ರಜ್ಞಾನದ ಕ್ಷೇತ್ರದಿಂದ ಸೃಷ್ಟಿಸಲು ಸಾಧ್ಯತೆ ತೋರಿಸುತ್ತಿದ್ದಾರೆ. ಹಿಂಜರಿತದ ಸ್ಥಿತಿಯಲ್ಲಿರುವ ಐ.ಟಿ. ಕ್ಷೇತ್ರದಿಂದ ಇದು ಸಾಧ್ಯವೇ ಎಂಬುದು ಸಾಮಾನ್ಯರ ಪ್ರಶ್ನೆ.

ಈವಾರ ಕರ್ನಾಟಕ

ಎಸ್.ವೈ.ಗುರುಶಾಂತ್

ರಾಜ್ಯೋತ್ಸವದಂದು ಬರದ ನಡುವೆಯೂ ವೇಗದ ಅಭಿವೃದ್ಧಿ ಸಾಧಿಸಿದ ಸರ್ಕಾರವೆಂದು ಹೇಳಿಕೊಂಡ ಮುಖ್ಯಮಂತ್ರಿಗಳು ಈ ಬಾರಿಯೂ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಲು ದೃಢ ಸಂಕಲ್ಪದ ಶಬ್ದ ಬದ್ಧತೆ ಘೋಷಿಸಿದ್ದಾರೆ. ಅದಕ್ಕಾಗಿ ಡಾ.ಎಂ.ನಂಜುಂಡಪ್ಪನವರ ವರದಿಯನ್ನು ಜಾರಿಗೊಳಿಸಲು ಬದ್ಧವೆಂದು ಹೇಳಿದ್ದಾರೆ. ಪ್ರಾದೇಶಿಕ ಅಸಮಾನತೆ ತೊಲಗಿಸಲು ಹಲವು ಆಗ್ರಹಗಳು ಮತ್ತು ಹೋರಾಟದ ಧ್ವನಿ ಒತ್ತಡಗಳ ಬಳಿಕ ಒಂದು ಸಮಿತಿಯನ್ನು ಸರ್ಕಾರ ರಚಿಸಿತು. ಡಾ. ನಂಜುಂಡಪ್ಪರವರು ಒಂದು ಬೃಹತ್ ಗಾತ್ರದ ವರದಿಯನ್ನು ನೀಡಿ ಎರಡು ವರುಷಗಳು ಕಳೆದವು. ಅದರತ್ತ ಕಿಂಚಿತ್ತೂ ಸರ್ಕಾರವು ನೋಡಲಿಲ್ಲ. ರಾಜ್ಯೋತ್ಸವದ ಸಂದರ್ಭದಲ್ಲಿ ಮಾತ್ರ ಇಂತಹ ಹೇಳಿಕೆಗಳಿಂದ ಏನು ಪ್ರಯೋಜನವಾದೀತು? ಅಸಮಾನತೆ ಬಾಯಿಮಾತಿನ ಕಾಳಜಿಯಿಂದ ತೊಲಗೀತೆ?

ಡಾ. ಡಿ.ಎಂ.ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಿದ್ದಾರೆ. ಕಣ್ಣಿಗೆ ಕಟ್ಟುವಂತೆ ಮನವರಿಕೆ ಮಾಡುತ್ತಾರೆ. ಆದರೆ ಅವರು ಸೂಚಿಸುವ ಪರಿಹಾರದ ಕ್ರಮಗಳು ಬಹುತೇಕವಾಗಿ ವಿಶ್ವಬ್ಯಾಂಕ್ - ಐಎಂಎಫ್‌ಗಳ ನೀತಿ-ನಿರ್ದೇಶನಗಳನ್ನು ಮೀರುವುದಿಲ್ಲ. ಸರ್ಕಾರದ ನೀತಿಗಳಲ್ಲಿ ಬದಲಾವಣೆ ಮತ್ತು ಭೂಸುಧಾರಣೆ - ಕೈಗಾರಿಕಾ ಬೆಳವಣಿಗೆಯಂತಹ ಮೂಲಭೂತ ಅಂಶಗಳನ್ನು ಪ್ರತಿಪಾದಿಸುವುದಿಲ್ಲ. ಇಂತಹ ಸ್ಥಿತಿಯಲ್ಲಿ ಕೃಷ್ಣರ ಅಸಮಾನತೆ ತೊಲಗಿಸುವ ಮಾತುಗಳು ಕೇವಲ ವಂಚಿಸುವ, ಜನರ ಬದುಕಿನೊಟ್ಟಿಗೆ ಆಟ ಆಡುವಂತಾಗಿವೆ. ಬಸವಕಲ್ಯಾಣದ ಅಭಿವೃದ್ಧಿ, ರಾಜೀವ್ ವಸತಿ ಗೃಹಗಳ ನಿರ್ಮಾಣ, ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಒಂದು ಸ್ಕೀಮು, ಭಾವೈಕ ಪ್ರಶಸ್ತಿಗಳು, ಒಂದು ಮಹಿಳಾ ವಿಶ್ವವಿದ್ಯಾಲಯ ಈ ಅಸಮಾನತೆಯನ್ನು ತೊಲಗಿಸಿಯಾವೇ? ಒಂದೆಡೆ ನಾಡು-ನುಡಿಯನ್ನು ನಾಶಗೊಳಿಸುವಂತಹ [illegible] ನೀತಿಗಳನ್ನು [illegible] ಅಭಿವೃದ್ಧಿ ಸಾಧನೆಗಳು ಅಸಮಾನತೆ ನಿವಾರಣೆ ಮಾತುಗಳು ದ್ರೋಹವಲ್ಲದೆ ಬೇರೇನಿಲ್ಲ.

ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ಬಾಂಬ್?

ನವೆಂಬರ್ 1 ರಂದು ಶಾಸಕರ ಭವನದಲ್ಲಿ ಬಾಂಬ್ ಇಟ್ಟ ಪ್ರಕರಣ ರಾಜ್ಯದಲ್ಲಿ ಅದರಾಚೆಗೂ ಕುತೂಹಲ ಕೆರಳಿಸಿದೆ. ಇದನ್ನಿಟ್ಟಾತ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಎಂಬುದು ರೋಚಕತೆಯನ್ನು ಸೃಷ್ಟಿಸಿದೆ. ಬಾಂಬ್ ಜೊತೆಯಲ್ಲಿ ದೊರೆತ ಪತ್ರದಲ್ಲಿರುವಂತೆ ಅದು ರಾಜಕಾರಣಿಗಳ ಭ್ರಷ್ಟತೆ ವಿರುದ್ಧದ ಎಚ್ಚರಿಕೆ ಎಂದು ಪ್ರತಿಪಾದಿಸಲಾಗಿದೆ. ಈಗ ಬಂಧಿತನಾಗಿ, ವಿಚಾರಣೆಗೊಳಗಾದ ಆರೋಪಿ ಗುಲಬರ್ಗಾ ಜಿಲ್ಲೆಯ ನರೋಣದ ಠಾಣೆಯಲ್ಲಿ ಎಸ್.ಐ.ಯಾಗಿ ಕರ್ತವ್ಯದಲ್ಲಿದ್ದ. ಪೋಲಿಸ್ ಅಧಿಕಾರಿಗಳೂ ಸಹ ಹೇಳಿದಂತೆ ತಳಿಶಾಸ್ತ್ರದ ಪದವೀಧರ, ಪ್ರತಿಭಾವಂತ.

ರೋಸಿದ ಜನ

ಭ್ರಷ್ಟಾಚಾರದ ವಿರುದ್ಧ ಹೋರಾಟ- ಅದಕ್ಕಾಗಿ ಈ ಹೆಜ್ಜೆ ಎಂಬ ಮಾತು ಬಹಳಷ್ಟು ಜನರ ಗಮನ ಸೆಳೆದಿದೆ. ಕೂಡಲೇ ಶಾಲಾ -ಕಾಲೇಜುಗಳಲ್ಲಿ, ಸಾರ್ವಜನಿಕವಾಗಿ ಚರ್ಚಾಗೋಷ್ಠಿಗಳೂ ನಡೆದವು. ಈ ಕೃತ್ಯವನ್ನು ಬಹಿರಂಗವಾಗಿ ಬೆಂಬಲಿಸಿದವರು ಆತನ ಪರ ವಾದಿಸಲು ಮುಂದಾದವರು ಅನೇಕ. ಈ ಒಟ್ಟು ಪ್ರಕ್ರಿಯೆ ಗಮನಿಸಿದರೆ ಜನಸಾಮಾನ್ಯರು ಈ ಭ್ರಷ್ಟತೆ ವಿರುದ್ಧ ಅದೆಷ್ಟು ರೋಸಿಹೋಗಿದ್ದಾರೆ ಎಂಬುದು ಸ್ಪಷ್ಟ ಗೋಚರ.

ನಿಜ, ಭ್ರಷ್ಟಾಚಾರ ಇಂದು ಬ್ರಹ್ಮಾಂಡ ಸ್ವರೂಪ ಪಡೆದಿದೆ. ಈ ವ್ಯವಸ್ಥೆಯ ಪೋಷಕರಾದ ಬಂಡವಾಳಗಾರರು, ಭೂಮಾಲಿಕರು, - ಅಧಿಕಾರಸ್ಥ ರಾಜಕಾರಣಿಗಳು - ಅಧಿಕಾರಶಾಹಿಗಳು, ಕ್ರಿಮಿನಲ್‌ಗಳು ಇದು ಒಂದು ವಿಷವರ್ತುಲವಾಗಿ ಅವರಿಂದ ಪೋಷಿಸುತ್ತಾ ಹುಲುಸಾಗಿ ಬೆಳೆದು ವಿಷ ಉಣಿಸುತ್ತಿದೆ. ಜಾಗತೀಕರಣ- ಉದಾರೀಕರಣದ ಈ ಅವಧಿಯಲ್ಲಿ ಭ್ರಷ್ಟಾಚಾರವೆಂಬುದು ಹಿಂದೆಂದೂ ಕಂಡು ಕೇಳಿರದಷ್ಟು ವ್ಯಾಪಕ ಸ್ವರೂಪದಲ್ಲಿ ಬಿಚ್ಚಿಕೊಂಡಿರುವುದು ದಿಗಿಲು ಹುಟ್ಟಿಸುತ್ತಿದೆ. ಸದಾ ಭ್ರಷ್ಟತೆ ವಿರುದ್ಧ, ಸಮರಹೂಡುವ ಬಗ್ಗೆ ಮಾತನಾಡುತ್ತಿದ್ದ ಬಿಜೆಪಿ -ವಾಜಪೇಯಿ ಅಡ್ವಾನಿಯಾದಿಗಳು ಈ ಅಪರಾಧದ ಕೊಚ್ಚೆಯಲ್ಲಿ ಮುಳುಗೇಳುತ್ತಿರುವುದು, ಭ್ರಷ್ಟತೆ ವಿರುದ್ಧ ದೃಢ ಕ್ರಮವಹಿಸಬೇಕು ಎಂಬ ಕೃಷ್ಣರವರ ಸೋಗುಗಳು ಅದರ ವ್ಯಾಪಕ ಮುಖದ ದರ್ಶನವಷ್ಟೆ. ಎಡ ಪಕ್ಷಗಳನ್ನು ಹೊರತುಪಡಿಸಿ ಉಳಿದ ಬಹುತೇಕ ಪಕ್ಷಗಳು ಭ್ರಷ್ಟಾಚಾರದ ಹಗರಣಗಳಲ್ಲಿ ಭಾಗಿಯಾದ ಹಲವು ನಿದರ್ಶನಗಳು ಜನರ ಮುಂದೆ ಇವೆ.

ಇಲ್ಲಿ ಮುಖ್ಯ ಪ್ರಶ್ನೆ - ವ್ಯವಸ್ಥೆಯ ಒಂದು ಭಾಗವೇ ಆಗಿ- ವ್ಯಾಪಿಸಿರುವ ಭ್ರಷ್ಟಾಚಾರದ ವಿರುದ್ಧ ಇಂತಹ 'ಬಾಂಬ್'ಗಳ 'ಹೋರಾಟ' ಸ್ಥಿತಿಯನ್ನು ಬದಲಿಸೀತೆ? 'ಬದಲಿಸುತ್ತದೆ' ಎಂಬುದು ಅತ್ಯಂತ ಸಿನಿಕತನವಾಗುತ್ತದೆ. ಕಾರಣ-ಹಿನ್ನಲೆ ಎಷ್ಟೇ ಪ್ರಬಲವಿದ್ದರೂ ವ್ಯಕ್ತಿಗತ ಸಾಹಸದ ಈ ವಿಧಾನವನ್ನು ಒಪ್ಪಲು ಸಾಧ್ಯವೆ ಇಲ್ಲ. ಜನರ ಆಕ್ರೋಶವನ್ನು ವ್ಯವಸ್ಥೆಯ ವಿರುದ್ಧ ತಿರುಗಿಸುವ ಬದಲು, ಪ್ರಜಾಸತ್ತಾತ್ಮಕವಾದ ಹೋರಾಟದ ಮೂಲಕ ಸಾಧಿಸಿ ಜನರಲ್ಲಿ ಆತ್ಮವಿಶ್ವಾಸದ ಹೋರಾಟವನ್ನು, ಹೋರಾಡುವ ಶಕ್ತಿಯನ್ನು ಬೆಳೆಸುವ ಬದಲು ವೈಯಕ್ತಿಕ ದುಸ್ಸಾಹಸವನ್ನು ಹುಟ್ಟುಹಾಕುತ್ತದೆ. ಮತ್ತು ಜನ ಸಮೂಹದ ಸಮರಶೀಲ ಮನೋಭಾವವನ್ನು ನಾಶಗೊಳಿಸುತ್ತದೆ.

ದಿನಬೆಳಗಾಗುವುದರೊಳಗೆ ಹೀರೋ ಆಗಿರುವ ಎಸ್.ಐ. ಗಿರೀಶ್ ಲೋಕನಾಥ್ ಮಟ್ಟಣ್ಣನವರ್‌ನ ಹಿನ್ನಲೆ ಸುತ್ತ-ಮುತ್ತ ಕೆದಕಲು ತನಿಖೆ ಆರಂಭವಾಗಿದೆ. ಇದರಲ್ಲಿ ಆತ 'ಇಸ್ರಾ' ಎಂಬ ಸಂಘಟನೆಗೆ ಸೇರಿದವನೆಂದೂ, ಅಮ್ರಬಂಗಾಲಿ ಸಂಘಟನೆಯೊಂದಿಗೆ ಸಂಬಂಧವಿದ್ದು ಪ.ಬಂಗಾಳದ ಪುರುಲಿಯಾಕ್ಕೂ ಭೇಟಿ ನೀಡಿರುವನೆಂದು ತನಿಖೆ ಕೈಗೊಂಡಿರುವ ಪೋಲೀಸರು ವಿಷಯ ಬಹಿರಂಗ ಪಡಿಸಿದ್ದಾರೆ.

ರಾಜ್ಯದಲ್ಲಿ ಗುಪ್ತ ಚಟುವಟಿಕೆ ನಡೆಸುತ್ತಿರುವ ಉಗ್ರಗಾಮಿ 'ಆಮ್ರಬಂಗಾಲಿ' ಸಂಘಟನೆ ಬಗ್ಗೆ ಆಳ ತನಿಖೆ ನಡೆದು ಸಂಗತಿ ಹೊರಬರಬೇಕು



ಇದರ ಸತ್ಯಸತ್ಯತೆಗಳನ್ನು ಪರಿಶೀಲಿಸಬೇಕಿದೆ ನಿಜ, ಆದರೆ ಈ ಸಂಗತಿಗಳು ನಿಜಕ್ಕೂ ಗಂಭೀರವಾಗಿ ಪರಿಗಣಿಸಬೇಕಾದಂತಹವು. ಯಾಕೆಂದರೆ ಪ.ಬಂಗಾಳದಲ್ಲಿ ಹೆಚ್ಚು ನೆಲೆಯಿರುವ 'ಆನಂದಮಾರ್ಗಿ' ಎಂಬ ಭಯೋತ್ಪಾದಕ ಸಂಘಟನೆ (ಆಮ್ರಬಂಗಾಲಿ) ಕರ್ನಾಟಕದಲ್ಲಿಯೂ ಹಲವು ದಶಕಗಳಿಂದ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. ಈ ವರುಷಗಳಲ್ಲಿ ಬಹಿರಂಗ ಸ್ವರೂಪದ ಚಟುವಟಿಕೆಗಳಲ್ಲಿ ಕಂಡುಬರದೇ 'ಗುಪ್ತ ಚಟುವಟಿಕೆಗಳಲ್ಲಿ' ತೊಡಗಿರುವುದು ಕಾಣುತ್ತದೆ. ಆದ್ದರಿಂದ ಸರ್ಕಾರ ಗಿರೀಶ್ ಪ್ರಕರಣ ತನಿಖೆ ಮಾಡುವಾಗಲೇ ಮುಖ್ಯವಾಗಿ 'ಆಮ್ರಬಂಗಾಲಿ' ಉಗ್ರಗಾಮಿ ಸಂಘಟನೆ ಬಗ್ಗೆ ಆಳವಾದ ತನಿಖೆ ಕೈಗೊಂಡು ಸಂಗತಿಗಳನ್ನು ಬಹಿರಂಗ ಪಡಿಸಬೇಕು. ಇದು ತೀರಾ ತುರ್ತಾಗಿ ಆಗಬೇಕಾದ ಕೆಲಸ.

ಈಗ ಹೇಳಲಾಗಿರುವ ಕೆಲವು ಸಂಗತಿಗಳನ್ನೇ ಹಿಡಿದು ಭ್ರಷ್ಟಾಚಾರದ ಗಂಭೀರ ಸ್ಥಿತಿಯನ್ನು ಗೌಣಗೊಳಿಸುವುದು ಸಾಧ್ಯವಿಲ್ಲ. ಹಾಗೆಯೇ ಆತನ ವಿಧಾನ ಒಪ್ಪಲೂ ಅಸಾಧ್ಯ. ಈ ಶೋಷಣೆ-ಅಸಮಾನತೆಯ ವ್ಯವಸ್ಥೆಯ ಒಂದು ಪ್ರಧಾನ ಅಂಗವಾಗಿರುವ ಭ್ರಷ್ಟಾಚಾರವನ್ನು ನಿರ್ಮೂಲಗೊಳಿಸುವುದು ಮತ್ತು ಭ್ರಷ್ಟಾಚಾರಿಗಳನ್ನು ನಿರ್ಮೂಲನಗೊಳಿಸುವುದು 'ಬಾಂಬ್'ನಿಂದ ಸಾಧ್ಯ ಎಂಬುವಷ್ಟು ಅದು ದುರ್ಬಲ ಅಲ್ಲ. ಅದರ ವಿರುದ್ಧದ ಜನತೆಯ ಹೋರಾಟ ಹೆಜ್ಜೆ ಹೆಜ್ಜೆಗಳಲ್ಲಿಯೂ ನಡೆಸಬೇಕಾದ್ದು, ಅದರತ್ತ ಎಚ್ಚರ ಅತ್ಯಗತ್ಯ.

ಐಕ್ಯರಂಗ

4 ದಶಕಗಳ ಹಿಂದೆ

ನಿಂದೆ ಅವಹೇಳನಗಳಿಂದ ಕಾಂಗ್ರೆಸ್ಸಿನ ವಿಫಲತೆ ಮುಚ್ಚಲು ಸಾಧ್ಯವಿಲ್ಲ

ಕಳೆದ ಕೆಲವು ವರ್ಷಗಳಿಂದ ಆಹಾರ ಹಾಗೂ ಇತರ ಜನಾವಶ್ಯಕ ವಸ್ತುಗಳ ಬೆಲೆಗಳು ದಿನ ದಿನಕ್ಕೆ ಕ್ಷಣ ಕ್ಷಣಕ್ಕೆ ಏರುತ್ತಾ ಹೋಗುತ್ತಲಿದ್ದು, ಇನ್ನು ಕೂಡಾ ಏರುವ ಲಕ್ಷಣಗಳೇ ಕಾಣುತ್ತಲಿವೆ.

ಮೂರು ಪಂಚವಾರ್ಷಿಕ ಯೋಜನೆಗಳು ಕಳೆದುವು. ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಸಿದ್ಧತೆಯಲ್ಲಿದೆ ಕಾಂಗ್ರೆಸ್ಸು ಸರಕಾರ.

★ ★ ★

ಹಸಿದ ಜನತೆಯ ಕೇಳಿಕೆಗಳನ್ನು ವ್ಯಂಗ್ಯೋಕ್ತಿಗಳಿಂದ, ಪ್ರತಿಪಕ್ಷಗಳ ಅವಹೇಳನದಿಂದ ಹಿಂಗಿಸಲು ಸಾಧ್ಯವಾಗದು. ಕಾಂಗ್ರೆಸ್ ಸರಕಾರದ ಬಂಡವಾಳಶಾಹೀ ಪರ ಆರ್ಥಿಕ ಧೋರಣೆಯ ವೈಫಲ್ಯವನ್ನು ಮರೆಮಾಚಲು ಸಾಧ್ಯವಾಗದು.

★ ★ ★

ಎಂ.ಎಸ್. ದಾರೇಶ್ವರರ ಉಪವಾಸ ಸತ್ಯಾಗ್ರಹ

ತಮ್ಮನ್ನು ಕೇವಲ ರಾಜಕೀಯ ದ್ವೇಷದಿಂದ ಬಂಧಿಸಿ, ವಿಚಾರಣೆಯಿಲ್ಲದೆ ಜೈಲಿನಲ್ಲಿಟ್ಟಿದ್ದನ್ನು ಪ್ರತಿಭಟಿಸಿ, ತಮ್ಮನ್ನು ನ್ಯಾಯಾಂಗ ವಿಚಾರಣೆಗೆ ಗುರಿಪಡಿಸ ಬೇಕೆಂದೂ, ಇಲ್ಲವೇ ಕೂಡಲೇ ಬಿಡುಗಡೆ ಮಾಡಬೇಕೆಂದೂ, ಬಂಧನದ ಅವಧಿಯಲ್ಲಿ ತಮ್ಮ ಕುಟುಂಬದವರಿಗೆ ಜೀವನ ಸಾಗಿಸಲು ಭತ್ತೆ ಕೊಡಬೇಕೆಂಬ ಬೇಡಿಕೆಗಳನ್ನಿಟ್ಟು ತಾ. 25.8.65 ರಿಂದ ಕಾ। ಧಾರೇಶ್ವರರು ಉಪವಾಸ ಸತ್ಯಾಗ್ರಹ ಹೂಡಿದ್ದಾರೆ.

★ ★ ★

ಉಚ್ಚ ಅಧಿಕಾರಿಗಳಿಗೆ ತಿಂಗಳಿಗೆ 500 ರೂ. ಭಡ್ತಿ.

ಹಿರಿಯ ಐ.ಎ.ಎಸ್. ಅಧಿಕಾರಿಗಳ ಸಂಬಳವನ್ನು ತಿಂಗಳಿಗೆ ರೂ. 250 ರಿಂದ 500ರ ವರಗೆ ಏರಿಸಲು ಕೇಂದ್ರ ಸರಕಾರವು ತೀರ್ಮಾನಿಸಿದೆ. ಪಾಪ, ಈ ಅಧಿಕಾರಿಗಳಿಗೆ ಈಗ ಸಿಗುವ ಎರಡು -ಎರಡೂವರೆ ಸಾವಿರ ರೂಪಾಯಿ ಸಂಬಳ ತಿಂಗಳ ಖರ್ಚಿಗೆ ಸಾಲುವುದಿಲ್ಲವೆಂದು ತಿಳಿದು ಈ ಹೆಚ್ಚಳವಾಗಿದೆಯೆಂದು ಯಾರೂ ಭಾವಿಸುವುದು ಬೇಡ!

ಇಲ್ಲದವರಿಂದ ಕಸಿದುಕೊಂಡು ಉಳ್ಳವರಿಗೆ ಕೊಡುವುದೇ ಶಾಸ್ತ್ರಿ, ನಂದಾ ಸಮಾಜವಾದದ ತಿರುಳು.

★ ★ ★

ಅನ್ನ ಕೇಳಿದವರಿಗೆ ಗುಂಡು

ಕೊಲ್ಹಾಪುರದಲ್ಲಿ ಪೊಲೀಸ್ ಗೋಲೀಬಾರಿನಿಂದ ಐವರ ಮರಣ ಮಹಾರಾಷ್ಟ್ರದ್ಯಂತ ಸಾವಿರಾರು ಮಂದಿಯ ಬಂಧನ

★ ★ ★

ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ

ಬಳ್ಳಾರಿ ಜಿಲ್ಲೆಯ ಕಂಪಲಿ ಸಕ್ಕರೆ ಕಾರ್ಖಾನೆಯ ಒಂದು ಸಾವಿರ ಕಾರ್ಮಿಕರು ತಾ। 19-8-65ರಿಂದ ಮುಷ್ಕರವನ್ನಾರಂಭಿಸಿರುತ್ತಾರೆ. ಮಾಲಕರ ಹಾಗೂ ಸರಕಾರದ ಅಸಡ್ಡೆಯಿಂದಾಗಿ ಕೆಲಸಗಾರರು ಮುಷ್ಕರ ಹೂಡುವಂತಾಗಿದೆ.

★ ★ ★

ಶ್ರೀರಂಗ ಪಟ್ಟಣದ ಬಳಿ ಹಳ್ಳಿಗಳ ಮೇಲೆ 144 ಸೆಕ್ಷನ್ - ರೈತರನ್ನು ದಮನ ಮಾಡಲು ಜಮೀನ್ದಾರರಿಗೆ ಸರಕಾರದ ಬೆಂಬಲ.

★ ★ ★

ಹಾವು ಸಾಕಲು ಸಚಿವರ ಸಲಹೆ

ಸಲಹೆ ನೀಡುವುದರಲ್ಲಿ ಕಾಂಗ್ರೆಸ್ಸಿನ ಸಚಿವರಿಗೆ ನಾಯಕರಿಗೆ ಅಗ್ರಸ್ಥಾನ ಸಲ್ಲಬೇಕಾಗಿದೆ. ಕೇಂದ್ರ ಅರ್ಥ ಸಚಿವ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಮಂಡ್ಯದ ರೈತರ ವಿವಿಧೋದ್ದೇಶದ ಸಹಕಾರ ಸಂಘಕ್ಕೆ ಭೇಟಿಯಿತ್ತಾಗ ಸುಯೋಗ್ಯ ಸಲಹೆಯೊಂದನ್ನಿತ್ತಿದ್ದಾರೆ.

ಹೆಗ್ಗಣ ನಾಶಗೊಳಿಸಲು ವಿಷರಹಿತ ಹಾವುಗಳನ್ನು ಸಾಕಬೇಕೆಂಬುದೇ ಕೇಂದ್ರ ಅರ್ಥ ಸಚಿವರು ರೈತರಿಗಿತ್ತ ಈ ಸಲಹೆಯಾಗಿದೆ.

ಆ ಹಾವುಗಳ ಕಾಟ ಹೆಚ್ಚಾದಾಗ ಸಚಿವರು ಗರುಡಪಕ್ಷಿಯನ್ನು ಪೋಷಿಸಿರೆಂಬ ಸಲಹೆಯನ್ನೂ ಮಾಡಬಹುದು.

★ ಅಕ್ಟೋಬರ್ 1965

ಐಕ್ಯರಂಗ

ಹಾಸನದಲ್ಲೊಂದು ವಿಶಿಷ್ಟ ಕಾರ್ಯಕ್ರಮ


ಜನರ ನಡುವೆ ಅಪನಂಬಿಕೆ, ಹಗೆತನ ಹಬ್ಬಿಸುವುದೇ ವೃತ್ತಿಯಾಗಿಸಿಕೊಂಡಿರುವಾಗ, ಅದನ್ನು ತಿರಸ್ಕರಿಸಿ ಪ್ರೀತಿ ಹಂಚಿ, ವಿಶ್ವಾಸ ಬೆಳೆಸುವ ಸೌಹಾರ್ದತೆ ಅರಳಿಸಿದ ಕಾರ್ಯಕ್ರಮ ಹಾಸನದಲ್ಲಿ



ಪ್ರೀತಿ ಹಂಚೋಣ ಬನ್ನಿ...

ಸಂಘಪರಿವಾರ ದೇಶದ ಎಲ್ಲೆಡೆ ತ್ರಿಶೂಲ ಸಂಚುವ ಮೂಲಕ ಜನರಲ್ಲಿ ಕೋಮುದ್ವೇಷ ಹುಟ್ಟುಹಾಕಲು ಪ್ರಯತ್ನಿಸುತ್ತಿದೆ. ರಾಜ್ಯದಲ್ಲೂ ಬಾಬಾಬುಡನ್‌ಗಿರಿ ಸುತ್ತಮುತ್ತಲ ಹಳ್ಳಿಗಳಲ್ಲಿ ಮುಗ್ಧ ಯುವಜನರ ಕೈಗೆ ತ್ರಿಶೂಲ ಹಂಚುತ್ತಿದೆ. ಬಾಬಾಬುಡನ್‌ಗಿರಿಯನ್ನು ಮತ್ತೊಂದು ಅಯೋಧ್ಯೆಯನ್ನಾಗಿ ಮಾಡಲು ಸಂಘಪರಿವಾರ ಮತ್ತು ಬಿ.ಜೆ.ಪಿ ಹೊರಟಿದೆ.

1980 ರಲ್ಲಿ ಸ್ಥಾಪನೆಯಾಗಿ ದೇಶದ ದೊಡ್ಡ ಯುವ ಸಂಘಟನೆಯಾಗಿ ಬೆಳೆದು ನಿಂತಿರುವ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಪರಿವಾರದ ಇಂತಹ ಕುತಂತ್ರಗಳ ವಿರುದ್ಧವಾಗಿ ಮತ್ತು ಕೋಮು


ತ್ರಿಶೂಲ ತಿರಸ್ಕರಿಸಿ ಪ್ರೀತಿ ಬಯಸಿದ

ಸಾಮರಸ್ಯಕ್ಕಾಗಿ ದೇಶಾದ್ಯಂತ ನಿರಂತರವಾಗಿ ಹೋರಾಡುತ್ತಾ ಬಂದಿದೆ.

ಸಂಘಪರಿವಾರದ ಈ ತ್ರಿಶೂಲ ಹಂಚುವ ಕಾರ್ಯಕ್ರಮಕ್ಕೆ ಎದುರಾಗಿ ಜನರಲ್ಲಿ ಕೋಮು ಸೌಹಾರ್ದತೆ ಮೂಡಿಸಲು ಡಿ.ವೈ.ಎಫ್.ಐ ಹಾಸನದಲ್ಲಿ ಪ್ರೀತಿ ಹಂಚೋಣ ಬನ್ನಿ ಎಂಬ ವಿನೂತನ ಕಾರ್ಯಕ್ರಮ ನಡೆಸಿತು.

ಡಿ.ವೈ.ಎಫ್.ಐ.ನ 7ನೇ ಅಖಿಲ ಭಾರತ ಸಮ್ಮೇಳನ ನವೆಂಬರ್ 6 ರಿಂದ 9ರವರೆಗೆ ಪಂಜಾಬ್‌ನ ಐತಿಹಾಸಿಕ ನಗರ ಅಮೃತಸರದಲ್ಲಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಂಸ್ಥಾಪನಾ ದಿನದಂದು ನವೆಂಬರ್ 3 ರಂದು ಇಂತಹ ಒಂದು ಕಾರ್ಯಕ್ರಮವನ್ನು ಹಾಸನ ಜಿಲ್ಲಾಸಮಿತಿ ಹಮ್ಮಿಕೊಂಡಿತ್ತು 'ಎದೆ ತಟ್ಟಿ ಹೇಳು ನಾನೊಬ್ಬ ಭಾರತೀಯ', 'ನಮ್ಮ ದೇಹ ಛಿದ್ರವಾದರೂ ನಮ್ಮ ದೇಶ ಛಿದ್ರವಾಗಲು ಬಿಡೆವು', 'ಭಾರತೀಯತೆ ನಮ್ಮ ಧರ್ಮ, ಸಂವಿಧಾನ ಅದರ ಗ್ರಂಥ, 'ದ್ವೇಷಬೇಡ, ದೇಶಬೇಕು, ಪ್ರೀತಿ ಹಂಚೋಣ ಬನ್ನಿ', 'ತ್ರಿಶೂಲ ಲಾಠಿ ಬೇಡ, ಪ್ರೀತಿ ಬೇಕು, ಕೆಲಸ ಬೇಕು', ಎಂಬಿತ್ಯಾದಿ ಘೋಷಣೆಗಳುಳ್ಳ ಬ್ಯಾನರುಗಳು ನಗರದಾದ್ಯಂತ ಕೋಮು ಸಾಮರಸ್ಯವನ್ನು ಸಾರುತ್ತಿದ್ದವು. ಸವಾಲೆಂಬಂತೆ ಸಂಘ ಪರಿವಾರ ಈ ಬ್ಯಾನರ್‌ಗಳಿಗೆ ವಿರುದ್ಧ ತಮ್ಮದೇ ಘೋಷಣೆಗಳುಳ್ಳ ಬ್ಯಾನರ್ ಹಾಕಿದರು. 'ಎದೆ ತಟ್ಟಿ ಹೇಳು ನಾನೊಬ್ಬ ಹಿಂದು' ಎಂಬಂತ ಘೋಷಣೆಗಳಿದ್ದವು.

ಬೇಕಿರುವುದದು ಉತ್ತಮ ಬದುಕು

'ಪ್ರೀತಿ ಹಂಚೋಣ ಬನ್ನಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಪ್ರೊ.ಜಿ.ಕೆ. ಗೋವಿಂದರಾವ್, ದೇಶದ ಜನರು ಸುಖ, ಸಂತೋಷವಾಗಿ ಇರಬೇಕಾದರೆ ಅವರಿಗೆ ಆರೋಗ್ಯ, ಶಿಕ್ಷಣ, ಆಹಾರ, ವಸತಿ ಮತ್ತು ಉದ್ಯೋಗ ಮುಖ್ಯವೇ ಹೊರತು ತ್ರಿಶೂಲ, ಖಡ್ಗ, ಎ.ಕೆ. 47 ಬಂದೂಕುಗಳಲ್ಲ ಎಂದು ಹೇಳಿ ಸಂಘಪರಿವಾರದ ತ್ರಿಶೂಲ ಹಂಚುವ ಕಾರ್ಯವನ್ನು ಬಲವಾಗಿ ಖಂಡಿಸಿದರು. ನಮ್ಮ ಯುವಕರಿಗೆ ಕೋಮುಸಾಮರಸ್ಯ ಎಂದರೇನು ಎಂದು ನಮ್ಮ ಸಂವಿಧಾನದ ಮೂಲಕ ತಿಳಿಸಬೇಕಾಗಿದೆ. ಹಿಂದೆ ದೇಶ ಹೇಗಿತ್ತು, ಮುಂದೆ ಹೇಗಿರಬೇಕು ಎಂದು ಶಿಕ್ಷಣದ ಮೂಲಕ ತಿಳಿಸಬೇಕಾಗಿದೆ. ಪ್ರೀತಿ ಯಾರಿಗಿದೆ ಅವರು ಶಿಕ್ಷಣ ಆರೋಗ್ಯ ಕೊಡುತ್ತಾರೆ. ಯಾರಿಗೆ ಪ್ರೀತಿ ಇಲ್ಲವೋ ಅವರು ಕೊಲ್ಲುವುದಕ್ಕೆ ತ್ರಿಶೂಲ' ಎ.ಕೆ.47 ಬಂದೂಕು ಕೊಡುತ್ತಾರೆ ಎಂದು ಹೇಳಿದ ಅವರು ಭಾರತಕ್ಕೆ ಇಂದು ತೀರಾ ಅಗತ್ಯವಿರುವುದು ಕೋಮುಸೌಹಾರ್ಧತೆ ಭಯೋತ್ಪಾದಕರನ್ನು ಮತ್ತು ಎಲ್ಲಾ ಧರ್ಮಗಳ ಕೋಮುವಾದಿಗಳನ್ನು ನಾವಿಂದು ಸಾರಾಸಗಟಾಗಿ ತಿರಸ್ಕರಿಸಬೇಕೆಂದು ಕರೆ ನೀಡಿದರು.

ಮತಾಂಧರ ಬೆನ್ನಿಗೆ ನಿಲ್ಲಬಾರದು

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಐಕ್ಯರಂಗ ವಾರಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್‌ರವರು ಮಾತನಾಡುತ್ತಾ "ಪ್ರೀತಿ ಇಲ್ಲದ ಮೇಲೆ ಹೂವು ಅರಳಿತು ಹೇಗೆ?" ಎಂಬ ಜಿ.ಎಸ್.ಶಿವರುದ್ರಪ್ಪನವರ ಒಂದು ಕವಿತೆಯನ್ನು ಉಚ್ಚರಿಸುತ್ತಾ, ಕಬೀರ, ಸೂಫಿ ಸಂತರು ವಿವೇಕಾನಂದ ಎಲ್ಲರೂ ಎಲ್ಲ ಮತಗಳನ್ನು ಗೌರವಿಸಿದರು. ಅನ್ಯಾಯ ಅಸಮಾನತೆಗಳನ್ನು ದ್ವೇಷಿಸಿದರು. ಧಾರ್ಮಿಕ ದ್ವೇಷದಿಂದ ದೇಶದ ಐಕ್ಯತೆ ಸಾಧ್ಯವಿಲ್ಲ. ಅದು ಯಾವತ್ತೂ ವಿಭಜನೆಯ ಅಪಾಯದ ಅಂಚಿನಲ್ಲೆ ನಿಂತಿರುತ್ತದೆ. ದೇಶವನ್ನು ವಿಭಜಿಸುವುದಕ್ಕಿಂತ ಮೊದಲು ಮತಾಂದರು ಜನರ ಮನಸ್ಸನ್ನು ವಿಭಜಿಸುತ್ತಾರೆ. ನಾವು ಭಾರತೀಯರು ಯಾವ ಕಾರಣಕ್ಕೂ ಮತಾಂದಂತೆಯ ಬೆನ್ನಿಗೆ ನಿಲ್ಲಬಾರದು. ಎಲ್ಲ ಧರ್ಮ ಜಾತಿಯವರು ಒಟ್ಟಾಗಿ ಹೋರಾಡಬೇಕಾಗಿರುವುದು ಜಾಗತೀಕರಣದ ದುಷ್ಪರಿಣಾಮಗಳ, ಭಯೋತ್ಪಾದನೆ, ಕೋಮುವಾದ, ನಿರುದ್ಯೋಗ ಮತ್ತು ಬಡತನದ ವಿರುದ್ಧ ಈ ನಿಟ್ಟಿನಲ್ಲಿ ಪರಸ್ಪರ ನಂಬಿಕೆ ವಿಶ್ವಾಸಗಳನ್ನು ಗಟ್ಟಿಗೊಳಿಸಿಕೊಳ್ಳುತ್ತ ಪ್ರೀತಿ, ಸ್ನೇಹಗಳ ಮಹತ್ವವನ್ನು ಎತ್ತಿಹಿಡಿಯಬೇಕು ಎಂದರು. ಕೊನೆಯಲ್ಲಿ ಜಿ.ಕೆ.ಗೋವಿಂದರಾವ್‌ರವರು ನಗರದ ಹಿರಿಯ ನಾಗರೀಕರಿಗೆ ಗುಲಾಬಿ ಹೂ, ಸಿಹಿತಿಂಡಿ, ಡಿ.ವೈ.ಎಫ್.ಐ.ನ ಧ್ವಜ ಮತ್ತು 'ಪ್ರೀತಿ ಹಂಚೋಣ ಬನ್ನಿ' ಕಾರ್ಯಕ್ರಮದ ಬಗ್ಗೆ ಕೋಮು ಸೌಹಾರ್ದತೆಯ ಸಂದೇಶಗಳನ್ನು ಸಾರುವ ಕರಪತ್ರ ನೀಡುವುದರ ಮೂಲಕ ಪ್ರೀತಿ ಹಂಚುವ ಕಾರ್ಯಕ್ರಮವನ್ನು ಆರಂಭಿಸಿದರು. ತದನಂತರ ಕಾರ್ಯಕ್ರಮಕ್ಕೆ ಬಂದಿದ್ದ 500 ಕ್ಕೂ ಅಧಿಕ ಜನರಿಗೆ ಪ್ರೀತಿ ಹಂಚುವ ಕಾರ್ಯಕ್ರಮ ಮುಂದುವರಿಸಲಾಯ್ತು. ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ರಾಜ್‌ಕುಮಾರ್ ನಿರ್ವಹಣೆ ಮಾಡಿದರು. ಉಪಾಧ್ಯಕ್ಷರಾದ ಶಾವೆಲ್ ಹಮೀದ್ ಅಧ್ಯಕ್ಷತೆ ವಹಿಸಿದ್ದರು. ಕೆ.ಎಸ್.ರವಿಕುಮಾರ್ ಪ್ರಸ್ತಾವನೆ ಮಾಡಿದರು. ಗಿರೀಶ್ ಸ್ವಾಗತಿಸಿದರು. ಅರವಿಂದ ವಂದನಾರ್ಪಣೆ ಮಾಡಿದರು. ಅದೇ ದಿನ ಡಿ.ವೈ.ಎಫ್.ಐ ಕಛೇರಿ 'ಸೌಹಾರ್ದ'ದಲ್ಲಿ 7ನೇ ಅಖಿಲಭಾರತ ಸಮ್ಮೇಳನಕ್ಕೆ ಶುಭ ಕೋರಿ ದ್ವಜಗಳನ್ನು ಶಾವೆಲ್ ಹಮೀದ್ ದ್ವಜಾರೋಹಣ ಮಾಡಿದರು.

ಬೀಡಿ ಕಾರ್ಮಿಕರ ವಾರ್ಷಿಕ ಮಹಾಸಭೆ

ಅಕ್ಟೋಬರ್ 4 ರಂದು ಕುಂದಾಪುರ ಬೀಡಿ ವರ್ಕರ್ಸ್ ಯೂನಿಯನ್ (ಸಿಐಟಿಯು)ನ 15ನೇ ವಾರ್ಷಿಕ ಮಹಾಸಭೆಯ ಸಂಘದ ಅಧ್ಯಕ್ಷರಾದ ಕೆ.ಶಂಕರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆ.ಶಾರದಾರವರು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿಯವರಾದ ಮಹಾಬಲ ವಡೇರ ಹೋಬಳಿಯವರು ಒಂದು ವರ್ಷದ ಚಟುವಟಿಕೆಗಳ ವರದಿ ಹಾಗೂ ಲೆಕ್ಕಪತ್ರದ ವರದಿ ಮಂಡಿಸಿದರು. ವರದಿ ಮೇಲೆ ಚರ್ಚೆ ನಡೆಸಿ ವರದಿ ಅಂಗೀಕಾರವಾಯಿತು.

ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಸಿಐಟಿಯುವಿನ ಕರ್ನಾಟಕ ರಾಜ್ಯ ಅಧ್ಯಕ್ಷರಾದ ಬಿ.ಮಾಧವರವರು ಮಾತನಾಡಿ ಬೀಡಿ ಕಾರ್ಮಿಕರು ಎದುರಿಸುವ ಸಮಸ್ಯೆಗಳು ಮಾಲಕ ಮತ್ತು ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ವಿವರಿಸುತ್ತಾ ಸಂಘಟನೆಯನ್ನು ಬಲಿಷ್ಟಪಡಿಸಿ ಸಂಘಟಿತ ಹೋರಾಟಕ್ಕೆ ಸಿದ್ಧತೆ ನಡೆಸಬೇಕೆಂದರು.

ವಾರ್ಷಿಕ ಮಹಾಸಭೆಗೆ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಯು.ದಾಸ ಭಂಡಾರಿ ಡಿ.ವೈ.ಎಫ್.ಐ. ನ ಕಾರ್ಯದರ್ಶಿ ಅಶ್ವಥ ಕುಮಾರ್ ಹಾಗೂ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಮುತ್ತಯ್ಯ ಕನ್ನಾನ ಶುಭ ಕೋರಿ ಮಾತನಾಡಿದರು.

ಸಂಘದ ಅಧ್ಯಕ್ಷರಾಗಿ ಕೆ.ಶಂಕರ್ ಉಪಾಧ್ಯಕ್ಷರಾಗಿ ಕೆ.ಶಾರದ, ಗುಲಾಬಿ, ಬೇಬಿ ಶೆ... ಹಾಗೂ ಕಾರ್ಯದರ್ಶಿಯಾಗಿ ಮಹಾಬಲ ವಡೇರಹೋಬಳಿ, ಜೊತೆ ಕಾರ್ಯದರ್ಶಿಗಳಾಗಿ ಬೇಬಿ, ಜಲಜ, ನಾಗು, ಕೋಶಾಧಿಕಾರಿಯಾಗಿ ಸಿ.ನಾರಾಯಣನವರನ್ನು ಆಯ್ಕೆ ಮಾಡಲಾಯಿತು.

ಏಕರೂಪ ನಾಗರಿಕ ಸಂಹಿತೆ ಜ್ಯಾರಿಗೆ ಕಾಲ ಪರಿಪಕ್ವವಲ್ಲ


ಏಕರೂಪ ನಾಗರಿಕ ಸಂಹಿತೆ ಜ್ಯಾರಿಯಾಗಬೇಕೆಂಬುದು ಎಲ್ಲ ಬುದ್ಧಿ ಜೀವಿಗಳ ಒಮ್ಮತದ ಅಭಿಪ್ರಾಯವಾಗಿದೆ. ಆದರೆ ಅದನ್ನು ಜ್ಯಾರಿಗೊಳಿಸುವಲ್ಲಿ ಆತುರ ಸಲ್ಲದು. ಯಾವುದೇ ಮತ- ಧರ್ಮಗಳ ಭಾವನೆಗಳಿಗೆ ಘಾಸಿಯಾಗದಂತೆ ಅದನ್ನು ಜ್ಯಾರಿಗೆ ತರಬೇಕು. ಅದಕ್ಕಿಂತ ಮೊದಲು ಈ ದೇಶದ ಪ್ರತಿಯೊಬ್ಬ ಪ್ರಜೆ ಅಕ್ಷರಸ್ಥನಾಗಿ, ಯಾವುದೇ ಹೊಸ ಕಾನೂನನ್ನು ಜ್ಯಾರಿಗೆ ತರುವಂತಹ ಸಂದರ್ಭದಲ್ಲಿ ಅದರ ಬೇಕು-ಬೇಡಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವಷ್ಟು ಪ್ರಬುದ್ಧನಾಗಬೇಕು. ಇಲ್ಲದಿದ್ದಲ್ಲಿ ಕುರಿಗಳ ಮೇಲೆ ಕಾನೂನನ್ನು ಜ್ಯಾರಿ ಮಾಡಿದ ಹಾಗಾಗುತ್ತದೆ ಎಂದು ಭಾರತ-ಚೀನಾ ಗೆಳೆತನ ಸಂಘ ಮತ್ತು ಅಖಿಲ ಭಾರತ ನ್ಯಾಯವಾದಿಗಳ ಸಂಘದ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಯಶವಂತ ಮರೋಳಿ ನುಡಿದರು. ಅವರು ಉಡುಪಿ ಜಿಲ್ಲಾ ವಿಚಾರವಾದಿಗಳ ವೇದಿಕೆಯ ಆಸರೆಯಲ್ಲಿ ಜರುಗಿದ ಆರನೇ ತಿಂಗಳ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಯಾವುದೇ ಹೊಸ ಕಾನೂನಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದಾದಲ್ಲಿ ಅದು ಖಂಡಿತವಾಗಿಯೂ ಜ್ಯಾರಿಯಾಗಬೇಕು. ಆದರೆ ಏಕರೂಪ ನಾಗರಿಕ ಸಂಹಿತೆಯನ್ನು ಈಗ ಜ್ಯಾರಿಗೆ ತಂದಲ್ಲಿ ದೇಶದ ಅಖಂಡತೆ ಹೆಚ್ಚುತ್ತದೆ ಎಂಬುದು ಕೇವಲ ಭ್ರಮೆಯಾಗಿದೆ ಎಂದರು. ರಾಜ ಪುರೋಹಿತರು ರೂಪಿಸಿದ್ದೇ ಕಾನೂನು ಆಗಿಬಿಡುತ್ತಿತ್ತು. ನಾಗರಿಕತೆ ಬೆಳೆದಂತೆ ಧರ್ಮ ಮತ್ತು ಕಾನೂನು ಬೇರೆಯಾಯಿತು.

ಬ್ರಿಟಿಷರ ಆಳ್ವಿಕೆಯ ಕಾಲದಿಂದ ಅವರು ಹಲವಾರು ಏಕರೂಪಿ ಶಾಸನಗಳನ್ನು ಜ್ಯಾರಿಗೆ ತಂದಿದ್ದು, ಸತಿ ಪದ್ಧತಿ, ಬಾಲ್ಯವಿವಾಹ ಮುಂತಾದ ಧರ್ಮವು ಹೇರಿದ್ದ ಮೌಢ್ಯಗಳನ್ನು ದೂರಮಾಡಲು ಸಾಧ್ಯವಾಯಿತು. ನಾವು ಹಿಂದೂ ಕಾನೂನುಗಳ ಬಗ್ಗೆ ಗಮನ ಹರಿಸಿದಲ್ಲಿ ಹೆಚ್ಚಿನ ಕಾನೂನುಗಳಲ್ಲಿ ಏಕರೂಪತೆ ಇಲ್ಲ. ಹಿಂದುಗಳ ಒಂದೊಂದು ಜಾತಿ, ಪಂಗಡಗಳಿಗೆ ಒಂದೊಂದು ಕಾನೂನು ಲಗಾವು ಆಗುತ್ತದೆ. ಈ ಅಸಮಾನತೆಯೂ ತೊಲಗಬೇಕು.

ಹಲವಾರು ಮುಸ್ಲಿಂ ನಾಯಕರು ಏಕರೂಪ ನಾಗರಿಕ ಸಂಹಿತೆಯನ್ನು ಸ್ವಾಗತಿಸಿದ್ದಾರೆ ಮತ್ತು ಹಲವರು ಅದನ್ನು ವಿರೋಧಿಸಿದ್ದಾರೆ. ವಿರೋಧಿಸಿದವರು ಎತ್ತಿರುವ ಆಕ್ಷೇಪದ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಆ ಬಗ್ಗೆ ಚರ್ಚೆ ನಡೆಯಬೇಕು. ಏಕರೂಪ ನಾಗರಿಕ ಸಂಹಿತೆಯ ಚರ್ಚೆಗೆ ಹೊರಡುವ ಮೊದಲು ಅದರ ರೂಪರೇಷೆಗಳು ಇರಬೇಕು. ಅಂದರೆ ಅದರ ಕರಡು ಮೊದಲು ಸಿದ್ಧವಾಗಬೇಕು. ಅದಕ್ಕಿಂತಲೂ ಮುಖ್ಯವಾಗಿ ಅದನ್ನು ಜ್ಯಾರಿಗೆ ತರಲು ಆತುರದಿಂದಿರುವ ಪಕ್ಷದ ಹುನ್ನಾರ ಏನು ಎಂಬುದನ್ನು ನಾವು ಎಚ್ಚರಿಕೆಯಿಂದ ಗಮನಿಸಬೇಕು ಎಂದು ಅವರು ನುಡಿದರು.

ಬಳಿಕ ನಡೆದ ಸಂವಾದದಲ್ಲಿ ಪರ್ಕಳದ ನ್ಯಾಯವಾದಿ ಎಂ.ಎನ್. ಶ್ಯಾನುಭಾಗ್, ರಾಮ ದಿವಾಣ, ರಾಧಾಕೃಷ್ಣ ಶಾಸ್ತ್ರಿ ಮೊದಲಾದವರು ಭಾಗವಹಿಸಿದ್ದರು. ವೇದಿಕೆಯ ಅಧ್ಯಕ್ಷ ಡಾ। ಭಾಸ್ಕರ ಮಯ್ಯರವರು ಸಮನ್ವಯಕಾರರಾಗಿದ್ದರು. ಜತೆ ಕಾರ್ಯದರ್ಶಿ ಶ್ರೀ ರಾಮದಾಸ ಮಧ್ವ ನಗರ ಇವರು ವಂದಿಸಿದರು.



ಈ ಸಂದರ್ಭದಲ್ಲಿ ವೇದಿಕೆಯ ಸದಸ್ಯ ಕೋಟೇಶ್ವರ ಬೀಜಾಡಿ ಕೇಶವ ಶೇಟ್ ಮತ್ತು ಅವರ ಪತ್ನಿ ಕಾವೇರಿ ಶೇಟ್‌ರವರು ತಮ್ಮ ಮರಣೋತ್ತರ ದೇಹದಾನವನ್ನು ಘೋಷಿಸಿದರು.

ಬಿಜೆಪಿಯ ಅಶ್ವಮೇಧದ ಕುದುರೆಗೆ ಕುಡುಗೋಲು ಸುತ್ತಿಗೆ ತಡೆ

ಸೀತಾರಾಂ ಯೆಚೂರಿ

ಬಿಜೆಪಿಯು ಇಡೀ ದೇಶವನ್ನು ತನ್ನ ಕೋಮುವಾದಿ-ಫ್ಯಾಸಿಸ್ಟ್ ಶಕ್ತಿಗೆ ಒಳಪಡಿಸಲು ಅಶ್ವಮೇಧದ ಕುದುರೆಯನ್ನು ಬಿಟ್ಟಿದೆ. ಆದರೆ ರೈತಾಪಿ ಜನತೆಯ ಶಕ್ತಿಯು ಸಂಕೇತವಾದ ಕುಡುಗೋಲು ಮತ್ತು ಕಾರ್ಮಿಕ ವರ್ಗದ ಸಂಕೇತವಾದ ಸುತ್ತಿಗೆ ಐಕ್ಯ ಶಕ್ತಿಯು ಈ ಕುದುರೆಯನ್ನು ತಡೆದು ಕಟ್ಟಿಹಾಕಲಿವೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಮ ಯೆಚೂರಿಯವರು ಘೋಷಿಸಿದಾಗ ಮಂಗಳೂರಿನ ನೆಹರೂ ಮೈದಾನದಲ್ಲಿ ಕಿಕ್ಕಿರಿದು ನೆರೆದಿದ್ದ ಸಾವಿರ ಸಾವಿರಗಟ್ಟಲೆ ಕಾರ್ಮಿಕರು ಮತ್ತು ರೈತರನ್ನೊಳಗೊಂಡ ಜನಸಮೂಹ ಹರ್ಷೋದ್ಗಾರದಿಂದ ಸ್ವಾಗತಿಸಿತು. ಜಾಗತೀಕರಣ ಮತ್ತು ಕೋಮುವಾದದ ವಿರುದ್ಧ ಅಕ್ಟೋಬರ್ 31 ರಂದು ಜರುಗಿದ ಕೋಮು ಸೌಹಾರ್ದತಾ ರ್ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಕರಾವಳಿ ಜಿಲ್ಲೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮುವಾದಿಗಳ ಕರಾಳ ನರ್ತನದಿಂದ ಜಿಗುಪ್ಸೆಗೊಂಡಿದ್ದ ಜಾತ್ಯಾತೀತ ಶಕ್ತಿಗಳಲ್ಲಿ ಸೀತಾರಾಮ ಯೆಚೂರಿಯವರ ಭಾಷಣವು ಹೊಸ ಚೈತನ್ಯವನ್ನು ನೀಡಿತು.

ಕೋಮುದ್ವೇಷ ಸತತ ಹಿಂಸಾಚಾರಗಳಿಂದ ತತ್ತರಿಸಿದ ಕರಾವಳಿಯಲ್ಲಿ ಜನದ್ರೋಹಿ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಬೃಹತ್ ರ್ಯಾಲಿ ನಡೆದು ದೇಶಪ್ರೇಮಿ, ಸೌಹಾರ್ದತೆ ಬಯಸುವ ಶಕ್ತಿಗಳಲ್ಲಿ ಸಮರಶೀಲ ಉತ್ಸಾಹ ಉಕ್ಕಿಸಿತು. ಆದರತ್ತ ಒಂದು ನೋಟ



ಕಾಂಗ್ರೆಸ್ ಪ್ರಹಸನ

ಕೋಮುವಾದವನ್ನು ನಿಗ್ರಹಿಸುವುದರಲ್ಲಿ ಕಾಂಗ್ರೆಸ್ಸಿನ ವೈಫಲ್ಯವನ್ನು ಎತ್ತಿ ತೋರಿಸುತ್ತಾ, ಮಧ್ಯ ಪ್ರದೇಶದಲ್ಲಿ ಬಿಜೆಪಿ ನಾಯಕಿ ಉಮಾಭಾರತಿಯವರು ಹನುಮಂತನ ವಿಗ್ರಹಕ್ಕೆ ಅರ್ಪಿಸಿದ ಕೇಕ್‌ನಲ್ಲಿ ಮೊಟ್ಟೆ ಇದೆ ಎಂಬ ವಿವಾದವನ್ನೆಬ್ಬಿಸಿದ ಅಲ್ಲಿನ ಮುಖ್ಯಮಂತ್ರಿ ದಿಗ್ವಿಜಯಸಿಂಗ್ ಅವರು ಬಿಜೆಪಿ ವಿರುದ್ಧದ ಹೋರಾಟವನ್ನು ಒಂದು ಪ್ರಹಸನವನ್ನಾಗಿ ಮಾಡಿದ್ದಾರೆ ಎಂದು ಲೇವಡಿ ಮಾಡಿದರು. ಗೋವಿನ ಸಂರಕ್ಷಣೆಯ ಕುರಿತು ಸಂಘ ಪರಿವಾರದವರು ಕೂಗೆಬ್ಬಿಸುತ್ತಿರುವಾಗಲೇ, ಭಾರತದ ಮಾರುಕಟ್ಟೆಗಳಲ್ಲಿ ವಿದೇಶಗಳ ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪ ವ್ಯಾಪಕವಾಗಿ ಮಾರಾಟವಾಗುತ್ತಿರುವುದನ್ನು ಎತ್ತಿ ತೋರಿಸಿದ ಯೆಚೂರಿಯವರು, ಸರಕಾರದ ಆರ್ಥಿಕ ನೀತಿಗಳೇ ಗೋವನ್ನು ಕೊಲ್ಲುತ್ತಿವೆ ಎಂದರು. ನಮ್ಮ ದೇಶದ ಹಾಲಿನ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲವೆಂದಾದರೆ ನಮ್ಮ ಗೋವುಗಳು ಮೇವಿಲ್ಲದೆ ಸಾಯುತ್ತವೆ ಎಂದು ಅವರು ವಿವರಿಸಿದರು.

ಮತಾಂಧರು

ಹಿಂದೂ ಕೋಮುವಾದ ಮತ್ತು ಮುಸ್ಲಿಂ ಮೂಲಭೂತಗಳೆರಡೂ ಒಂದನ್ನೊಂದು ಪೋಷಿಸುತ್ತವೆ ಎಂದು ಹೇಳಿದ ಅವರು, ಅಯೋಧ್ಯೆಗೆ ಪ್ರತೀಕಾರವಾಗಿ ಗೋಧ್ರಾ, ಗೋಧ್ರಾಗೆ ಪ್ರತಿಕಾರವಾಗಿ ಪ್ರಭುತ್ವ ಪ್ರಾಯೋಜಿತ ಗುಜರಾತ್ ನರಮೇಧ, ಗುಜರಾತ್‌ಗೆ ಪ್ರತೀಕಾರವಾಗಿ ಮುಂಬೈ ಬಾಂಬ್ ಸ್ಫೋಟ, ಹೀಗೆ ಸರಣಿ ಹಿಂಸಾಕೃತ್ಯಗಳು ನಡೆಯುತ್ತಿವೆ. ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಕೋಮುವಾದಗಳೆರಡನ್ನೂ ಸೋಲಿಸಲು ಜಾತ್ಯಾತೀತ ಶಕ್ತಿಗಳ ಪ್ರಬಲ ಐಕ್ಯತೆಯನ್ನು ಬೆಳೆಸಬೇಕೆಂದು ಅವರು ಕರೆ ನೀಡಿದರು.

ಹೇರಿಕೆ ಅಲ್ಲ

ದೇಶದ ವೈವಿದ್ಯತೆಯಲ್ಲಿ ಏಕತೆಯನ್ನು ಸಾಧಿಸಬೇಕೇ ಹೊರತು ಏಕರೂಪದ ಸಂಸ್ಕೃತಿಯನ್ನು ಜನರ ಮೇಲೆ ಹೇರುವುದರಿಂದಲ್ಲ. ಓಣಂ ಹಬ್ಬವನ್ನು ಬಲಿ ಚಕ್ರವರ್ತಿಯ ಆಗಮನದ ದಿನವನ್ನಾಗಿ ಆಚರಿಸುವ ಕೇರಳದವರು ಹಿಂದೂಗಳು, ಅಂತೆಯೇ ಆ ದಿನವನ್ನು ಬಲಿ ಚಕ್ರವರ್ತಿಯ ಸಂಹಾರದ ದಿನವನ್ನಾಗಿ ಆಚರಿಸುವ ಉತ್ತರಭಾರತದವರೂ ಹಿಂದುಗಳು ಇವರಲ್ಲಿ ಯಾರು ಉತ್ತಮ ಹಿಂದುಗಳು ಎಂದು ಅಡ್ವಾಣಿಗಳೂ ತೊಗಾಡಿಯಾಗಳೂ ಹೇಳಬೇಕಾಗಿಲ್ಲ ಎಂದು ಯೆಚೂರಿಯವರು ಹೇಳಿದರು. ಹಿಂದೂ ರಾಷ್ಟ್ರದ ಹೆಸರಿನಲ್ಲಿ ಫ್ಯಾಸಿಸ್ಟ್ ಆಡಳಿತವನ್ನು ಸ್ಥಾಪಿಸಲು ಹೊರಟಿರುವ ಸಂಘ ಪರಿವಾರದವರಿಗೆ ಧರ್ಮ ಮತ್ತು ದೇವರು ಒಂದು ನೆಪಮಾತ್ರ ಎಂದು ಅವರು ಹೇಳಿದರು. ರೈತರ ಆತ್ಮಹತ್ಯೆಗಳಿಗೆ ಸರಕಾರದ ನೀತಿಗಳೇ ಕಾರಣ ಎಂದು ವಿವರಿಸಿದ ಅವರು, ಸರಕಾರದ ಗೋದಾಮುಗಳಲ್ಲಿದ್ದ 60 ಮಿಲಿಯ ಟನ್ ಆಹಾರಧಾನ್ಯಗಳನ್ನು ಕೂಲಿಗಾಗಿ ಕಾಳು ಯೋಜನೆಯ ಮೂಲಕ ಬರಗಾಲಪೀಡಿತ ಜನರಿಗೆ ವಿತರಿಸುವ ಬದಲಾಗಿ ಅದನ್ನು ತೀರಾ ಕಡಿಮೆ ಬೆಲೆಗೆ ವಿದೇಶಗಳಿಗೆ ರಫ್ತು ಮಾಡಿದ್ದು ಈಗ ದಾಸ್ತಾನು 22 ಮಿಲಿಯ ಟನ್‌ಗಳಿಗೆ ಇಳಿದಿದೆ ಎಂದು ವಿವರಿಸಿದರು.

ಸಾರ್ವಜನಿಕ ಕ್ಷೇತ್ರ ಈ ದೇಶದ ಜನತೆಯ ಆಸ್ತಿ. ಸರಕಾರ ಅದರ ಮ್ಯಾನೇಜರ್ ಮಾತ್ರ. ಮಾಲಕನ ಅನುಮತಿ ಇಲ್ಲದೆ ಮ್ಯಾನೇಜರ್ ಆಸ್ತಿಯನ್ನು ಮಾರಾಟ ಮಾಡಿದರೆ ಮ್ಯಾನೇಜರ್‌ನನ್ನೇ ಕಿತ್ತು ಹಾಕಬೇಕು ಎಂದು ಅವರು ಹೇಳಿದರು. ರಾಜ್ಯಕಾರ್ಯದರ್ಶಿ ಜಿ.ಎನ್.ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು ಕೋಮುವಾದಿಗಳ ವಿರುದ್ಧ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ನೀತಿಯ ವಿರುದ್ಧ ದೃಢವಾದ ಹೋರಾಟವನ್ನು ಮುಂದುವರಿಸಬೇಕೆಂದು ಕರೆ ನೀಡಿದು.

ಸಾರ್ವಜನಿಕ ಸಭೆಗೆ ಮೊದಲು ನಗರದ ಬಾವುಟ ಗುಡ್ಡೆಯಿಂದ ಹೊರಟ ಬೃಹತ್ ಮೆರವಣಿಗೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನೂ ಒಳಗೊಂಡು ಕಾರ್ಮಿಕರು, ರೈತರು ಮತ್ತು ಇತರ ವಿಭಾಗಗಳ ಜನರು ಭಾಗವಹಿಸಿದ್ದರು.

- ವಸಂತ ಆಚಾರಿ



‘ಸಹಜೀವನದ ಅಗತ್ಯ ನೆನಪಿಸುವ ಕೆಲಸ’

ಲೇಖಕರೊಬ್ಬರ ಪ್ರತಿಕ್ರಿಯೆ

ಮಾನ್ಯ ಬಿ.ಮಾಧವರವರಿಗೆ ನಮನ,

ಶ್ರೀ ಸೀತಾರಾಮ ಯೆಚೂರಿಯವರಂಥ ಪ್ರಸಿದ್ಧ ನೇತಾರರನ್ನು ಮಂಗಳೂರಿಗೆ ಕರೆಸಿ ಕೋಮು ಬೇಗೆಯಲ್ಲಿ ನಲುಗುತ್ತಿರುವ ದಕ್ಷಿಣ ಕನ್ನಡ ಜನಕ್ಕೆ ಸಹಜೀವನದ ಅಗತ್ಯವನ್ನು ನೆನಪಿಸುವ ಕೆಲಸ ಮಾಡಿದಿರಿ. ನಿಜಕ್ಕೂ ಒಳ್ಳೆಯ ಕೆಲಸ ಮಾಡಿದಿರಿ. ಅವಕಾಶವಾದಿ ರಾಜಕಾರಣಿಗಳು ನಮ್ಮ ಈ ನಾಡಿನಲ್ಲಿ ಇತಿಹಾಸದ ಉದ್ದಕ್ಕೂ ಉಳಿದುಕೊಂಡಿದ್ದ ಸಹಜೀವನ ವ್ಯವಸ್ಥೆಯನ್ನೇ ನಾಶ ಮಾಡಲು ಹೊರಟಿದ್ದಾರೆ. ಅದರಲ್ಲಿ ಯಶಸ್ಸನ್ನು ಗಳಿಸಿದ್ದಾರೆ. ಸೀತಾರಾಮ ಯೆಚೂರಿ ಯವರು ನಿಜವಾಗಿಯೂ ಧೀಮಂತನೇತಾರ. ಹಲವು ಗೋಷ್ಠಿಗಳಲ್ಲಿ ಅವರ ಮಾತು ಕೇಳಿದ್ದೇನೆ. ದುಡಿಯುವ ವರ್ಗಕ್ಕೆ ಕೋಮುದ್ವೇಷ ಬೇಕಾಗಿಲ್ಲ. ಅವರಿಗೆ ದುಡಿಯುವ ಅವಕಾಶ ಬೇಕು. ನೆಮ್ಮದಿ ಬೇಕು. ಈ ಸಿದ್ಧಾಂತವನ್ನು ಒಪ್ಪಿಕೊಂಡ ನಾನು ಬದುಕಿನ ಉದ್ದಕ್ಕೂ ಈ ಉದ್ದೇಶದ ಪ್ರಚಾರ ಕ್ಕಾಗಿಯೇ ಲೇಖನಿಯನ್ನು ಬಳಸಿಕೊಂಡವನು.

ದುಡಿಯುವ ವರ್ಗದ ಹಕ್ಕಿಗಾಗಿ ನೀವು ನಡೆಸುತ್ತಿರುವ ಪ್ರಯತ್ನವನ್ನು ನಾನು ಎಂದೋ ಗಮನಿಸಿದ್ದೇನೆ, ಮೆಚ್ಚಿದ್ದೇನೆ. ನಿಮ್ಮ ಪ್ರಯತ್ನಕ್ಕೆ ನನ್ನಂಥಹ ಬರಹಗಾರರ ಬೆಂಬಲ ಇದ್ದೇ ಇದೆ. ಕಾರ್ಮಿಕ ವರ್ಗ ಮತ್ತು ಜನಸಾಮಾನ್ಯರಲ್ಲಿ ಸಹಜೀವನದ ಅಗತ್ಯದ ಕುರಿತು ಮತ್ತು ಈಗಿನ ರಾಜಕಾರಣಿಗಳಿಂದಾಗಿ ಜನಸಾಮಾನ್ಯರು ಅನುಭವಿಸಬೇಕಾಗಿ ಬಂದ ಬವಣೆಯ ಕುರಿತು ಜಾಗೃತಿ ಉಂಟುಮಾಡುವ ಕೆಲಸ ಈಗ ಆಗಬೇಕಾಗಿದೆ. ಈ ದಿಸೆಯಲ್ಲಿ ನಿಮ್ಮಂಥ [illegible] ಪ್ರಸ್ತುತರಾಗುತ್ತಾರೆ. ನಿಮಗೆ ಯಶಸ್ಸು ದೊರೆಯಲೆಂದು ಹಾರೈಸುತ್ತೇನೆ.

-ವಿಶ್ವಾಸದ

ಪಾ. ಸಂಜೀವ ಬೋಳಾರ

ಆಂಧ್ರದವ ಎನ್ನಲು ಭಯ

“ನನ್ನನ್ನು ನೀವು ಯಾವ ರಾಜ್ಯದವರೆಂದು ಕೇಳಿದರೆ, ಹಿಂದೆ ಆಂಧ್ರ ಪ್ರದೇಶವನೆಂದು ಹೆಮ್ಮೆಯಿಂದ ಹೇಳುತ್ತಿದ್ದೆ. ಆದರೆ ಈಗ ಹಾಗೆ ಹೇಳಲು ಭಯವಾಗುತ್ತಿದೆ. ಯಾಕೆಂದರೆ ಹಿಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಹವಾಲ ಹಗರಣದಲ್ಲಿ ಭಾಗಿಯಾಗಿದ್ದರು. ಅವರು ಆಂಧ್ರದವರು. ಬಿಜೆಪಿಯ ಹಿಂದಿನ ಅಧ್ಯಕ್ಷ ಬಂಗಾರು(ಚಿನ್ನ) ಲಕ್ಷ್ಮಣ ತೆಹಲ್ಕಾ ಹಗರಣದಲ್ಲಿ ಕುಖ್ಯಾತರಾದವರು. ಅವರು ಆಂಧ್ರದವರು. ಈಗಿನ ಬಿಜೆಪಿ ಅಧ್ಯಕ್ಷ ವೆಂಕಯ್ಯ ನಾಯ್ಡು ದಲಿತರಿಗೆ ಮೀಸಲಿರಿಸಿರುವ ಜಮೀನು ಕಬಳಿಸಿರುವವರು, ಅವರೂ ಆಂಧ್ರದವರು. ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಇವರೆಲ್ಲರೂ ಆಂಧ್ರದವರಾಗಿರುವುದರಿಂದ, ನಾನು ಆಂಧ್ರದವ ಎನ್ನುವುದಕ್ಕಿಂತ ಭಾರತೀಯ (Indian) ಎನ್ನುತ್ತೇನೆ” ಎಂದು ಭ್ರಷ್ಟಾಚಾರದ ಬಗ್ಗೆ ಮಾರ್ಮಿಕವಾಗಿ ಮಾತನಾಡಿದರು.

●●●

ಜನಮೆಚ್ಚುಗೆ

ಸಂಘಪರಿವಾರದ ಪ್ರಾಯೋಜಿತ ಕೋಮು ಗಲಭೆಗಳಿಂದ, ಭಯಭೀತ ದಕ್ಷಿಣಕನ್ನಡ ಜಿಲ್ಲೆಯ ಜನತೆಗೆ ಸಿಪಿಐ(ಎಂ) ಪಕ್ಷ ಹಮ್ಮಿಕೊಂಡ ಕೋಮುಸೌಹಾರ್ದ ರ್ಯಾಲಿ ಜನಮೆಚ್ಚುಗೆ ಪಡೆಯಿತು. ಜಿಲ್ಲೆಯ ಪ್ರಮುಖ ರಾಜಕೀಯ ಪಕ್ಷವಾದ ಕಾಂಗ್ರೆಸ್ ಪಕ್ಷ ಜಾತ್ಯಾತೀತ ಪಕ್ಷವೆಂದು ಹೇಳಿಕೊಳ್ಳುತ್ತಿದ್ದರೂ ಜನತೆಯ ಮಧ್ಯೆ ಕೋಮುಸೌಹಾರ್ದತೆಗಾಗಿ ಯಾವುದೇ ಕಾರ್ಯಕ್ರಮ ನೀಡದಿರುವ ಸಂದರ್ಭದಲ್ಲಿ ನಡೆದ ಕೋಮುಸೌಹಾರ್ದ ರ್ಯಾಲಿ ಎಲ್ಲಾ ವರ್ಗದ ಜನರಿಂದಲೂ ಪ್ರಶಂಸಿಸಲ್ಪಟ್ಟಿತು.

●●●

ದಕ್ಷಿಣಕನ್ನಡ ಜಿಲ್ಲೆಗೆ ಪ್ರಥಮಬಾರಿ ಭೇಟಿ ಇತ್ತ ಕಾಂ.ಸೀತಾರಾಮ ಯೆಚೂರಿಯವರು ತಮ್ಮ ಭಾಷಣದ ಮಧ್ಯೆ ಸುಂದರ ನಗರವಾದ ಮಂಗಳೂರಿನಲ್ಲಿ ಕೋಮುಸೌಹಾರ್ದ ರ್ಯಾಲಿ ಸಂಘಟಿಸಿದುದಕ್ಕೆ, ರ್ಯಾಲಿಯಲ್ಲಿ ಭಾಗವಹಿಸಿದ ಜನತೆಗೆ ವಿಶೇಷ ಅಭಿನಂದನೆ ನೀಡಿದರು.

●●●

ದೇಶಪ್ರೇಮಿಗಳಲ್ಲ

ಅಕ್ಟೋಬರ್ ತಿಂಗಳ 31 ಮಂಗಳೂರು ನಗರದ ಜಾತ್ಯಾತೀತವಾದಿಗಳಿಗೆ ಸಂಭ್ರಮದ ದಿನ. ಕೋಮುವಾದದ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದು ಜನಜಾಗೃತ ಮೂಡಿಸಿದ ಮಾರ್ಕ್ಸ್‌ವಾದಿ ಚಿಂತಕ ಸೀತಾರಾಮ ಯೆಚೂರಿ ಮಂಗಳೂರಿಗೆ ಬರುವುದು ಒಂದು ಕಡೆಯಾದರೆ, ಕೋಮುವಾದದ ವಿರುದ್ಧ ಸೆಟೆದು ನಿಲ್ಲಲು ಕಮ್ಯುನಿಸ್ಟರಿಗೆ ಇನ್ನಷ್ಟು ಸ್ಫೂರ್ತಿ ನೀಡಿದ ಕೋಮುಸೌಹಾರ್ದ ರ್ಯಾಲಿ ಇನ್ನೊಂದು ಕಡೆ.

●●●

ಕೋಮುವಾದಿಗಳಿಂದ ಭ್ರಮನಿರಸಗೊಂಡಿರುವ ಮಂಗಳೂರು ನಗರದಲ್ಲಿ ಕೋಮುಸಾಮರಸ್ಯದ ಸಿಂಚನಗೊಳಿಸಿದ ಸಿ.ಪಿ.ಐ(ಎಂ) ರ್ಯಾಲಿ ಬಗ್ಗೆ ಪತ್ರಿಕೆಗಳಿಂದ, ಚಿಂತಕರಿಂದ ಶ್ಲಾಘನೆಯ ಪ್ರವಾಹ.

ಜನಮನ ಗೆದ್ದ ಯೆಚೂರಿ

ಸೀತಾರಾಮ ಯೇಚೂರಿಯವರ ಚಿಂತನೆಯನ್ನು ಬುದ್ಧಿಜೀವಿಗಳೊಂದಿಗೆ ಹಂಚಿಕೊಳ್ಳಲು ಅಕ್ಟೋಬರ್ 31 ರ ಸಂಜೆ ‘ಸಮುದಾಯ’ ದಿಂದ ‘ಅಂತರ್ರಾಷ್ಟ್ರೀಯ ಪರಿಸ್ಥಿತಿ ಮತ್ತು ದೇಶದ ವಿದೇಶಾಂಗ ನೀತಿ’ ಎಂಬ ವಿಷಯದಲ್ಲಿ ವಿಚಾರಸಂಕಿರಣ ಒಂದನ್ನು ಹಮ್ಮಿಕೊಂಡು ಸೀತಾರಾಮ ಯೆಚೂರಿಯವರು ಭಾಷಣ ಮಾಡಿದರು. ಕೇವಲ ಒಂದೇ ಒಂದು ದಿನದಲ್ಲಿ ಸಂಘಟಿಸಿದ್ದ ವಿಚಾರಸಂಕಿರಣ ಸಭಾಂಗಣ ಪೂರ್ತಿ ತುಂಬಿ ತುಳುಕಿತು. ಮಾತ್ರವಲ್ಲದೆ ತಮ್ಮ ಅಭಿಪ್ರಾಯ ವನ್ನು ಅವರೊಂದಿಗೆ ಹಂಚಿ ಜನಮನಗೆದ್ದರು. ಪ್ರೊಫೆಸರ್ಸ್, ಬರಹಗಾರರು, ಸಾಹಿತಿಗಳು, ವಕೀಲರು, ವೈದ್ಯರು, ನಿವೃತ್ತ ಪೋಲೀಸ್ ಆಫೀಸರ್ಸ್ ಕಾರ್ಮಿಕ ವರ್ಗದ ನಾಯಕನ ಮಾತುಗಳಿಂದ ಪ್ರಭಾವಿತರಾಗಿ ಸಂಘಟಕರನ್ನು ಬೆನ್ನುತಟ್ಟಿದರು.

ಅಕ್ಟೋಬರ್ ಮಹಾಕ್ರಾಂತಿ

ಹಾದಿ ತೋರುವ ಮುಂಬೆಳಕು

ಮಹಾನ್ ಅಕ್ಟೋಬರ್ ಕ್ರಾಂತಿ ಕೇವಲ ಇತಿಹಾಸದ ಒಂದು ಆಕಸ್ಮಿಕ ಘಟನೆಯಲ್ಲ. ಇಡೀ ಜಗದ ಇತಿಹಾಸದ ಗತಿಯನ್ನೇ ಬದಲಿಸಿದ, ಜಗದ್ವಾಪಿ ಅಚ್ಚಳಿಯದ ಪ್ರಭಾವ ಬೀರಿದ, ವರ್ಗಶೋಷಣೆಗಳಿಗೆ ಅಂತ್ಯ ಹಾಡಿ, ಕಾರ್ಮಿಕ ವರ್ಗದ ನೇತೃತ್ವದಲ್ಲಿ ದಾರಿತೋರಿದ ಕ್ರಾಂತಿಕಾರಿ ಘಟನೆ. ಈ ಕ್ರಾಂತಿಯ ಸತ್ಯವನ್ನು ಗುರುತಿಸುತ್ತಾ, ಅದು ಭಾರತದ ಮೇಲೆ ಬೀರಿದ ಅಚ್ಚಳಿಯದ ಪ್ರಭಾವ ಮತ್ತು ಸಾಮ್ರಾಜ್ಯಶಾಹಿ ಜಾಗತೀಕರಣದ ಹೊಸ ಆಕ್ರಮಣದ ಸಂದರ್ಭದಲ್ಲಿ ಅದರ ಪ್ರಸ್ತುತತೆ ಕುರಿತು ವಿಶ್ಲೇಷಿಸಿದ್ದಾರೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಹರ್‌ಕಿಶನ್‌ಸಿಂಗ್ ಸುರ್ಜಿತ್

ಅಕ್ಟೋಬರ್ 17, 1917 ರಂದು ನಡೆದ ಸಮಾಜವಾದಿ ಮಹಾಕ್ರಾಂತಿಯು ಇತಿಹಾಸದ ಮಹಾಘಟನೆ, ಇದರ ನಂತರ ಅನೇಕ ಮಹತ್ವದ ಬೆಳವಣಿಗೆಗಳು ಸಂಭವಿಸಿವೆ. ನಾವು ಸಾವಿರಾರು ವರ್ಷಗಳ ಕಾಲ ಕಂಡಿದ್ದ ವರ್ಗವ್ಯವಸ್ಥೆಗೆ ಈ ಘಟನೆಯು ಅಂತ್ಯ ಹಾಡಿತು. ಗುಲಾಮಿ ವ್ಯವಸ್ಥೆಯಿಂದ ಪಾಳೆಗಾರಿಗೆ ಬಂಡವಾಳಶಾಹಿಗೆ ನಂತರ ಸಮಾಜವಾದಿ ವ್ಯವಸ್ಥೆ ನೋಡಿದ್ದೇವೆ. ಆದರೆ ಯಾವುದೂ ತನ್ನಿಂತಾನೇ ನಡೆದದ್ದಲ್ಲ, ಪ್ರತಿಯೊಂದೂ ಹೋರಾಟದಿಂದ ಸಂಭವಿಸಿದ್ದೆ.

ಕ್ರಾಂತಿಕಾರಿ ಹೆಜ್ಜೆ

ಈ ಕ್ರಾಂತಿಯ ಯಶಸ್ಸಿನಿಂದಾಗಿ ವರ್ಗವ್ಯವಸ್ಥೆಯನ್ನು ಕೊನೆಗಾಣಿಸಿ ಉತ್ಪಾದನೆಗೆ ಎಲ್ಲರೂ ಕಾಣಿಕೆ ನೀಡುವ, ದುಡಿಮೆಗನುಗುಣವಾಗಿ ಗಳಿಸುವ ವ್ಯವಸ್ಥೆಯ ನಿರ್ಮಾಣ ಸಾಧ್ಯವಾಯಿತು. ಎಲ್ಲರೂ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ದುಡಿಯುವ ಮತ್ತು ಅಗತ್ಯಕ್ಕನುಗುಣವಾಗಿ ಪಡೆಯುವ ಸಮಾಜವ್ಯವಸ್ಥೆಯೆಡೆಗೆ ಇದೊಂದು ಹೆಜ್ಜೆ.


ಇಂದಿನ ವರ್ಗ ಸಮಾಜದಲ್ಲಿ 'ಕಲ್ಯಾಣ ರಾಜ್ಯದ' ಹೆಸರಿನಲ್ಲಿ ಕಾಣುತ್ತಿರುವ ಅನೇಕ ಅಂಶಗಳಿಗೆ ಆ ವ್ಯವಸ್ಥೆಯೇ ಬೀಜಹಾಕಿದ್ದು, ಅನಕ್ಷರತೆಯನ್ನು ಕೊನೆಗಾಣಿಸುವುದು ಮತ್ತು ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡುವ ಇಂದಿನ ನಮ್ಮ ಸಮಾಜದ ಬೀಜಗಳನ್ನು ರಷ್ಯಾದ ಕ್ರಾಂತಿಯಲ್ಲೇ ಬಿತ್ತನೆ ಕಂಡವು.

ಮಾರುಕಟ್ಟೆ ಅರಾಜಕತೆ ಹಾಗೆಯೇ ಮಾರುಕಟ್ಟೆಯನ್ನು ಆಕ್ರಮಿಸಿ ಜನತೆಯಿಂದ ಅಪಾರ ಕೊಳ್ಳೆ ಹೊಡೆಯುವ ಏಕಸ್ವಾಮ್ಯ ವ್ಯವಸ್ಥೆಗೂ ಯೋಜಿತ ಆರ್ಥಿಕತೆಯ ಪರ್ಯಾಯದ ಬೀಜವಿತ್ತಿದ್ದು ಈ ಕ್ರಾಂತಿಯೇ. ಹಾಗೆಯೇ ಯೋಜಿತ ಆರ್ಥಿಕತೆಯ ಮೂಲಕ ಜನರಿಗೆ ಅಪಾರ ಸೌಲಭ್ಯಗಳನ್ನು ನೀಡಿ ನಿರುದ್ಯೋಗವನ್ನು ನಿರ್ಮೂಲನೆಗೊಳಿಸುವ ವ್ಯವಸ್ಥೆಗೂ ಬೀಜ ಬಿತ್ತಿದ್ದು ರಷ್ಯಾದ ಕ್ರಾಂತಿಯೆ.

ಉಚಿತ ಸಾರ್ವಜನಿಕ ಆರೋಗ್ಯ, ಸರ್ಕಾರಿ ಕೈಗಾರಿಕೆ, ಸಹಕಾರಿಗಳು, ವೃದ್ಧಾಪ್ಯವೇತನ, ನಿವೇಷನ, ಪಂಚಾಯತಿ ವ್ಯವಸ್ಥೆ ಜಗತ್ತಿನಾದ್ಯಂತ ರೈತ ಮತ್ತು ಕಾರ್ಮಿಕ ವರ್ಗಗಳ ಐಕ್ಯತೆ ಈ ಕ್ರಾಂತಿಯ ಯಶಸ್ಸಿನಿಂದಲೇ ತಮ್ಮ ಆರಂಭ ಪಡೆದವು. ರಷ್ಯಾದ ಯಶಸ್ಸಿನಿಂದಾಗಿ ಜಗತ್ತಿನ ಅನೇಕ ದೇಶಗಳಲ್ಲಿ ವ್ಯಾಪಕವಾಗಿ ಈ ಅಂಶಗಳನ್ನು ಜಾರಿಗೊಳಿಸಲಾಯಿತು. ಇಲ್ಲದಿದ್ದರೆ ಇವು ಕೇವಲ ಪ್ರಯೋಗಗಳು ಮಾತ್ರವಾಗಿಬಿಡುತ್ತಿದ್ದವು.


ನಮಗೆ ಜಗತ್ತಿನ ಏಕಸ್ವಾಮ್ಯಗಳು ಮತ್ತು ಪ್ರಭುಗಳಿಗೆ ಸವಾಲೊಡ್ಡಲು ಈ ಕ್ರಾಂತಿ ಅವಕಾಶಗಳನ್ನು ಸೃಷ್ಟಿಸಿತು. ವಸಾಹತುಗಳಿಲ್ಲದ ಹಾಗೂ ಯುದ್ಧಗಳಿಲ್ಲದ ಜಗತ್ತಿಗೆ ಬಾಗಿಲು ತೆರೆಯಿತು. ಬ್ರೆಸ್ಟ್ ಲಿಪೋನ್ಸ್ಕ್ ಒಪ್ಪಂದ ಮತ್ತು ರಷ್ಯಾದ ಕ್ರಾಂತಿ ಒಂದನೇ ಮಹಾಯುದ್ಧವನ್ನು ಕೊನೆಗಾಣಿಸಲು ಸಹಾಯ ಮಾಡಿದವು. ಹಿಟ್ಲರನ ಸೇನೆಯ ಶೇ.75 ರಷ್ಟನ್ನು ಅದರ ನೆಲದಲ್ಲೇ ಸೋಲಿಸಿದ ಸೋವಿಯತ್ ಯೂನಿಯನ್ ಪ್ರತಿರೋಧವಿಲ್ಲದಿದ್ದರೆ ಎರಡನೇ ಮಹಾಯುದ್ಧವನ್ನು ಗೆಲ್ಲಲು ಹಾಗೂ ಫ್ಯಾಸಿಸಂನ್ನು ಸೋಲಿಸಲು ಆಗುತ್ತಿರಲಿಲ್ಲ. ಎರಡನೇ ಮಹಾಯುದ್ಧದ ನಂತರ ರಷ್ಯಾದ ಅಸ್ತಿತ್ವದಿಂದಾಗಿಯೇ ಮೂರನೇ ಯುದ್ಧ ನಡೆಯುವುದನ್ನು ಮತ್ತು ಅದು ಸಮರ ನಡೆಯುವುದನ್ನೂ ತಪ್ಪಿಸಲಾಯಿತು. 1985 ರಲ್ಲಿ ರಷ್ಯಾವು ಏಕಪಕ್ಷೀಯವಾಗಿ ಅಣುಪರೀಕ್ಷೆಯನ್ನು ಅಂತಿಮಗೊಳಿಸುವ ಘೋಷಣೆ ಮಾಡಿತು.

ಭಾರತದ ವಿಮೋಚನೆಗೆ ಕಾಣಿಕೆ



ಕ್ರಾಂತಿಯ ಹರಿಕಾರ ಲೆನಿನ್

ಭಾರತದಲ್ಲಿರುವ ನಮಗೆ ಸೋವಿಯತ್ ರಷ್ಯಾವು ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ದೊಡ್ಡ ಸ್ಫೂರ್ತಿ ನೀಡಿತು. ಸೋವಿಯತ್ ರಷ್ಯಾದ ಉದಯಕ್ಕೆ ಮೊದಲು ವಸಾಹತು ದೇಶಗಳು ವಸಾಹತುಶಾಹಿಗಳನ್ನು ಕಿತ್ತೊಗೆದರೂ ಬೇರೆಯವರ ವಶವಾಗುತ್ತಿದ್ದವು. ಆಟೋಮನ್ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಸೋಲಿಸಿದರೂ ಮೊದಲನೇ ಮಹಾಯುದ್ಧದ ಸಮಯದಲ್ಲಿ ಅರಬರು ಫ್ರೆಂಚ್ ಮತ್ತು ಬ್ರಿಟೀಷರ ಪಾಲಾದರು. ಮತ್ತೆ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡುವಂತಾಯಿತು. ಈಗ ಪ್ಯಾಲೆಸ್ಟೇನ್ ಪ್ರತ್ಯೇಕನಾಡಿಗಾಗಿ ನಡೆಯುತ್ತಿರುವ ಹೋರಾಟವು ಇನ್ನು ಮುಗಿಯದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಭಾಗ. ಅಮೇರಿಕಾ ಇರಾಕನ್ನು ಆಕ್ರಮಿಸಿರುವುದು ಮತ್ತು ಇಸ್ರೇಲಿನ ಜಿಯೋನಿಸ್ಟ್ ಪ್ರಭುತ್ವಕ್ಕೆ ಸಹಾಯ ಮಾಡುತ್ತಿರುವುದು ಈ ಹೋರಾಟ ಮತ್ತಷ್ಟು ಪ್ರಮುಖವಾಗಿದೆ.



ರಷ್ಯಾದ ಕ್ರಾಂತಿಗೆ ಸಂಬಂಧಿಸಿದ ಮತ್ತೊಂದು ಮುಖ್ಯ ಸಂಗತಿಯೆಂದರೆ ಎರಡನೇ ಮಹಾಯುದ್ಧದ ನಂತರ ಸುಮಾರು 60 ದೇಶಗಳನ್ನು ವಿಮೋಚನೆಗೊಳಿಸಿದ ವಿಮೋಚನಾ ಹೋರಾಟ ಬೆಳೆದುಬಂದದ್ದು. ಸಣ್ಣ ದೇಶಗಳಾದ ವಿಯೆಟ್ನಾಮ್, ಕ್ಯೂಬಾ, ಉತ್ತರಕೋರಿಯಾ, ಲಾಓಸ್ ಗಳು ಸೋತ ಶಕ್ತಿಗಳಾದ ಜರ್ಮನಿ, ಇಟಲಿ, ಜಪಾನಿನ ಬಿಗಿಹಿಡಿತಕ್ಕೆ ಸಡ್ಡು ಹೊಡೆದದ್ದು ಮಾತ್ರವಲ್ಲ. ವಿಜಯೀ ಶಕ್ತಿಗಳಾದ ಬ್ರಿಟನ್, ಫ್ರಾನ್ಸ್, ಅಮೇರಿಕಾವನ್ನು ಎದುರಿಸಿ ನಿಲ್ಲಲು ಸಾಧ್ಯವಾಗಿದೆ. ಕಳೆದ ಆರು ದಶಕಗಳಿಂದ ನಡೆಯುತ್ತಿರುವ ವಿಮೋಚನಾ ಹೋರಾಟ ಈಗಲೂ ಮುಂದುವರೆದಿದೆ. ಈ ಪ್ರಕ್ರಿಯೆಯ ಯಶಸ್ಸು ಹೇಗೆ ಅಲ್ಲಿಯ ಜನತೆ ಮತ್ತು ದುಡಿಯುವ ವರ್ಗ ಹೋರಾಡುತ್ತದೆ ಮತ್ತು ಸಮಾಜವಾದದೆಡೆಗೆ ಮುನ್ನಡೆಯುತ್ತವೆ ಎಂಬುದರ ಮೇಲೆ ನಿಂತಿದೆ.



ಹಿಟ್ಲರ್ ಫ್ಯಾಸಿಸ್ಟ್ ಸೈನ್ಯವನ್ನು ಪುಡಿಗುಟ್ಟಿ ಯಶಸ್ವಿಯಾದ ಉತ್ಸಾಹದಲ್ಲಿ ಸ್ಟಾಲಿನ್ ಗ್ರಾಡ್ ವಿಜಯಿ[illegible]

ಅಕ್ಟೋಬರ್ ಕ್ರಾಂತಿಯು ತನ್ನ ಆರಂಭದಿಂದಲೂ ನಮ್ಮ ರಾಷ್ಟ್ರೀಯ ಚಳುವಳಿಯ ವಿಶಾಲ ವಿಭಾಗಗಳಿಗೆ ಸ್ಫೂರ್ತಿ ನೀಡಿದೆ. ಬುದ್ಧಿಜೀವಿಗಳಾದ ಟಾಗೂರ್, ಪ್ರೇಮ್‌ಚಂದ್, ರಾಹುಲ್ ಸಾಂಕೃತ್ಯಾಯನ, ರಾಷ್ಟ್ರೀಯ ಚಳುವಳಿಯ ನಾಯಕರುಗಳಾದ ನೆಹರು ಹಾಗೂ ಸೈಫುದ್ದೀನ್ ಕಿಚ್‌ಲೇವ್, ಕ್ರಾಂತಿಕಾರಿಗಳಾದ ಭಗತ್‌ಸಿಂಗ್, ಸೋಹನಸಿಂಗ್ ಭಕ್ನಾ, ಶಿವವರ್ಮಾ, ಇಎಂಎಸ್, ಎ.ಕೆ.ಜಿ ಅಂತಹ ನೂರಾರು ಜನರಿಗೆ ಸ್ಫೂರ್ತಿಯಾಗಿದೆ. ಅವರಲ್ಲಿ ಹಲವರು ಸೋವಿಯತ್ ರಷ್ಯಾದ ಆದರ್ಶಗಳಿಂದ ಪ್ರೇರೇಪಣೆ ಮಾತ್ರವೇ ಪಡೆಯಲಿಲ್ಲ, ಅಲ್ಲಿ ಹೇಗೆ ಕಾರ್ಮಿಕ ವರ್ಗವನ್ನು ಸಂಘಟಿಸಲಾಗುತ್ತಿದೆ, ರೈತ-ಕಾರ್ಮಿಕರ ಐಕ್ಯತೆಯನ್ನು ಬೆಸೆಯಲಾಗುತ್ತಿದೆ ಎಂಬುದನ್ನು ನೋಡಿ, ಇಲ್ಲಿಯೂ ಅದನ್ನು ಅನುಸರಿಸಿ ರಾಷ್ಟ್ರೀಯ ವಿಮೋಚನಾ ಚಳುವಳಿಯು ಸ್ಥಗಿತಗೊಳ್ಳದೆ ಒಂದು ರೀತಿಯ ಶೋಷಕರಿಂದ ಮತ್ತೊಬ್ಬರಿಗೆ ಹಸ್ತಾಂತರ ವಾಗದಂತೆ ತಡೆಯಲು ಸಾಧ್ಯವಾಗಿದೆ. ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಭಾರತದ ಜನತೆಯನ್ನು ಸಂಘಟಿಸುವುದರ ಅಗತ್ಯವನ್ನು ಅವರು ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದರು.

ಮಾರ್ಕ್ಸ್‌ವಾದ, ಲೆನಿನ್‌ವಾದದ ಕ್ರಾಂತಿಕ್ರಾರಿ ಅನ್ವಯ



ನಾವು ಬಯಸಿದಂತೆಯೇ ಎಲ್ಲವೂ ನಡೆಯುವುದಿಲ್ಲ, ಇತಿಹಾಸ ವೈಪರಿತ್ಯಗಳನ್ನು ಕಾಣುತ್ತದೆ ಎಂಬುದನ್ನು ನಾವು ತಿಳಿಯಬೇಕು. ಪರಿಮಿತಗಳಿರುತ್ತವೆ. ಆದರೆ ಅವ್ಯಾವೂ ಮಾರ್ಕ್ಸ್ ಮತ್ತು ಏಂಗೆಲ್ಸರ ವೈಜ್ಞಾನಿಕ ತಿಳುವಳಿಕೆಯನ್ನು ತಪ್ಪೆಂದು ಸಾಬೀತು ಪಡಿಸಲಾರವು. ಈ ತಿಳುವಳಿಕೆ ಯನ್ನು ಸರಿಯಾಗಿ ಅನ್ವಯಿಸಿ ದಲ್ಲಿ ಅದಕ್ಕೆ ಅಪಾರ ಯಶಸ್ಸು ಖಂಡಿತ ಎಂಬುದನ್ನು ಕಳೆದೊಂದು ಶತಮಾನದ ಇತಿಹಾಸ ಸಾಧಿಸಿ ತೋರಿಸಿದೆ.

ಅವಕಾಶ ಕಲ್ಪಿಸಿ ಶೋಷಣೆ ಮತ್ತು ಮರ್ದನವಿಲ್ಲದೆ ಜಾಗತಿಕ ಶಾಂತಿಯೆಡೆಗೆ ಸ್ಪಷ್ಟವಾಗಿ ಮುನ್ನಡೆಯಿತು. ಆದ್ದರಿಂದಲೇ ಭಾರತೀಯ ಕ್ರಾಂತಿಕಾರಿಗಳು ತಮ್ಮ ರಾಷ್ಟ್ರೀಯ ವಿಮೋಚನಾ ಚಳುವಳಿಯನ್ನು ಕಾರ್ಮಿಕ- ರೈತರ ನೇತೃತ್ವದ ಸಮಾಜವಾದಿ

ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಸಿದ್ಧಾಂತವನ್ನು ಸರಿಯಾಗಿ ಒಂದು ದೇಶಕ್ಕೆ ಅನ್ವಯಿಸಿದುದರ ಮೊದಲ ಉದಾಹರಣೆ ರಷ್ಯಾದ ಕ್ರಾಂತಿ. ಈ ಕ್ರಾಂತಿಯ ಯಶಸ್ಸು ಚೀನಾ, ಕ್ಯೂಬಾ, ವಿಯೇಟ್ನಾಮ್, ಉತ್ತರಕೋರಿಯಾವನ್ನು ಒಳಗೊಂಡಂತೆ ಜಗತ್ತಿನಾದ್ಯಂತ ವ್ಯಾಪಕ ಪರಿಣಾಮ ಬೀರಿತು. ಎರಡನೇ ಮಹಾಯುದ್ಧದ ನಂತರ, ಪೂರ್ವ ಯುರೋಪಿನ ಅನೇಕ ದೇಶಗಳಲ್ಲಿ ಬಂದ ಸಮಾಜವಾದಿ ಪ್ರವೃತ್ತಿಯಿಂದಾಗಿ ಬಲಿಷ್ಠ ಸಮಾಜವಾದಿ ಬಣವನ್ನು ರಚಿಸಲು ಸಾಧ್ಯವಾಯಿತು. ಇದು ಜಾಗತಿಕವಾಗಿ ಬಲಾಬಲ ಸಮಾಜವಾದದೆಡೆಗೆ ಹೆಚ್ಚುವಂತಾಯಿತು. ಆದರೆ ಈ ಸಮಾಜವಾದಿ ಬಣದೊಳಗೆ ಸಾಮ್ರಾಜ್ಯಶಾಹಿಗಳ ನುಸುಳುವಿಕೆಯನ್ನು ತಡೆಯಲಾಗಲಿಲ್ಲ ಎನ್ನುವುದು ಸತ್ಯ, ತಪ್ಪುಗಳಾದವು ನಿಜ. ಆದರೆ ತಪ್ಪುಗಳು ಸಂಭವಿಸಿದ ತಕ್ಷಣ ವೈಜ್ಞಾನಿಕ ತತ್ವದ ನಿರಾಕರಣೆ ಸಾಧ್ಯವಿಲ್ಲ.

ದ್ವಂದ್ವಮಾನ ಮತ್ತು ಚಾರಿತ್ರಿಕ ಭೌತವಾದ ನಿಯಮಗಳ ಪ್ರಕಾರ ಜಗತ್ತಿನಲ್ಲಿ ಪ್ರತಿಯೊಂದೂ ಬದಲಾವಣೆಗೊಳಪಡುತ್ತವೆ. ಬೆಳೆಯುವ ಮತ್ತು ನಶಿಸುವ ವಿರುದ್ಧ ಅಂಶಗಳು ಈ ಪ್ರಕ್ರಿಯೆಯಲ್ಲಿರುತ್ತವೆ. ಅವು ವೈರುದ್ಯಗಳಾಗಿ ಬೆಳೆದಾಗ ನಶಿಸಿಹೋಗುವುದನ್ನು ಕಿತ್ತೊಗೆದು ಅಲ್ಲಿ ಹೊಸದನ್ನು ಸೃಷ್ಟಿಸಬೇಕಾಗುತ್ತದೆ. ಕಾಲಕ್ಕನುಗುಣವಾಗಿ ಎದುರಾಗುವ ಹೊಸ ವೈರುದ್ಯಗಳನ್ನು ಪರಿಹರಿಸಬೇಕಾಗುತ್ತದೆ.

ಸಾಮ್ರಾಜ್ಯಶಾಹಿಯನ್ನು ಗುರಿಯಾಗಿಸಿಕೊಂಡು ಎಲ್ಲಾ ರಾಷ್ಟ್ರೀಯತೆಗಳನ್ನು ಸಮಾನವಾಗಿ ಪರಿಗಣಿಸಿ ತಮ್ಮ ರಾಷ್ಟ್ರೀಯ ವಿಮೋಚನಾ ಚಳುವಳಿಗೆ

ಪುಟ 9 ಕ್ಕೆ

ಕೀಕೃತ ಟೆಲಿಕಾಂ ಲೈಸೆನ್ಸ್ ಅಥವಾ ರಿಲೆಯನ್ಸ್‌ಗೆ ಏನು ಬೇಕಾದರೂ ಮಾಡಲು ಲೈಸೆನ್ಸ್?

ರಿಲೆಯನ್ಸ್ ಕೊಬ್ಬಿಸಲು ಲೆಸೆನ್ಸ್?!

ಟೆಲಿಕಾಂ ಕ್ಷೇತ್ರದಲ್ಲಿನ ನಿಯಮಗಳನ್ನು ರಿಲೆಯನ್ಸ್‌ನಂತಹ ಖಾಸಗಿ ಕಂಪನಿಗಳು ಸತತವಾಗಿ ಉಲ್ಲಂಘಿಸುತ್ತಲೇ ಬರುತ್ತಿವೆ. ಈಚೆಗೆ ಸರ್ಕಾರ ದಿಢೀರನೇ ಏಕೀಕೃತ ಲೈಸೆನ್ಸ್ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿರುವುದು ಹಲವು ಅನುಮಾನಗಳನ್ನು ಹುಟ್ಟಿಸಿದೆ. ರಿಲೆಯನ್ಸ್‌ನಂತಹ ಕಂಪನಿಗಳನ್ನು ಕೊಬ್ಬಿ ಬೆಳೆಸುವುದೇ ಪರಮ ಧ್ಯೇಯವಾಗಿರುವಾಗ ಜನಸಾಮಾನ್ಯರ ಹಿತವೆಲ್ಲಿ?



ಮಂತ್ರಿ ಅಪ್ರಾಮಾಣಿಕತೆಯಿಂದ ಸರಿಯಾದ ನೀತಿಗೇ ಕುತ್ತು

ಸರ್ಕಾರ ಏಕೀಕೃತ ಟೆಲಿಕಾಂ ಲೈಸೆನ್ಸ್ ನೀತಿ ...ಷಿಸಿದೆ. ಇದರ ಪ್ರಕಾರ ಮೂಲ (ಸ್ಥಿರ) ...ನು ಮತ್ತು ಮೊಬೈಲ್ ಸೇವೆಯನ್ನು ಒಂದೇ ...ನ್ಸ್‌ನಲ್ಲಿ ಒದಗಿಸಲು ಅವಕಾಶ ಇರುತ್ತದೆ. ...ನ ಸ್ಥಿರ ಅಥವಾ ಮೊಬೈಲ್ ಸೇವಾ ಲೈಸೆನ್ಸ್ ...ದವರು ಈ ಏಕೀಕೃತ ಲೈಸೆನ್ಸ್‌ಗೆ ...ಲಾಯಿಸಬಹುದು. ಸರ್ಕಾರದ ಟೆಲಿಕಾಂ ...ಸಗೀಕರಣದ ನೀತಿ ಮತ್ತು ಖಾಸಗಿ ...ಸಕ್ತಿಗಳನ್ನು ಓಲೈಸುವ ನೀತಿ ತಂದಿಟ್ಟ ಸ್ಥಿತಿಗೂ, ...ತ್ರಿಕ ದೃಷ್ಟಿಯಿಂದಲೂ ಇದು ಸರಿಯಾದ ...ಯೆ. ಆದರೆ ಟೆಲಿಕಾಂ ಟ್ರಿಬ್ಯುನಲ್- ...ಯನ್ಸ್ ತನ್ನ ಲೈಸೆನ್ಸ್ ಷರತ್ತುಗಳನ್ನು ...ಂಘಿಸಿದೆ ಎಂಬ ತೀರ್ಪು ಕೊಟ್ಟ ನಂತರ ...ತುರಿಯಿಂದ ಈ ನೀತಿ ಪ್ರಕಟಿಸಿದ ಮಂತ್ರಿ ... ಮಂತ್ರಿಮಂಡಲದ 'ಅಪ್ರಾಮಾಣಿಕತೆ' ಕಣ್ಣಿಗೆ ...ದು ಕಾಣುವಂಥದ್ದು. ಅದೇ ಆ ನೀತಿಗೆ ...ಬಹುದು. ಸರ್ಕಾರ ಟೆಲಿಕಾಂ ಕ್ಷೇತ್ರದ ...ಣಿಗೆ ಮತ್ತು ಬಳಕೆದಾರರ ಹಿತರಕ್ಷಣೆ ...ು, ರಿಲೆಯನ್ಸ್‌ನ್ನು ರಕ್ಷಿಸಲು ಬೆಳೆಸಲು ...ಟ್ಟಿದೆ ಅಂತ ಕಾಣುತ್ತದೆ. ಶ್ರೀಸಾಮಾನ್ಯ ...ವ ಮೂಲಭೂತ ಸ್ಥಿರ ಫೋನ್ ಸೇವೆಯ ...ತ್ತು ಗ್ರಾಮೀಣ ಪ್ರದೇಶಕ್ಕೆ ದೂರಸಂಪರ್ಕದ ...ದ ಬಗ್ಗೆ ಈ ನೀತಿಯಲ್ಲಿ ಯಾವುದೇ ...ಸವಿಲ್ಲ.

...ಮಾನಕ್ಕೆ ಆಸ್ಪದ

...ೇಂದ್ರ ಮಂತ್ರಿಮಂಡಲ ಏಕೀಕೃತ ...ಸಂಪರ್ಕ ಲೈಸೆನ್ಸ್‌ನ ಹೊಸ ನೀತಿಯನ್ನು ...ೀಕರಿಸುವುದಾಗಿ ಪ್ರಕಟಿಸಿದೆ. ಮೂಲ (ಸ್ಥಿರ) ...ು ಲೈಸೆನ್ಸ್ ಪಡೆದ ಕಂಪನಿಗಳು ಮೊಬೈಲ್ ...ಒದಗಿಸುವ ಬಗ್ಗೆ ಇದ್ದ ವಿವಾದ, ಕೋರ್ಟು ...್ಯಗಳನ್ನು ಪರಿಹರಿಸುವ ನೀತಿಯಾಗಿ ...ರ್(ಭಾರತ ಟೆಲಿಕಾಂ ...ಂತ್ರಣ ಪ್ರಾಧಿಕಾರ) ಇದನ್ನು ...ಸು ಮಾಡಿತ್ತು. ಈ ಹೊಸ ... ಈಗಿನ ವಿವಾದವನ್ನು ...ರಿಸುವುದಲ್ಲದೆ, ಟೆಲಿಕಾಂ ... ಬೆಳವಣಿಗೆ, ಬಳಕೆದಾರರ ...ಕ್ತಿ ಕಾಪಾಡುವತ್ತ ಸರಿಯಾದ ...ು ಸಾಧ್ಯತೆ ಹೊಂದಿದೆ. ಆದರೆ ದೂರ ...ರ್ ಮಂತ್ರಿ ಅರುಣ್ ಶೌರಿಯ ವರ್ತನೆ ... ಈ ನೀತಿಯು ಘಟನೆಯು ...ರು-ಸಂದರ್ಭ ಅದನ್ನೂ ವಿವಾದಾಸ್ಪದ ...ದೆ. ಸರ್ಕಾರದ ಉದ್ದೇಶಗಳ ಬಗ್ಗೆ ಹಲವು ...ಂಗಳಲ್ಲಿ ಅನುಮಾನಕ್ಕೆ ಆಸ್ಪದ ಕೊಟ್ಟಿದೆ.

...ೀಕೃತ ದೂರಸಂಪರ್ಕ ಲೈಸೆನ್ಸ್ ...ು ವಿವರಗಳು ಏನು?

...ಗಿನ ಮೂಲ (ಸ್ಥಿರ)ಫೋನು ಸೇವೆ ಮತ್ತು ...ಲ್ ಸೇವೆಯ ಲೈಸೆನ್ಸ್‌ಗಳನ್ನು ಏಕೀಕರಿಸಿ, ... ಲೈಸೆನ್ಸ್ ಪಡೆಯುವ ಅವಕಾಶ ...ಾಗುತ್ತದೆ. ಈಗ ಮೂಲಸೇವೆ ಲೈಸೆನ್ಸ್ ...ುವವರು ಸುಮಾರು ಸಾವಿರ ಕೋಟಿ ರೂ. ...ೈಸೆನ್ಸ್ ಫೀ ಕೊಟ್ಟು ಏಕೀಕೃತ ಲೈಸೆನ್ಸ್ ...ಬಹುದು. ಮೂಲ ಸೇವಾ ಲೈಸೆನ್ಸ್ ಪಡೆದು ...ಲ್ ಸೇವೆ ಕೊಡುವುದನ್ನು ನಿಷೇಧಿಸಲಾಗಿದೆ. ... ಸೇವೆ ಲೈಸೆನ್ಸ್ ಮಾತ್ರ ಇರುವವರು ...ವ ಷರತ್ತುಗಳ ಪ್ರಕಾರ ಮೊಬೈಲ್ ...ನ್ನು 'ಸ್ಥಳೀಯ ಸೇವಾ' ಪ್ರದೇಶದಲ್ಲಿ ಮಾತ್ರ ...ಬಹುದು. ಮೂಲಸೇವೆಯಲ್ಲಿ ಮೊಬೈಲ್ 'ರೋಮಿಂಗ್' (ತಿರುಗಾಟ) ಸೇವೆ ಕೊಡುವುದು ಸಲ್ಲ. ಈ ನಿಯಮ ಉಲ್ಲಂಘಿಸಿದ ರಿಲೆಯನ್ಸ್‌ಗೆ ದಂಡ ವಿಧಿಸಲಾಗುವುದು. ಏಕೀಕೃತ ಲೈಸೆನ್ಸ್ ತೆಗೆದುಕೊಳ್ಳುವುದು ಕಂಪನಿಗಳಿಗೆ ಐಚ್ಛಿಕವಾಗಿರುತ್ತದೆ.

ಷರತ್ತು ಉಲ್ಲಂಘನೆ


ಈ ಪ್ರಸ್ತಾಪ ಟ್ರಿಬ್ಯುನಲ್‌ನ ತೀರ್ಪು ಬಂದ ಮೇಲೆ, ಅದೂ ಸುಪ್ರಿಂ ಕೋರ್ಟು ಟ್ರಿಬ್ಯುನಲ್ ತೀರ್ಪಿನ ಕಾನೂನು ಬದ್ಧತೆಯನ್ನು ಪರಿಶೀಲಿಸುತ್ತಿರುವಾಗ ಬಂದಿರುವುದು ವಿವಾದಕ್ಕೆ ಕಾರಣವಾಗಿದೆ. ಇದಲ್ಲದೆ ಟೆಲಿಕಾಂ ಮಂತ್ರಿ ಅರುಣ್ ಶೌರಿ ಟ್ರಿಬ್ಯುನಲ್‌ನ ತೀರ್ಪನ್ನು ಜಾರಿ ಮಾಡುವುದು ಕಷ್ಟ ಎಂದು ಹೇಳಿದ್ದು ಇನ್ನಷ್ಟು ವಿವಾದ, ಅನುಮಾನಕ್ಕೆ ಎಡೆ ಕೊಟ್ಟಿತ್ತು. ಸರ್ಕಾರ ಮೊದಲಿನಿಂದಲೂ ರಿಲೆಯನ್ಸ್ ಪರವಾಗಿ ಕೆಲಸ ಮಾಡುತ್ತಿದೆ, ರಿಲೆಯನ್ಸ್ ಲೈಸೆನ್ಸ್‌ನ ಷರತ್ತುಗಳನ್ನು ರಾಜಾರೋಷವಾಗಿ ಉಲ್ಲಂಘಿಸಿದ್ದರೂ, ಆ ಬಗ್ಗೆ ಕ್ರಮ ತೆಗೆದುಕೊಳ್ಳದೆ, ಕೋರ್ಟುಗಳು ಆ ಬಗ್ಗೆ ತೀರ್ಪು ಕೊಡುವ ಸಮಯ ಬಂದಾಗ, ಈಗ ಈ ಪ್ರಸ್ತಾಪ ರಿಲೆಯನ್ಸ್‌ನ್ನು ರಕ್ಷಿಸಲು ತಂದಿದೆ ಎಂದು ಮೊಬೈಲ್ ಸೇವಾ ಕಂಪನಿಗಳು ಆಪಾದಿಸುತ್ತವೆ. ಈ ಪ್ರಸ್ತಾಪ ಕಾನೂನುಬಾಹಿರವಾಗಿ ರಿಲೈಯನ್ಸ್ ಮಾಡುತ್ತಿದ್ದನ್ನು ಕಾನೂನುಬದ್ಧಗೊಳಿಸುವ ಪ್ರಯತ್ನ. ಈ ನೀತಿಯ ದೊಡ್ಡ ಲಾಭ ಪಡೆಯುವದೆಂದರೆ ರಿಲೈಯನ್ಸ್ ಎಂಬುದು ಮೊಬೈಲ್ ಕಂಪನಿಗಳ ಅಭಿಪ್ರಾಯ. ಮೂಲ ಸೇವೆಯಲ್ಲಿ ತೊಡಗಿರುವ ಖಾಸಗಿ ಕಂಪನಿಗಳೆಂದರೆ ರಿಲೆಯನ್ಸ್, ಟಾಟಾ. ಪ್ರಮುಖವಾಗಿ ಮೊಬೈಲ್ ಸೇವೆಯಲ್ಲಿರುವ ಖಾಸಗಿ ಕಂಪನಿಗಳೆಂದರೆ - ಏರ್‌ಟೆಲ್ (ಭಾರತಿ ಗುಂಪು) ಹಚ್, ಬಿಪಿಎಲ್, ಐಡಿಯಾ ಇತ್ಯಾದಿ. ಭಾರತಿ ಗುಂಪಿನ ಟಚ್‌ಟೆಲ್ ಎಂಬ ಕಂಪನಿ ಮೂಲಸೇವೆಯಲ್ಲೂ ತೊಡಗಿದೆ. ಆದರೆ ಟಚ್‌ಟೆಲ್ ಮೂಲಸೇವೆಯಲ್ಲಿ ಮೊಬೈಲ್ ಸೇವೆ ಕೊಡಲು ಮುಂದಾಗಿಲ್ಲ.

BHARAT SANCHAR NIGAM LTD.

ವಿವಾದದ ವಿಷಯ

ಈಗ ಉದ್ಭವವಾಗಿರುವ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಮೀರಿಸಲು ಏಕೀಕೃತ ಲೈಸೆನ್ಸ್ (ಮೊಬೈಲ್ ಮತ್ತು ಮೂಲ ಸೇವೆ ಎರಡನ್ನೂ ಒದಗಿಸುವ) ಪದ್ಧತಿ ಉತ್ತಮ ಪರಿಹಾರ. ಮೂಲ (ಸ್ಥಿರ) ಮತ್ತು ಮೊಬೈಲ್ ಫೋನು ಜಾಲಕ್ಕೆ ಬೇಕಾದ ಉಪಕರಣಗಳಲ್ಲಿ ಹಲವು ಸಾಮಾನ್ಯ ಅಂಶಗಳಾಗಿದ್ದು ಎರಡನ್ನೂ ಒಟ್ಟಿಗೆ ಸೇರಿಸಿದಾಗ ಒಟ್ಟಾರೆ ಸೇವೆ ಒದಗಿಸಲು (ಪ್ರತಿಫೋನಿಗೆ) ಬೇಕಾದ ವೆಚ್ಚ ಕಡಿಮೆ ಮಾಡುವ ಸಾಧ್ಯತೆ ಇದೆ. ಇದು ಬಂಡವಾಳದ ಉತ್ತಮ ಉಪಯೋಗ ಕೂಡಾ. ಇದಲ್ಲದೆ ಈ ಹಲವು ಕಂಪನಿಗಳ ಬಳಕೆದಾರರು ಪರಸ್ಪರ ಕರೆ ಮಾಡಲು ಅವಕಾಶ ಇರಬೇಕಾಗಿರುವುದರಿಂದ, ಅಂತಹ ಕರೆಗಳ ಲಾಭ (ಮತ್ತು ವೆಚ್ಚ) ವನ್ನು ಹೇಗೆ ಹಂಚಿಕೊಳ್ಳುವುದು ಎಂಬುದು ಸತತವಾಗಿ ವಿವಾದದ ವಿಷಯವಾಗಿತ್ತು.

ಸಾಮಾನ್ಯನ ಕಾಳಜಿ ಎಲ್ಲಿ?



ಆದರೆ ಈ ಏಕೀಕೃತ ಲೈಸೆನ್ಸ್ ಪದ್ಧತಿ - ಸರ್ಕಾರ ಈವರೆಗೆ ತೋರಿರುವ ಅಪ್ರಾಮಾಣಿಕತೆ, ಕೆಲವು ಖಾಸಗಿ ಕಂಪನಿಗಳ ಬಗ್ಗೆ ಪಕ್ಷಪಾತ, ಸಾರ್ವಜನಿಕ ಬಳಕೆದಾರರ ಹಿತಾಸಕ್ತಿ ಬಗ್ಗೆ ತೋರಿರುವ ನಿರ್ಲಕ್ಷ್ಯ ಈ ಕಾರಣಗಳಿಂದ ನಿರೀಕ್ಷಿತ ಫಲ ತೋರದಿರಬಹುದು. ರಿಲೆಯನ್ಸ್ ಕಾನೂನುಬಾಹಿರ ಕ್ರಮಗಳನ್ನು ಕಾನೂನುಬದ್ಧ ಮಾಡುವ ಅವರ ದೂರಗಾಮಿ ಟೆಲಿಕಾಂ ವಹಿವಾಟು ಯೋಜನೆಗಳಿಗೆ ಅನುಗುಣವಾಗಿ ಟೆಲಿಕಾಂ ನೀತಿಯನ್ನು ರೂಪಿಸುವ ತರಾತುರಿ ಮಾತ್ರ ಇದರಲ್ಲಿ ಕಾಣುತ್ತದೆ. ಇಷ್ಟರವರೆಗೆ ಸರ್ಕಾರದ ನೀತಿ ಬದಲಾದಾಗಲೆಲ್ಲ ಶ್ರೀಸಾಮಾನ್ಯರ ಮೂಲ ಫೋನು ಸೇವೆ ದುಬಾರಿಯಾಗುತ್ತಾ ನಡೆದಿದೆ. ದೂರದ (ಟ್ರಂಕ್‌ಕಾಲ್) ಕರೆಗಳು, ಮೊಬೈಲ್, ಮೊಬೈಲ್‌ನಿಂದ ದೂರ ಕರೆಗಳು ಇತ್ಯಾದಿ ಎಲ್ಲಾ ಕಡಿಮೆಯಾಗುತ್ತಾ ನಡೆದಿದೆ. ಈ ಸೇವೆಗಳನ್ನು ಸ್ವಲ್ಪವಾದರೂ ಸ್ಥಿತಿವಂತರೂ ಬಳಸುತ್ತಾರೆ. ಈ ನೀತಿಯ ನಂತರವೂ ಶ್ರೀಸಾಮಾನ್ಯನ ಮೂಲ ಫೋನು ಸೇವೆಗಳ ಬೆಲೆ ಇನ್ನೊಂದು ಸುತ್ತಿನ ಏರಿಕೆ ಕಾಣುವುದಿಲ್ಲ ಎಂಬ ಯಾವ ಗ್ಯಾರಂಟಿಯೂ ಇಲ್ಲ. ಇದಲ್ಲದೆ ಫೋನು ಸಾಂದ್ರತೆ (ಪ್ರತಿ ಸಾವಿರಕ್ಕೆ ಎಷ್ಟು ಫೋನುಗಳ ಲಭ್ಯವಿರುತ್ತವೆ), ಮೂಲ ಸೇವೆಯ ಬೆಲೆ ಶ್ರೀಸಾಮಾನ್ಯನಿಗೆ ಎಟಕುವಂತೆ ಮಾಡುವುದು, ಫೋನು ಜಾಲದ ವ್ಯಾಪಕತೆ (ಗ್ರಾಮೀಣ ಹಿಂದುಳಿದ ಪ್ರದೇಶಗಳಲ್ಲಿ - ಭಾರಿ ಲಾಭವಿಲ್ಲದಲ್ಲೂ) ಇರುವಂತೆ ಮಾಡುವುದು ಟೆಲಿಕಾಂ ನೀತಿಯ ಮೂಲ ಗುರಿಗಳಾಗಿರಬೇಕು.

ಶರತ್‌ಚಂದ್ರ

Reliance Infocomm
A New Way Of Life

ಅದರ ಬಗ್ಗೆ ಯಾವುದೇ ಕಾಳಜಿ ಈ ನೀತಿಗಳಲ್ಲಿ ಕಂಡಿಲ್ಲ. 90 ರ ದಶಕದಲ್ಲಿ ಆರಂಭವಾದ ಟೆಲಿಕಾಂ ಖಾಸಗೀಕರಣ ನೀತಿಯಲ್ಲಿ ಈ ಅಂಶಗಳನ್ನು ಗೌಣವಾಗಿ ಕಾಣಲಾಗಿದ್ದು, ಸತತವಾಗಿ ಪರಿಸ್ಥಿತಿ ಹದಗೆಡುತ್ತಾ ಬಂದಿದೆ. ಮೂಲ ಸೇವೆಗಳ ವೆಚ್ಚ ಕಡಿಮೆಯಾಗುವ ಬದಲು ಹೆಚ್ಚಾಗುತ್ತಾ ಬಂದಿದೆ. ಶ್ರೀಸಾಮಾನ್ಯನಿಗೆ ಎಟುಕುವ ಬೆಲೆ ಇರುವುದು ಮೂಲ ಸೇವೆಯ ವ್ಯಾಪಕತೆಗೆ ಅಗತ್ಯ ಅಂಶ.

ಈಗಿನ ಮೂಲಸೇವೆ ಲೈಸೆನ್ಸ್‌ನ ಭಾಗವಾಗಿ ಕನಿಷ್ಟ ಇಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಫೋನು ಸೇವೆ ಒದಗಿಸಬೇಕೆಂಬ ಷರತ್ತನ್ನು ಯಾವ ಕಂಪನಿಯೂ ಪಾಲಿಸಿಲ್ಲ. ಈ ಷರತ್ತು ಪಾಲಿಸದಿದ್ದರೆ ದಂಡ ಇದೆ. ದಂಡ ತೆತ್ತು ಆರಾಮಾಗಿ ಇದ್ದಾರೆ. ದಂಡದ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಸೇವೆ ಒದಗಿಸಬೇಕಾದ ವೆಚ್ಚಕ್ಕಿಂತ ಕಡಿಮೆಯಂತೆ. ಇದಕ್ಕಿಂತ ಹೆಚ್ಚಿನ ದಿವಾಳಿಕೋರ ನೀತಿ ಇರಲು ಸಾಧ್ಯವೆ? ಇದಲ್ಲದೆ ಹೊಸ ನೀತಿಯಲ್ಲಿ ಈ ಬಗ್ಗೆ ಬಿಗಿ ಕ್ರಮಗಳನ್ನು ತರುವ ಬದಲು ಗ್ರಾಮೀಣ- ಹಿಂದುಳಿದ ಪ್ರದೇಶಗಳಿಗೆ ಫೋನು ಜಾಲ ವಿಸ್ತರಿಸಲು ಸರ್ಕಾರ ಒಂದು ಹೊಸ ನಿಧಿ ಮಾಡಲಿದ್ದು, ಕಂಪನಿಗಳಿಗೆ ಈ ನಿಧಿಯಿಂದ ಹಣ ಒದಗಿಸಲಾಗುವುದಂತೆ.

ಇದಲ್ಲದೆ ಸರ್ಕಾರದ ಏಕೀಕೃತ ವ್ಯವಸ್ಥೆಯನ್ನು ತಮಗೆ ಅನುಕೂಲಕರವಾಗಿ ಬದಲಾಯಿಸುವಂತೆ ಒತ್ತಡ ಹೇರುವ ಯತ್ನ ನಡೆದಿದೆ. ಏಕೀಕೃತ ಲೈಸೆನ್ಸ್‌ನಲ್ಲಿ ದೂರ ಕರೆಗಳ ಸೇವೆ, ಇಂಟರ್‌ನೆಟ್ ಸೇವೆಗಳನ್ನು ಯಾಕೆ ಸೇರಿಸಬಾರದು ಎಂಬುದು ಮೊಬೈಲ್ ಕಂಪನಿಗಳ ವಾದ. ರಿಲೆಯನ್ಸ್ ಪ್ರಮುಖ ಮಂತ್ರಿಗಳನ್ನು ನೋಡಿಕೊಂಡ ಹಾಗೆ, ಇತರ ಕಂಪನಿಗಳು 'ನೋಡಿಕೊಂಡ'ರೆ ಇದು ಅಸಾಧ್ಯವೇನಲ್ಲ. ಆಗ ಇನ್ನೊಂದು ಸುತ್ತಿನ ವಿವಾದ-ಕೋರ್ಟು ಕಟ್ಟೆ ಹತ್ತುವ ಗದ್ದಲ-ವಿಳಂಬ ಕಟ್ಟಿಟ್ಟ ಬುತ್ತಿ. ಇದಲ್ಲದೆ ಹೆಚ್ಚೆಚ್ಚಾಗಿ ಎಲ್ಲಾ ಟೆಲಿಕಾಂ ಸೇವೆಗಳಲ್ಲಿ ಕೇವಲ ಬೆರಳೆಣಿಕೆಯ ಕಂಪನಿಗಳು ಏಕಸ್ವಾಮ್ಯ ಸಾಧಿಸುವ ಪ್ರಕ್ರಿಯೆ ಕಂಡುಬರುತ್ತಿದೆ. ಭಾರೀ ಖಾಸಗಿ ಏಕಸ್ವಾಮ್ಯ ಟೆಲಿಕಾಂ ಬೆಳವಣಿಗೆ (ಹಿಂದೆ ಹೇಳಿದ ಸಾರ್ವಜನಿಕ -ಬಳಕೆದಾರರ ಹಿತಾಸಕ್ತಿಯ ದೃಷ್ಟಿಯಿಂದ) ಮಾರಕ ಸಹ.

90 ರ ದಶಕದಲ್ಲಿ ಸರ್ಕಾರ ಟೆಲಿಕಾಂ ಖಾಸಗೀಕರಣಕ್ಕೆ ಕೊಟ್ಟ ಕಾರಣಗಳು ಈಗ ತಲೆಕೆಳಗಾಗಿವೆ. ಈಗ ಸರ್ಕಾರ ಮತ್ತು ಖಾಸಗಿ ಬಂಡವಾಳಿಗರು ತದ್ವಿರುದ್ಧ ಮಾತನಾಡುತ್ತಿದ್ದಾರೆ. ಸರ್ಕಾರದ ಟೆಲಿಕಾಂ ಖಾತೆ ಏಕಸ್ವಾಮ್ಯ, ಬೆಳವಣಿಗೆಗೆ ಮಾರಕ, ಸರ್ಕಾರದ ಬಂಡವಾಳ ವ್ಯರ್ಥ ಮಾಡಬಾರದು, ಇತ್ಯಾದಿ ಕಾರಣಕ್ಕಾಗಿ ಹೊಸ ಸೇವೆ (ಇಂಟರ್‌ನೆಟ್, ಇಮೈಲ್, ಮೊಬೈಲ್ ಇತ್ಯಾದಿ)ಗಳನ್ನು ಖಾಸಗಿ ಕಂಪನಿಗಳಿಗೆ ಮೀಸಲಿಡಬೇಕು. ಈ ಸೇವೆಗಳಲ್ಲಿ ಟೆಲಿಕಾಂ ಖಾತೆ ಒಂದು 'ಪಾರ್ಟಿ'ಯಾಗಿಯೂ ಭಾಗವಹಿಸಲು ಅವಕಾಶ ಕೊಡಬಾರದು. ಮೊಬೈಲ್ ಕಂಪನಿಗಳು ಬಿಎಸ್‌ಎನ್‌ಎಲ್, ಎಮ್‌ಟಿಎನ್‌ಎಲ್ ಗಳಿಗೆ ಮೊಬೈಲ್ ಲೈಸೆನ್ಸ್ ಕೊಡಬಾರದು ಎಂದೂ ಕೋರ್ಟು ಕಟ್ಟೆ ಹತ್ತಿದ್ದವು. ಆಮೇಲೆ ಮೂಲ ಸೇವೆಗಳಲ್ಲೂ ಬಿಎಸ್‌ಎನ್‌ಎಲ್ ಎಮ್‌ಟಿಎನ್‌ಎಲ್‌ಗೆ ಏಕಸ್ವಾಮ್ಯ ಇರಬಾರದು ಎಂದು, ಅದರಲ್ಲೂ ಖಾಸಗಿ ಕಂಪನಿಗಳಿಗೆ -ರಿಲೆಯನ್ಸ್, ಟಾಟಾ, ಟಚ್‌ಟೆಲ್ ಮುಂತಾದ ಕಂಪನಿಗಳಿಗೆ ಲೈಸೆನ್ಸ್ ಕೊಟ್ಟಿತು. ದೂರದ ಕರೆಗಳನ್ನು ಬೇರೆ ಸೇವೆ ಎಂದು ಕರೆದು ಅದನ್ನೂ ಖಾಸಗಿ ಕಂಪನಿಗಳಿಗೆ ಕೊಡಲಾಯಿತು. ಆಮೇಲೆ ದೂರದ ಕರೆಗಳಲ್ಲಿದ್ದ ವಿಎಸ್‌ಎನ್‌ಎಲ್‌ನ್ನು ಟಾಟಾಗಳಿಗೆ ಮಾರಲಾಯಿತು. ಈಗಾಗಲೇ ಇಂಟರ್‌ನೆಟ್, ಮೊಬೈಲ್, ಮೂಲಸೇವೆ ಲೈಸೆನ್ಸ್ ಪಡೆದಿದ್ದ ಟಾಟಾ ವಿಎಸ್‌ಎನ್‌ಎಲ್ ಸೇರಿ ದೊಡ್ಡ ಏಕಸ್ವಾಮ್ಯತೆ ಸಾಧಿಸಲು ಸಾಧ್ಯತೆ ಹೊಂದಿದೆ. ರಿಲೆಯನ್ಸ್ ಸಹ ಇದೇ ದಾರಿ ಹಿಡಿದಿದೆ. ಈಗ ಫೋನು ಜಾಲವನ್ನು ಗ್ರಾಮೀಣ-ಪ್ರದೇಶಗಳಿಗೆ ವ್ಯಾಪಿಸಲು ಸರ್ಕಾರ ನಿಧಿ ಮಾಡಬೇಕು ಎಂಬುದರ ಜತೆಗೆ ಖಾಸಗೀಕರಣಕ್ಕೆ ಇದ್ದ ಎಲ್ಲಾ ವಾದಗಳು ತಲೆಕೆಳಗಾಗಿವೆ.

ಈ ಎಲ್ಲಾ ಗೊಂದಲಗಳ ನಂತರವೂ ಮೂಲ ಸೇವೆ, ಮೊಬೈಲ್ ಸೇವೆ ಇಂಟರ್‌ನೆಟ್ ಸೇವೆಗಳನ್ನು ದೇಶಾದ್ಯಂತ (ದೂರದ ಹಿಂದುಳಿದ, ಗ್ರಾಮೀಣ ಪ್ರದೇಶಗಳಿಗೆ ಸೇರಿ) ಎಲ್ಲಾ ಸೇವೆಗಳನ್ನು ವೇಗವಾಗಿ ವ್ಯಾಪಕಗೊಳಿಸುವ ಕೆಲಸವನ್ನು ಬಿಎಸ್‌ಎನ್‌ಎಲ್ ಮಾಡಿದೆ. ಖಾಸಗೀಕರಣ ಮಾಡದಿದ್ದರೆ, ಇದು ಇನ್ನಷ್ಟು ವೇಗವಾಗಿ ಆಗುತ್ತಿತ್ತು ಎಂಬಂತೆ ಕಾಣುತ್ತಿದೆ. ಖಾಸಗೀಕರಣ (ಅದರಲ್ಲೂ ಸ್ಪಷ್ಟ ಉದ್ದೇಶದ ನೀತಿ, ನಿಯಂತ್ರಣ ಇಲ್ಲದೆ) ಬೆಳವಣಿಗೆಗೆ ಪೂರಕವಲ್ಲ ಎಂದು ಈ ಟೆಲಿಕಾಂ ಬಿಕ್ಕಟ್ಟು ತೋರಿದೆ.

ಕೊಡಗು : ಮತಾಂಧರ ದಾಂಧಲೆ

ಕೊಡಗು ಕೃಷಿ ಪ್ರಧಾನ ಜಿಲ್ಲೆ, ಕಾಫಿ, ಏಲಕ್ಕಿ, ಕರಿಮಾಸು ಮೊದಲಾದ ಕೃಷಿ ಉತ್ಪನ್ನಗಳು ಇಲ್ಲಿನ ಪ್ರಧಾನ ಬೆಳೆಗಳು. ಜಾಗತೀಕರಣದ ಆರ್ಥಿಕ ಧೋರಣೆಯಿಂದಾಗಿ ಇವುಗಳ ಬೆಲೆ ಕುಸಿದಿದೆ. ಬೆಳೆಗಾರರು ತೀವ್ರ ಬಿಕ್ಕಟ್ಟಿನಿಂದ ತತ್ತರಿಸುತ್ತಿದ್ದಾರೆ. ಕಾಫಿಯನ್ನು ರಕ್ಷಿಸಲು ಕೇಂದ್ರ ಬೆಂಬಲ ಬೆಲೆ ಘೋಷಿಸಬೇಕು. ಅದಕ್ಕೆ ಭಾ.ಜ.ಪ. ನೇತೃತ್ವದ ಕೇಂದ್ರ ಸರಕಾರ ಸಿದ್ಧವಿಲ್ಲ.

ಬಹುರಾಷ್ಟ್ರೀಯ ಕಂಪನಿಗಳ ಪರವಾದ ತನ್ನ ಆರ್ಥಿಕ ನೀತಿಯಿಂದಾಗಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಭಾ.ಜ.ಪ. ನೇತೃತ್ವದ ಸರಕಾರಕ್ಕೆ ಈ ಬೆಳೆಗಾರರ ಪರವಾಗಿ ಹೆಜ್ಜೆಗಳನ್ನು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾಮಾನ್ಯ ಜನರಲ್ಲಿ ಕೇಂದ್ರದ ಬಗ್ಗೆ ಅಸಹನೆ ಬೆಳೆಯುತ್ತಿದೆ.

ಕೊಡಗಿನಲ್ಲಿ ಮತಾಂಧರ ಹಾವಳಿ ದಿನದಿನವೂ ಹೆಚ್ಚುತ್ತಿದೆ. ಕೆಲವು ಘಟನೆಗಳ ವರದಿ

ಬೆಳೆದು ಬರುತ್ತಿರುವ ಜನ ರೋಷದ ದಿಕ್ಕು ತಪ್ಪಿಸಲು ಮತಾಂಧ ಹಿಂದೂ ಸಂಘಟನೆಗಳು ವೈಯುಕ್ತಿಕ ಘಟನೆಗಳನ್ನೂ ಮತೀಯ ಘರ್ಷಣೆಗಳನ್ನಾಗಿ ಹುಟ್ಟುಹಾಕಲು ಉಪಯೋಗಿಸುತ್ತಿವೆ.

ಈ ಹಿಂದೆ ಸೋಮವಾರ ಪೇಟೆಯಲ್ಲಾದ ಘಟನೆ, ಸಂಘ ಪರಿವಾರದ ದಾಳಿ ಬಗ್ಗೆ ಬರೆಯಲಾಗಿದೆ. ಇದಕ್ಕೆ ಪ್ರತಿರೋಧವಾಗಿ ನಡೆದ ಸೌಹಾರ್ದತಾ ರ‍್ಯಾಲಿ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದೆ.

ಸೋಮವಾರಪೇಟೆ ತಾಲೂಕಿನ ಬಿಳಿಗೆರೆ ಸಮೀಪ ಹೊಸತೋಟದಲ್ಲಿ ದಲಿತನೊಬ್ಬನ ಮೇಲಿನ ಸೇಡಿಗೆ ಗರಗಂದೂರಿನ ಮುಸ್ಲಿಂ ಮನೆಗಳು ಪುಡಿಪುಡಿಯಾಗಿವೆ.

ಶಿವಪ್ಪ ಸ್ವಲ್ಪ ಓದಿಕೊಂಡಿರುವ ಯುವಕ. ಗರಗಂದೂರಿನಲ್ಲಿ ರಾ.ಸ್ವ.ಸೇ. ಸಂಘದ ಶಾಖೆಗಳನ್ನು ನಡೆಸಿಕೊಂಡು ಬಂದವನು. ಎರಡು ಚುನಾವಣೆಗಳಲ್ಲಿ ಭಾ.ಜ.ಪ.ಕ್ಕೆ ಕೆಲಸ ಮಾಡಿದ್ದಾನೆ. ಕುಂಬಾರಬಾಣೆಯ ನಾಣು ಕೂಡ ಇವನ ಜೊತೆಯಲ್ಲಿ ಕೆಲಸ ಮಾಡಿದವನು. ಅನಂತರ ಶಿವಪ್ಪ ದ.ಸಂ.ಸ.ದ ಕೃಷ್ಣಪ್ಪ ಬಣದ ತಾಲೂಕು ಸಂಚಾಲಕನಾದ, ಭಾ.ಜ.ಪ.ದಿಂದ ಹೊರಬಂದ ಈತ ಬಿ.ಎಸ್.ಪಿ.ಗೆ ಸೇರುವುದರೊಂದಿಗೆ ಊರಿನ ಅನೇಕರು ಆ ಪಕ್ಷವನ್ನು ಸೇರಿದರು ಮತ್ತು ಭಾ.ಜ.ಪ.ಕ್ಕೆ ಇದರಿಂದ ದೊಡ್ಡ ಪೆಟ್ಟಾಯಿತು. ಭಾ.ಜ.ಪ.ದ ಪುಢಾರಿಗಳು ಈಗ ಶಿವಪ್ಪನನ್ನು ದ್ವೇಷಿಸಲು ತೊಡಗಿದರು. ಭಜರಂಗದ ನಾಣು ಭಾ.ಜ.ಪ.ದಲ್ಲೇ ಮುಂದುವರೆದರು. ಭಜರಂಗಿ ಹುಡುಗರು ಮಾದಾಪುರ ಕಾಲೇಜಿನ ಹುಡುಗಿಯರಿಗೆ ಕಿರುಕುಳ ಕೊಡುತ್ತಿರುವ ದೂರುಗಳು ಸುಂಟಿಕೊಪ್ಪ ಪೋಲಿಸ್ ಠಾಣೆಯಲ್ಲಿ ದಾಖಲಾಗಿದೆ.

ಅಕ್ಟೋಬರ್ 2 ರಂದು ಭಜರಂಗಿ ನಾಣು, ಅಝುರುದ್ದೀನ್ ಎಂಬುವವರನ್ನು "ನೀನು ಮುಸ್ಲಿಂ, ಅಂಬೇಡ್ಕರ್‌ರ ಲಾಕೆಟ್ ಹಾಕಿದ್ದೀಯಾ?" ಎಂಬ ಪ್ರಶ್ನೆಯೊಂದಿಗೆ ಕೆಣಕಿದನು. ಇದು ಶಿವಪ್ಪನವರಿಗೆ ತಿಳಿಯಿತು. ಶಿವಪ್ಪ ಮತ್ತು ನಾಣುರವರ ನಡುವೆ ಮಾತಿಗೆ ಮಾತು ಬೆಳೆಯಿತು. ನಾಣು ಹಿಂದೂ ಸಂಘಟನೆಗಳವರನ್ನು ಸೇರಿಸಿಕೊಂಡು ಬಂದು ಶಿವಪ್ಪನನ್ನು ಹೊಡೆದರು "ನನ್ನ ಹಣೆಯ ನಾಮ ಒರೆಸಿದ, ರಾ.ಸ್ವ.ಸೇ.ಸಂಘದ ಶಾಖೆ ನಡೆಸಿದರೆ ಕೈಕಾಲು ಮುರಿಯುತ್ತೇನೆ ಎಂದ" ಎಂದು ಶಿವಪ್ಪನವರ ಬಗ್ಗೆ ಅಪಪ್ರಚಾರ ಮಾಡಿದ ಕುಂಕುಮಧಾರಿಗಳಿಗೆ ಇದೊಂದು ಅವಕಾಶವಾಯಿತು. ಗರಗಂದೂರು, ಐಗೂರು, ಕುಂಬೂರು ಬ್ಲೂಮೂನ್ ಎಸ್ಟೇಟ್‌ಗಳಿಂದ ಸಭೆಗೆಂದು ಸುಮಾರು ನೂರು ಹುಡುಗರು ಗರಗಂದೂರಿನಲ್ಲಿ ಸೇರಿದ್ದರು. ಅಲ್ಲಿ ಪೋಲಿಸರಿದ್ದರೂ ಕುಂಕುಮಧಾರಿಗಳನ್ನು ಕಂಡೊಡನೆ ಅವರು ಜಾಗ ಖಾಲಿ ಮಾಡಿದರು. ಶಿವಪ್ಪ ಆಟವಾಡುತ್ತಿದ್ದ ವಾಲಿಬಾಲ್ ಮೈದಾನಕ್ಕೆ ಇವರು ನುಗ್ಗಿ ಶಿವಪ್ಪನವರ ತಂಡದ ಮೇಲೆ ಹಲ್ಲೆ ನಡೆಸಿದರು. ಅನಂತರ ಈ ಭಜರಂಗಿಗಳು ಸ್ಯೆಯದ್ ಅಲಿ, ಅಬ್ದುಲ್ ಕುಟ್ಟಿ, ಉಷಾ, ಗ್ರಾಮ ಪಂಚಾಯತ್ ಅಧ್ಯಕ್ಷೆ ಯಮುನಾರ ಮನೆಯ ಕಿಟಕಿಯ ಗಾಜುಗಳನ್ನು ಒಡೆದುಹಾಕಿದ್ದಾರೆ. ಅಷ್ಟು ಹೊತ್ತಿಗಾಗಲೇ ಶಾಸಕ ರಂಜನ್ ಅಪ್ಪಚ್ಚು ಹೊಸತೋಟ ಗೇಟಿನ ಬಳಿ ಭಜರಂಗಿಗಳೊಡನೆ ಮಾತನಾಡಿ ಹೋದರು.

ಸಿದ್ದಾಪುರದ ಸುತ್ತಮುತ್ತಲೂ ಭಜರಂಗಿಗಳ ಕುಟಿಲ ತಂತ್ರಗಳು ಹೆಚ್ಚುತ್ತಿವೆ. ಒತ್ತಾಯದಿಂದ ಮತಾಂತರ ಮಾಡುತ್ತಿರುವರೆಂದು ಹೇಳಿ ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆಸಲಾಗುತ್ತಿದೆ.

ಗ್ರಾಮಗಳಲ್ಲಿ ಕ್ರಿಮಿನಲ್ಲುಗಳು ಭಜರಂಗಿಗಳಾಗುತ್ತಿದ್ದಾರೆ. ಇವರ ಎಲ್ಲಾ ಚಟುವಟಿಕೆಗಳಿಗೆ ಭಜರಂಗ ದಳ ಬೆಂಬಲ ನೀಡುತ್ತಿದೆ.

ಕರಡಿಗೋಡಿನಲ್ಲಿ ಕ್ರಿಶ್ಚಿಯನ್ನರ ಮೇಲೆ ಹಲ್ಲೆ ನಡೆಸಿದವರು ಮತಾಂತರಕ್ಕೆ ಒಳಗಾದವರು. ಅಪ್ಪ ಹಿಂದೂ ಅಮ್ಮ ಮುಸ್ಲಿಂ. ಆದರೆ ಇವರು ಮತಾಂತರ ತಡೆಗಟ್ಟುವವರು.

ಭಜರಂಗಿಗಳ ಮುಖಂಡನ ಅಕ್ಕ ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ್ದಾರೆ. ತನಗೆ ಒಬ್ಬನೇ ಮಗನೆಂದು ತಂದೆ ಮನೆ ಕಟ್ಟಿಕೊಂಡಿದ್ದ. ಮನೆಯಿಂದ ತಂದೆ ತಾಯಿಯನ್ನು ಹೊರಗೆ ಹಾಕಿದ್ದಾನೆ. ಬಾವಿಯ ನೀರನ್ನು ಸಹ ಮುಟ್ಟಲು ತಂದೆಗೆ ಬಿಡುತ್ತಿಲ್ಲ.

ಇನ್ನೊಬ್ಬ ಭಜರಂಗದಳದ ಕಾರ್ಯಕರ್ತ ಬಡ್ಡಿ ವ್ಯಾಪಾರ ನಡೆಸುವವನು. ಈತ ಸುತ್ತುಮುತ್ತಲಿನ ಬಡ ಹಿಂದೂಗಳಿಗೆ ದೊಡ್ಡ ಬಡ್ಡಿಗೆ ಸಾಲ ಕೊಟ್ಟು ಅವರನ್ನು ಸುಲಿಯುತ್ತಾನೆ. ಇವನ ತಮ್ಮ ತೋಟದಲ್ಲಿ ರೈಟರ್. ಇಪ್ಪತ್ತು ವರ್ಷದ ಹಿಂದೂ ಹುಡುಗಿಯನ್ನು ಗಂಡ ಹೆಂಡತಿ ಸೇರಿ ವಿಷಕುಡಿಸಿ ಕೊಂದ ಪಾತಕಿ. ಈಗ ತಲೆಮರೆಸಿಕೊಂಡಿದ್ದಾನೆ. ಈತ ಆತ್ಮಹತ್ಯೆಗೆ ಪ್ರಚೋದನೆ ಕೊಟ್ಟ ಎಂಬ ಪುಕಾರಾಗಿದೆ.

ವಿರಾಜಪೇಟೆಯಲ್ಲಿ ಚಾಂದ್‌ಪಾಷಾ ಎಂಬುವವನು ಗಾಂಜಾ ವ್ಯಾಪಾರಿ. ಗಾಂಜಾ ಸೇದುವವರ ಒಂದು ಗುಂಪು ರಾತ್ರಿ ಹೊತ್ತು ಅವನ ಮನೆಗೆ ನುಗ್ಗಿದರು. ಮಾತಿಗೆ ಮಾತು ಬೆಳೆದು ವಾತಾವರಣ ಬಿಸಿಯೇರಿತು. ಆತ್ಮರಕ್ಷಣೆಗಾಗಿ ಅವನು ಕತ್ತಿ ಬೀಸಿದನು. ಆಗ ಒಬ್ಬನಿಗೆ ತಾಗಿ ಅನಂತರ ಆತ ಸತ್ತನು. ಈ ಮತಾಂಧರು ಅದನ್ನು ಒಬ್ಬ ಅಮಾಯಕ ಹಿಂದೂ ಯುವಕನ ಕೊಲೆ ಎಂದು ಚಿತ್ರಿಸಿ ಮತೀಯ ಗಲಭೆ ಸೃಷ್ಟಿಸಲು ಯತ್ನಿಸಿದರು. ಅದರೆ ಪೋಲೀಸರ ಸಕಾಲಿಕ ... ಮಧ್ಯಪ್ರದೇಶದಿಂದ ಅವರ ಯತ್ನ ಸಫಲವಾಗಲಿಲ್ಲ.

ಒಟ್ಟಿನಲ್ಲಿ ಹಿಂದೂ ಮತಾಂಧರು ಕೊಡಗನ್ನು ಮತ್ತೊಂದು ಗುಜರಾತ್ ಮಾಡಲು ಶತಪ್ರಯತ್ನ ನಡೆಸುತ್ತಿದ್ದಾರೆ. ಇವರ ವಿರುದ್ಧ ಹೋರಾಡಲು ಕಾಂಗ್ರೆಸ್ ವಿಫಲವಾಗಿದೆಯಲ್ಲದೆ ಆ ಪಕ್ಷದವರು ಅವರೊಂದಿಗೆ ಹೊಂದಾಣಿಕೆ ನಡೆಸುತ್ತಿದ್ದಾರೆ. ಸಿಪಿಐ(ಎಂ) ಮತ್ತು ಜನತಾದಳ(ಎಸ್) ಮುಖಂಡರಾದ ಎ.ಕೆ.ಸುಬ್ಬಯ್ಯ, ಶಶಿಧರರವರು ಕೋಮುವಾದಿಗಳ ಅಟ್ಟಹಾಸದ ವಿರುದ್ಧ ಪ್ರತಿರೋಧವನ್ನು ಸಕ್ರಿಯವಾಗಿ ಒಡ್ಡುತ್ತಿದ್ದಾರೆ.

ಫ್ಯಾಸಿಸ್ಟರಲ್ಲದೇ ಮತ್ತೇನು?

ಮಹಿಳಾ ಅಧ್ಯಕ್ಷೆಗೆ ನೇಣು ಹಾಕಿದರು

ರಾಜಧಾನಿ ಬೆಂಗಳೂರಿನಿಂದ ಅನತಿ ದೂರದಲ್ಲೇ ಇರುವ ಅನೇಕಲ್ ಪುರಸಭೆಯ ಅಧ್ಯಕ್ಷೆ ಮಂಜುಳಾ ನವೆಂಬರ್ 5 ರಂದು ಆತ್ಮಹತ್ಯೆ ಮಾಡಿಕೊಂಡರು. ಕಾರಣ ಕಲಾಪದ ವೇಳೆ ಬಾಯಿತಪ್ಪಿ ಆಡಿದರೆನ್ನಲಾದ (ನಾಮಕಾವಸ್ಥೆ ಸದಸ್ಯರು) ಮಾತಿನ ನೆಪ ಹೂಡಿ ಕೆಲವು ಸದಸ್ಯರು ಅತ್ಯಂತ ಕೀಳು, ಅವಾಚ್ಯ ಶಬ್ದಗಳಿಂದ ಬೈದು, ಮಾನಭಂಗ ಮಾಡುವ ಬೆದರಿಕೆಯಿಂದ ಮನನೊಂದು ನೇಣು ಹಾಕಿಕೊಂಡಿದ್ದಾರೆ. ಹೀಗೆ ಹಲವಾರು ತಿಂಗಳಿಂದ ಈ ಸ್ಥಾಪಿತ ಹಿತಾಸಕ್ತಿಗಳ ತಾಳಕ್ಕೆ ಕುಣಿಯಲೊಲ್ಲದ ಆಕೆಗೆ ಚಿತ್ರಹಿಂಸೆ ನೀಡುತ್ತಿರುವವರು ಬೇರಾರೂ ಅಲ್ಲ. ಅವರು ಬಿಜೆಪಿಯ ಕೌನ್ಸಿಲರಗಳು ಮತ್ತು ಮುಕುಟ ಪ್ರಾಯನಾದ ಬಿಜೆಪಿ ಶಾಸಕ ಎ.ನಾರಾಯಣ ಸ್ವಾಮಿ. ಅಧ್ಯಕ್ಷೆ ಬೇರೆ ಪಾರ್ಟಿಯವರೇನಲ್ಲ, ಬಿಜೆಪಿ ಪಕ್ಷದವರೇ!. ಹಿಂದುತ್ವ, ಮಹಿಳಾ ಉದ್ಧಾರದ ಬೊಗಳೆ ಹೊಡೆವ ಬಿಜೆಪಿಯ ಕ್ರೂರ ನಿಜ ಮುಖಕ್ಕೆ ಬೇರೆ ಉದಾಹರಣೆಗಳು ಬೇಕೆ? ಈ ಎಲ್ಲರ ಹೆಸರು, ಸಂಗತಿಗಳನ್ನು ಆಕೆ ಜಿಲ್ಲಾಧಿಕಾರಿಗೆ ಬರೆದಿಟ್ಟ ಪತ್ರದಲ್ಲಿ ಸತ್ಯ ಸಂಗತಿಯನ್ನು ಸಾರುತ್ತವೆ. ಶಾಸಕ ತಲೆಮರೆಸಿ ಕೊಂಡಿದ್ದಾನೆ. ಪೋಲೀಸರು ಹುಡುಕುತ್ತಿದ್ದಾರೆ!

ದಾಳಿ ನಡೆಸಿದರೂ ದೂರೂ ಕೊಟ್ಟರು!

ಮೊನ್ನೆ ನವೆಂಬರ್ 7 ರಂದು ಖ್ಯಾತ ವಕೀಲ ಎ.ಕೆ.ಸುಬ್ಬಯ್ಯನವರು ಮಡಿಕೇರಿಯ ಜಿಲ್ಲಾಧಿಕಾರಿ ಕಛೇರಿಯಲ್ಲಿ ಕೆಲಸ ಮುಗಿಸಿ ಹೊರನಡೆದು ಬರುವುದನ್ನು ಕಂಡ ಬಜರಂಗ ದಳ, ವಿಹಿಂಪ, ಬಿಜೆಪಿ ತಂಡ ಪಾಲೂರು ದೇವಸ್ಥಾನ ನಿರ್ಮಿಸಿ ಎಂಬ ಘೋಷಣೆ ಬಿಟ್ಟು, ಸೆಕ್ಯುಲರಿಸ್ಟರಿಗೆ ದಿಕ್ಕಾರ ಎಂದು ಕೂಗಿದ್ದಾರೆ. ಇದನ್ನು ನಿರ್ಲಕ್ಷಿಸಿ ಸುಬ್ಬಯ್ಯ ಮತ್ತು ಗೆಳೆಯರು ನಡೆದರೂ ಕೆಣಕಲೆಂದೇ ವೈಯಕ್ತಿಕ-ಅವಾಚ್ಯ ಶಬ್ದಗಳ ಘೋಷಣೆ ಅರಚಿಸಿದ್ದಾರೆ. ಮೈಮೇಲೆ ಏರಿಬಂದಾಗ ಧಾಳಿ ನಡೆಯುವುದನ್ನು ಪತ್ರಕರ್ತರೊಬ್ಬರು ತಡೆದಿದ್ದಾರೆ. ಬಳಿಕ 'ದೇಶದ್ರೋಹಿಗಳಿಗೆ ಧಿಕ್ಕಾರ' ಹಾಕಿದ ಎಕೆಎಸ್ ಕಾರು ಹತ್ತಿ ಹೊರಟಿದ್ದಾರೆ. ಸಂಜೆಗೆ ಉದಯ ಟಿ.ವಿ. ಪ್ರಸಾರ ನೋಡಿದ ಹಿತೈಷಿಯೊಬ್ಬರು ಸುಬ್ಬಯನವರಿಗೆ ಸಂಪರ್ಕಿಸಿ 'ಅವರು ಪಿಸ್ತೂಲು ತೋರಿಸಿ ಕೊಲ್ಲಲು ಬಂದರು, ಪ್ರಾಣ ಭಯ ಉಂಟುಮಾಡಿದ್ದಾರೆ ರಕ್ಷಿಸಿ' ಎಂದು ಪೋಲೀಸರಿಗೆ ದೂರು ನೀಡಿದ್ದಾರೆ. ರಸ್ತೆತಡೆ ಚಳುವಳಿ ನಡೆಸಿದ್ದಾರೆ. ಕರಸೇವಕರಾಗಿ ಪರಿವರ್ತಿಸಲಾದ ಕೃಷ್ಣನ ಪೋಲೀಸರು ಹಿಂದು ಮುಂದೆ ನೋಡದೆ ಕೇಸ್ ದಾಖಲಿಸಿದ್ದಾರೆ. ಪತ್ರಿಕೆ, ಟಿ.ವಿ., ಮಾಧ್ಯಮಗಳು ತಮ್ಮ 'ಕಿರುಕಾಣಿಕೆ' ಸಲ್ಲಿಸುತ್ತಿವೆ.

ಈಚೆಗೆ ಮೈಸೂರಿನ ಸುಪ್ರಸಿದ್ಧ ಪ್ರಾದೇಶಿಕ ಪತ್ರಿಕೆ 'ಆಂದೋಲನ' ದಲ್ಲಿ ಸ್ಥಳೀಯ ಬಿಜೆಪಿ ನಾಯಕರು ಸಾರ್ವಜನಿಕ ಜಾಗ ಒತ್ತುವರಿ ಮಾಡಿಕೊಂಡಿದ್ದಾರೆಂದು ಸುದ್ದಿ ಪ್ರಕಟಿಸಿದ್ದು ನವೆಂಬರ್ 5 ರಂದು ಸಂಪಾದಕ ರಾಜಶೇಖರ ಕೋಟಿ ಅವರ ಮನೆಗೆ ನುಗ್ಗಿದ 'ದೇಶಭಕ್ತರು' ಧಾಳಿ ನಡೆಸಲು ಮುಂದಾಗಿದ್ದಾರೆ. ಇವು ಈಚೆಗೆ ಹೊರಬಂದ ಸಂಗತಿಗಳು. ಕಠಿಣ ಶಬ್ದಗಳಲ್ಲಿ ಖಂಡಿಸಬೇಕಾದ, ವಿರೋಧಿಸ ಬೇಕಾದ ಘಟನೆಗಳು. ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆಂದು ಚೀರಾಡುವ ದು... 'ಖಾವಿಪಡೆ'ಯ ನಿಜವಾದ ಅಜೆಂಡಾ ಗಳೇನು? ಬಿಜೆಪಿ ಎಲ್ಲಾ ನೆಲ ಕಚ್ಚುತ್ತಿರುವಾಗ ಈ ದೊಡ್ಡ ನಾಯಕರ ಅಟ್ಟಹಾಸ ಮಿತಿಮೀರುತ್ತಿ ರುವುದು ರಾಜ್ಯದ ಜನ ಬುದ್ಧಿಕಲಿಸದೇ ಇದ್ದರೆ ಹೇಗೆ?

ಪುಟ 2 ರಿಂದ

...........ಸಿಪಿಐ(ಎಂ) ಚಳುವಳಿ

ದೇಶದ ಶೇ. 6ರಷ್ಟು ಜನತೆ ಇದ್ದರೆ, ಆಹಾರ ಉತ್ಪಾದನೆ ಕೇವಲ ಶೇಕಡಾ 2ರಷ್ಟು ಮಾತ್ರ ಇದೆ.

ಇದೇ ಪರಿಸ್ಥಿತಿ ಮುಂದುವರೆದಲ್ಲಿ ಮುಂದಿನ 20 ವರ್ಷದಲ್ಲಿ ಆಹಾರಕ್ಕಾಗಿ ಹಾಹಾಕಾರ ಏಳಲಿದೆ. ಆದ್ದರಿಂದ ಕೇಂದ್ರ ರಾಜ್ಯ ಸರ್ಕಾರಗಳು ಆಹಾರ ಭದ್ರತೆಗಾಗಿ ಎಚ್ಚೆತ್ತುಕೊಂಡು ಕ್ರಮ ಕೊಳ್ಳಬೇಕೆಂದು ಖ್ಯಾತ ಕೃಷಿ ತಜ್ಞರಾದ ಶ್ರೀ ಸ್ವಾಮಿನಾಥನ್ ಅವರು ಸರ್ಕಾರಕ್ಕೆ ತಿಳಿಸಿದ್ದಾರೆ. ಯಾರೊಬ್ಬರನ್ನು ಹಸಿವಿನಿಂದ ಸಾಯುಲಿಕ್ಕೆ ಬಿಡಬಾರದೆಂದು ಸುಪ್ರಿಂ ಕೋರ್ಟ್ ಸರ್ಕಾರಗಳಿಗೆ ಎಚ್ಚರಿಸಿದೆ. ಹಸಿವನ್ನು ತಾಳಲಾರದೆ ಕೊಪ್ಪಳ ಜಿಲ್ಲೆಯ ಮುಕ್ತ ರಾಂಪೂರನಲ್ಲಿ ಇಡೀ ಕುಟುಂಬ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದೆ. ಬಳ್ಳಾರಿ ತಾಲ್ಲೂಕಿನ ಕಲ್ಲ ಕುಕ್ಕಿನಾಳ ಗ್ರಾಮದ ಯರ್ರಿಸ್ವಾಮಿ ಹಸಿವಿನಿಂದ ಸತ್ತಿದ್ದಾರೆ. ಬರಗಾಲ ಕಾಮಗಾರಿಗಳು ಇಲ್ಲದೇ ಬೆಂಗಳೂರು ಮುಂಬೈಗಳಲ್ಲಿ ಕೆಲಸ ಸಿಗದೇ ಮನೆ ಮಂದಿಗೆಲ್ಲ ಅನ್ನಹಾಕಿ ತಾನು ಉಪವಾಸ ಉಳಿದಿದ್ದಕ್ಕಾಗಿ ಯರಿಸ್ವಾಮಿ ಸತ್ತಿದ್ದಾನೆ. ಸರ್ಕಾರವು ಈ ಹಸಿವಿನ ಸಾವನ್ನು ಮುಚ್ಚಿಹಾಕಲು ಎಲ್ಲಾ ಪ್ರಯತ್ನ ನಾಚಿಕೆಯಿಲ್ಲದೆ ಮಾಡಿದೆ.

ಕೇಂದ್ರ ಸರಕಾರವು ರೇಷನ್ ವ್ಯವಸ್ಥೆಗೆ ಇರುವ ಸಬ್ಸಿಡಿ ಕಡಿತ ಮಾಡಿ ರೇಷನ್ ವ್ಯವಸ್ಥೆ ಹಾಳು ಮಾಡಲು ಹೊರಟಿದೆ. ರೈತರಿಂದ ಬೆಂಬಲ ಬೆಲೆ ನೀಡಿ ರೈತರ ಬೆಳೆ ಖರೀದಿ ಮಾಡುವುದನ್ನು, ಬಡರೈತ ಕೂಲಿಕಾರರಿಗೆ ಇರುವ ರೇಷನ್ ಪದ್ಧತಿಯನ್ನೂ ನಿಲ್ಲಿಸಲು ತೀರ್ಮಾನಿಸಿದೆ. ಈ ತೀರ್ಮಾನ ಕೃಷಿ ವ್ಯವಸ್ಥೆಯನ್ನು ಹಾಳುಮಾಡಲಿದೆ. ಈಗಾಗಲೇ ಬಿಜೆಪಿ ಅಧಿಕಾರಕ್ಕೆ ಬಂದ ನಂತರ 3 ರೂ. ಕೆ.ಜಿ ಇದ್ದ ಅಕ್ಕಿ ಬೆಲೆಯನ್ನು 6.25 ಕ್ಕೆ ದುಪ್ಪಟ್ಟು ಮಾಡಿದೆ. ಬಡವರು ಆಹಾರಧಾನ್ಯ ಖರೀದಿ ಮಾಡದಿದ್ದುದ್ದಕ್ಕಾಗಿ ರೇಷನ್ ಮಾರಾಟ ಆಗುತ್ತಿಲ್ಲ. ಹೊರ ದೇಶಗಳಿಗೆ 4 ರೂ. ಕೆ.ಜಿ.ಯಂತೆ ಬಿಜೆಪಿ ಸರ್ಕಾರ ಅಕ್ಕಿ ಮಾರಾಟ ಮಾಡುತ್ತಿದೆ.

ರಾಜ್ಯದ ಕಾಂಗ್ರೈ ಸರ್ಕಾರವು ಹಸಿರು ಕಾರ್ಡುಗಳನ್ನು ತೆಗೆದು ಹಳದಿ ಕಾರ್ಡುಕೊಟ್ಟಿದೆ. ಹಸಿರುಕಾರ್ಡಿಗೆ ಕೊಡುತ್ತಿರುವ ರೇಷನ್ ನಿಲ್ಲಿಸಿದೆ. ಹಸಿರು ಕಾರ್ಡುದಾರರು ಕಳೆದ ನಾಲ್ಕು ವರ್ಷದ ಕಾಂಗ್ರೈ ಆಡಳಿತದಲ್ಲಿ ಶ್ರೀಮಂತರಾಗಿದ್ದಾರೆ ಎಂದು ಹೇಳಿ ಹಸಿರು ಕಾರ್ಡನ್ನು ರದ್ದುಮಾಡಿದೆ. ಹಸಿರು ಕಾರ್ಡಿಗೆ ಸಿಗಬೇಕಾದ ಧಾನ್ಯವನ್ನು ಅದೇ ಬೆಲೆಯಲ್ಲಿ ಹಳದಿ ಕಾರ್ಡಿಗೆ ಮಾರಾಟ ಮಾಡಲಾಗುತ್ತಿದೆ. ಕಾಂಗ್ರೈ ಸರ್ಕಾರವು ಪ... ರಾಜಕೀಯಕ್ಕಾಗಿ ಬಣ್ಣ ಬದಲಾಯಿಸಿ ಕಾರ್ಡುಗಳನ್ನು ಹಂಚಲು ಕಸರತ್ತು ಮಾಡುತ್ತಿದೆ. ಅನಾವಶ್ಯಕವಾಗಿ ಬಡವರ ಮಧ್ಯದಲ್ಲಿ ಅಜ... ಹಾಕಿಸಲು ನೂರಾರು ರೂ. ಖರ್ಚು ಮಾಡಿಸಿರುವುದು ಜನ ವಿರೋಧಿ ನೀತಿಯಾಗಿದೆ. ಸರ್ಕಾರದ ಈ ಬಡವರ ವಿರೋಧಿ ನೀತಿಯನ್ನು ವಿರೋಧಿಸಿ ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ತಾಲ್ಲೂಕು ಕಛೇರಿಗಳೆದುರಿನಲ್ಲಿ ನವೆಂಬರ್ ... ರಂದು ದಿನವಿಡೀ ಧರಣಿ ನವೆಂಬರ್ 17 ರಂದು ಕಛೇರಿಗಳ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾಗಿ ಪ್ರತಿಭಟನೆ ಮಾಡಲು ಸಿಪಿಐ(ಎಂ) ರಾಜ್ಯಸಮಿತಿ ನಿರ್ಧರಿಸಿದೆ.

ಅಮೃತಸರದಲ್ಲಿ ಉದ್ಘಾಟನೆಗೊಂಡ ಡಿವೈಎಫ್ಐನ ರಾಷ್ಟ್ರಸಮ್ಮೇಳನ

ಡಿವೈಎಫ್ಐನ 7ನೇ ಅಖಿಲ ಭಾರತ ಸಮ್ಮೇಳನ ಅಮೃತಸರದಲ್ಲಿ ಉದ್ಘಾಟನೆಗೊಂಡಿದೆ. ಭಾರತದ ಯುವಜನತೆಯ ಮುಂದಿರುವ ಕಾರ್ಯಭಾರಗಳನ್ನು ಗುರುತಿಸಿ ವ್ಯಾಪಕ ಆಂದೋಲನ ರೂಪಿಸುವಲ್ಲಿ ಮಹತ್ವವಿರುವ ಸಮ್ಮೇಳನದ ವರದಿ

ಯಮುನಾ ಗಾಂವ್ಕಾರ್
ಅಮೃತ್‌ಸರ, ಪಂಜಾಬ್

ಸಾಮ್ರಾಜ್ಯಶಾಹಿ ವಿರೋಧಿ, ಸ್ವಾತಂತ್ರ್ಯ ಹೋರಾಟದ ಧೀರ ಪರಂಪರೆಯ ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರು ಹುತಾತ್ಮಸ್ತಂಭಕ್ಕೆ ಪುಷ್ಪಗುಚ್ಛವನ್ನಿಟ್ಟು ಹುತಾತ್ಮ ಸಂಗಾತಿಗಳನ್ನು ಸ್ಮರಿಸಿಕೊಳ್ಳುವ ಮೂಲಕ ಡಿ.ವೈ.ಎಫ್.ಐ. ನ 7ನೇ ಅಖಿಲಭಾರತ ಸಮ್ಮೇಳನ ನವೆಂಬರ್ 6 ರಂದು ಪ್ರಾರಂಭವಾಯಿತು.

ಜಲಿಯನ್‌ವಾಲಾಬಾಗ್ ನಗರದಲ್ಲಿ ಹುತಾತ್ಮ ಸಂಗಾತಿ ಗುರ್ನಾಮ್‌ಸಿಂಗ್ ಉಪ್ಪಾಲ ಮತ್ತು ಸೋಹನ್‌ಸಿಂಗ್ ದೇಸಿ ವೇದಿಕೆಯಲ್ಲಿ ನಡೆದ ಸ್ಫೂರ್ತಿದಾಯಕ ಸಮ್ಮೇಳನವನ್ನು ಪಂಜಾಬ್‌ನ ಗುರುನಾನಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಎಸ್.ಪಿ.ಸಿಂಗ್ ಉದ್ಘಾಟಿಸಿದರು.


ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಿ

ಸ್ವಾತಂತ್ರ್ಯ ಹೋರಾಟ ಮತ್ತು ಪ್ರಜಾಸತ್ತಾತ್ಮಕ, ಜಾತ್ಯಾತೀತ ಚಳುವಳಿಯಲ್ಲಿ ಪಂಜಾಬ್ ಮುಂದಿದೆಯಲ್ಲದೆ, ಭಾರತದಲ್ಲಿ ಯುವಜನರ ಧೀರ ಚಳುವಳಿಗೂ ಕೂಡ ನಾಂದಿಯಾಗಿದೆ. ಇಂದು ಸಾಮ್ರಾಜ್ಯಶಾಹಿಗಳು ಮತ್ತೊಂದು ರೀತಿಯಲ್ಲಿ ಅಂದರೆ ಡಬ್ಲ್ಯು.ಟಿ.ಒ, ಜಾಗತೀಕರಣ, ಖಾಸಗೀಕರಣದ ರೂಪದಲ್ಲಿ ಗುಲಾಮಗಿರಿಯನ್ನು ಹೇರುತ್ತಿವೆ. ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವರೂಪದ ಮೇಲೆ ಆ ಮೂಲಕ ಶಿಕ್ಷಣ ಮತ್ತು ಉದ್ಯೋಗದ ಮೇಲೆ ತೀವ್ರ ದಾಳಿ ಬಂದೊದಗುತ್ತಿದೆ. ಇದನ್ನು ಎದುರಿಸುವ ವಿರೋಧಿಸುವ ದೊಡ್ಡ ಸವಾಲು ಯುವಜನರ ಮುಂದಿದೆ' ಎಂದು ಡಾ. ಎಸ್.ಪಿ.ಸಿಂಗ್ ಹೇಳಿದರು.

'ಭಾರತದ ಭವ್ಯ ಪರಂಪರೆ ಮತ್ತು ನಾಗರಿಕತೆಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿರುವಾಗಲೇ ಕೇಂದ್ರ ಸರ್ಕಾರ ಶಿಕ್ಷಣವನ್ನು, ಸಾರ್ವಜನಿಕ ರಂಗದ ಎಲ್ಲ ಸೇವೆಗಳನ್ನು ಖಾಸಗೀಕರಿಸುತ್ತಿದೆ. ನಮ್ಮ ದೇಶದ ಯುವಜನರನ್ನು ದಿಕ್ಕು ತಪ್ಪಿಸಲು ವಿವಿಧ ರೀತಿಯ ಮಾದಕ ವಸ್ತುಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಒದಗಿಸುತ್ತಿವೆ ಎಂಬುದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ವಿದ್ಯಾರ್ಥಿ ಯುವಜನರ ಹಿತ ಕಾಯುವ, ದೇಶವನ್ನೂ ಕಾಪಾಡುವ ಇಂತಹ ಸಂಘಟನೆಗಳಲ್ಲಿ ಬಾಲ್ಯದಲ್ಲಿ ಭಾಗವಹಿಸಿದ್ದೆ ಎಂದರು.

ಯುವಜನರ ತ್ಯಾಗದ - ಕ್ರಾಂತಿಕಾರಿ ಪರಂಪರೆ ಡಿ.ವೈ.ಎಫ್.ಐ

ಡಿ.ವೈ.ಎಫ್.ಐನ ಅಖಿಲ ಭಾರತ ಮಾಜಿ ಅಧ್ಯಕ್ಷರಾದ ಎಂ.ಎ.ಬೇಬಿ (ಎಂ.ಪಿ) ಮಾತನಾಡುತ್ತ ಮೊದಲ ಸಮ್ಮೇಳನ ಲೂಧಿಯಾನದಲ್ಲಿ ಪ್ರತ್ಯೇಕವಾದಿ ಗಳ ಭಯದ



ಕರಿನೆರಳಲ್ಲಿ ಬಂದೂಕುಗಳ ಮಧ್ಯೆ ನಡೆದಿತ್ತು. ಆದರೆ ಡಿ.ವೈ.ಎಫ್.ಐ. ದೇಶವನ್ನು ಛಿದ್ರಗೊಳಿಸುವ ಎಲ್ಲಾ ಶಕ್ತಿಗಳ ಸೋಲಿಸಲು ಹೋರಾಟ ನಡೆಸಿದೆ. ಕ್ರಾಂತಿಕಾರಿ ಪರಂಪರೆಯ ಡಿ.ವೈ.ಎಫ್.ಐ ಮಾತ್ರ ದೇಶದ ಎಲ್ಲಾ ಅನಿಷ್ಟಗಳ ವಿರುದ್ಧ ದಿಟ್ಟ ಹೆಜ್ಜೆಯಿಟ್ಟಿರುವುದು ಎಂದರು.

ಜನವಾದಿ ಮಹಿಳಾ ಸಂಘಟನೆಯ ಪ್ರ.ಕಾರ್ಯದರ್ಶಿ ಬೃಂದಾ ಕಾರತ್ ಶುಭಕೋರಿ ಮಾತನಾಡಿ ಇಂದಿನ ಸಾಮಾಜಿಕ ಸಂಘರ್ಷದ ಸಮಾಜದಲ್ಲಿ ನಮ್ಮ ಯುವಜನರು ಪ್ರಾಣವನ್ನಾದರೂ ಕೊಟ್ಟೆವು, ತಾವು ನಂಬಿದ ಪ್ರಗತಿಪರ ಸಿದ್ಧಾಂತ ಬಿಡುವದಿಲ್ಲ, ದೇಶ ಒಡೆಯಲು ಬಿಡುವುದಿಲ್ಲ ಎಂದು ಹೋರಾಡುತ್ತಿದ್ದಾರೆ. ಸರ್ಕಾರ ಮತ್ತು ಸಮಾಜದ ಕ್ರೂರ ದಾಳಿಗೆ ಬಲಿಯಾಗಿದ್ದಾರೆ. ಭ್ರೂಣಹತ್ಯೆ, ವರದಕ್ಷಿಣೆ, ಲೈಂಗಿಕ ಕಿರುಕುಳ ಹೆಚ್ಚಿದೆ. ಸ್ತ್ರೀ ಜನಕ್ಕೆ ಕಷ್ಟದ ಪರಿಸ್ಥಿತಿ ಬಂದೊದಗಿದೆ. ಇವೆಲ್ಲದರ ವಿರುದ್ಧ ಬಲಿಷ್ಠ ಯುವಜನ ಚಳುವಳಿ ಕಟ್ಟಬೇಕು. ಆರ್ಥಿಕ, ರಾಜಕೀಯ ಚಳುವಳಿಯೊಂದಿಗೆ ಸಾಮಾಜಿಕ ಸುಧಾರಣಾ ಚಳುವಳಿ ಕೂಡ ಪ್ರಮುಖವಾಗಿ ನಡೆಯಬೇಕು. ಡಿ.ವೈ.ಎಫ್.ಐ. ನ ಯಾವುದೇ ಸದಸ್ಯನೂ ಕೂಡ ವರದಕ್ಷಿಣೆಯಿಲ್ಲದೆ ಮದುವೆ ಆಗುವ ಪ್ರತಿಜ್ಞೆ ಮಾಡಬೇಕಾಗಿದೆ' ಎಂದರು.

ಸಿಐಟಿಯು ಅಖಿಲಭಾರತ ಕಾರ್ಯದರ್ಶಿ ತಪನ್‌ಸೇನರು ಮಾತನಾಡುತ್ತ ಮಾನವೀಯತೆಯನ್ನೇ ಪ್ರಶ್ನಿಸುವ ಕ್ರೂರ ಬಂಡವಾಳಶಾಹಿಯನ್ನು ಸೋಲಿಸಲು ದುಡಿಯುವ ವರ್ಗದ ಹೋರಾಟದ ಧ್ವನಿ ಬಲಪಡಿಸಲು ಮುಂದಾಗಿರಿ ಎಂದರು.

ಸಮ್ಮೇಳನದಲ್ಲಿ ಶ್ರೀಲಂಕಾ, ಬರ್ಮಾ, ನೇಪಾಳ, ಉತ್ತರಕೋರಿಯಾ, ವಿಯೆಟ್ನಾಂ ಮುಂತಾದ ದೇಶಗಳ ಯುವಜನ ಚಳುವಳಿಯ ನಾಯಕರು ಮಾತನಾಡಿದರು. ಡಿ.ವೈ.ಎಫ್.ಐ ಅಧ್ಯಕ್ಷರಾದ ಎನ್.ಎನ್. ಕೃಷ್ಣದಾಸ ಸಂಚಾಲಕರಾಗಿರುವ ಅಧ್ಯಕ್ಷೀಯ ಮಂಡಳಿ ಸಭೆ ನಡೆಸಿಕೊಟ್ಟಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ.ಮಿಶ್ರ ಸ್ವಾಗತಿಸಿದರು. ಆರಂಭದಲ್ಲಿ ಪಂಜಾಬಿ ನೃತ್ಯರೂಪಕ ನಡೆಯಿತು. ಭಾರತದ ಎಲ್ಲ ರಾಜ್ಯಗಳಿಂದ ಆಗಮಿಸಿದ ಗಣನೀಯ ಸಂಖ್ಯೆಯ ಯುವತಿಯರನ್ನು ಒಳಗೊಂಡು ಸಾವಿರಕ್ಕೂ ಮಿಕ್ಕ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಹಲವು ಹೋರಾಟಗಳ ಐತಿಹಾಸಿಕ ಪರಂಪರೆಯಿರುವ ಪಂಜಾಬ್‌ನ ಅಮೃತ್‌ಸರ ನಗರ ಪೂರ್ತಿ ಡಿ.ವೈ.ಎಫ್.ಐ ಅಖಿಲ ಭಾರತ ಸಮ್ಮೇಳನಕ್ಕೆ ಶ್ವೇತಪತಾಕೆ ಮತ್ತು ಬಾವುಟ - ವಿವಿಧ ಬೇಡಿಕೆಗಳ ಗೋಡೆಬರಹ- ಬ್ಯಾನರ್‌ಗಳಿಂದ ಆವರಿಸಿದೆ. ಸಮ್ಮೇಳನವು 9-11-2003 ರಂದು ಬೃಹತ್ ರ್‍ಯಾಲಿ ನಡೆಸುವ ಮೂಲಕ ಮುಕ್ತಾಯಗೊಳ್ಳಲಿದೆ. ಭಾರತ-ಪಾಕ್ ಗಡಿ 'ವಾಘಾ' ಮೂಲಕ ಪಥ ಸಂಚಲನ ನಡೆಯಲಿದೆ. ○

"ದೇಶದ ಭವಿಷ್ಯ ಯುವಜನರ ಕೈಲಿದೆ: ರಕ್ಷಣೆಯ ಹೊಣೆ ಹೊರಲು ತಯಾರಾಗಿ"

- ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್

"ದೇಶವನ್ನು ಮುಂದಕ್ಕೊಯ್ಯುವ ಮತ್ತು ನಿಜವಾದ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವ ಡಿ.ವೈ.ಎಫ್.ಐ ದೇಶದ ಹೆಮ್ಮೆ. ಅಂದು ಸಿಕ್ಕಿದುದು ರಾಜಕೀಯ ಸ್ವಾತಂತ್ರ್ಯ ಅಷ್ಟೆ. ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯಕ್ಕಾಗಿ ನಾವು ನಡೆಸಿದ ಹೋರಾಟವನ್ನು ಮುಂದಕ್ಕೊಯ್ಯಿರಿ. ಸಾಮ್ರಾಜ್ಯಶಾಹಿ ಮತ್ತು ಸಮಾಜವಾದ ಏಕಕಾಲದಲ್ಲಿ ಒಂದು ದೇಶದಲ್ಲಿರಲು ಸಾಧ್ಯವಿಲ್ಲ. ಹಾಗಾಗಿ ನಮ್ಮನ್ನು ಗುಲಾಮರನ್ನಾಗಿಸುತ್ತಿರುವ ಹೊಸ ಆರ್ಥಿಕ ನೀತಿಯ ದಾಳಿ ವಾಪಸ್ಸಾಗಬೇಕು. ಆಳುವವರು ಅಮೇರಿಕ ಕಟ್ಟುವ ಸಲುವಾಗಿ ನಾಚಿಕೆಯಿಲ್ಲದೆ ನಮ್ಮನ್ನು ದೋಚಲು ಮುಂದಾಗಿದ್ದಾರೆ. ನಾವು ನಮ್ಮ ದೇಶ ಕಟ್ಟೋಣ" ಎಂದು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಕರೆ ನೀಡಿದರು.

ದಿನೇ ದಿನೇ ಸ್ತ್ರೀಯರ, ನಿರುದ್ಯೋಗಿಗಳ ಆತ್ಮಹತ್ಯೆ ಹೆಚ್ಚುತ್ತಿದೆ. ವರದಕ್ಷಿಣೆ ಸಾವು ಆತಂಕಕಾರಿ. ಜಾತಿ-ಲಿಂಗ ತಾರತಮ್ಯ ಹೆಚ್ಚುತ್ತಿದೆ. ಅಸಂಘಟಿತ ಕಾರ್ಮಿಕರಿಗೆ ರಕ್ಷಣೆಯಿಲ್ಲ. ಬಂಡವಾಳಶಾಹಿಯು ಜನರಿಗಿರುವ ಕಾನೂನು ಜಾರಿಮಾಡಿಲ್ಲ. ಹಿಂದುತ್ವ ಮತ್ತು ಜನವಿರೋಧಿ ಆರ್ಥಿಕ ನೀತಿ ತಂದಿರುವುದೆಂದೇ ಬಂಡವಾಳಶಾಹಿಯ ಸಾಧನೆ. ಹಾಗಾಗಿ ಭಾರತದ ಜನತೆಗೆ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಸಿಗುವವರೆಗೆ ಈಗಿರುವ ಸ್ವಾತಂತ್ರ್ಯ ದಿನಕ್ಕೆ ಅರ್ಥಬರುವುದಿಲ್ಲ. ಹಾಗಾಗಿ ಯುವಜನರು ಆರಾಂ ಆಗಿ ಇರಲು ಇದು ಸಮಯವಲ್ಲ. ದೇಶ ನಿಮ್ಮ ಕೈಲಿದೆ, ಅದರ ತುರ್ತು ರಕ್ಷಣೆ ನಿಮ್ಮೆಲ್ಲರ ಹೊಣೆ' ಎಂದು ಸ್ವಾತಂತ್ರ್ಯ ಸೇನಾನಿ ಕ್ಯಾ.ಲಕ್ಷ್ಮಿ ಸೆಹಗಲ್‌ರು ಶುಭಾಸ್ ಚಂದ್ರ ಭೋಸರ ಐ.ಎನ್.ಎ ಝಾನ್ಸಿ ರೆಜಿಮೆಂಟಿನ ಅಂದಿನ ತಮ್ಮ ಅನುಭವ ಹಂಚಿಕೊಂಡರು.

.... ಮಹಾಕ್ರಾಂತಿಯ ಪ್ರಸ್ತುತತೆ

...ಟ 6 ರಿಂದ

...ವ್ಯವಸ್ಥೆಯ ಭವಿಷ್ಯದೊಡನೆ ಬೆಸೆಯಲು ...ಧ್ಯವಾದದ್ದು. ಈ ಕಣ್ಣೋಟವನ್ನು ಭಾರತ ...ಮ್ಯುನಿಸ್ಟ್ ಪಕ್ಷವು ಮತ್ತಷ್ಟು ಬಲಗೊಳಿಸಿತು.

...ರತದ ಮೇಲೆ ಪ್ರಭಾವ


...ರಷ್ಯಾದ ಸಮಾಜವಾದಿ ಕ್ರಾಂತಿಯು ನಮ್ಮ ...ಮಾಜದಲ್ಲಿ ಇನ್ನೂ ವಿಶಾಲ ಪರಿಣಾಮ ಬೀರಿದೆ. ...ತಂತ್ರ್ಯ ನಂತರ ದೇಶವಾಳಿದ ಆಳುವ ...ರ್ಗಗಳು ರಷ್ಯಾದ ಕ್ರಾಂತಿಯನ್ನು ತಮ್ಮ ...ನುಕೂಲಕ್ಕೆ ಬಳಸಿಕೊಂಡರು. ಯೋಜನಾ ...ಯೋಗದಂತಹ ಸಂಸ್ಥೆ, ಬಡತನ ಮತ್ತು ...ನಕ್ಷರತೆಯನ್ನು ನಿರ್ಮೂಲನೆಗೊಳಿಸುವ ಗುರಿ, ...ದೊಡ್ಡ ಕೈಗಾರಿಕೆಗಳನ್ನು ಪ್ರಭುತ್ವವೇ ನಡೆಸುವುದು, ...ಮ್ಮ ಸಂವಿಧಾನದಲ್ಲಿ ಜಾತ್ಯಾತೀತ ಮತ್ತು ...ಮಾಜವಾದ ಎಂಬಂಶಗಳನ್ನು ಸೇರಿಸಿರುವುದು ...ಷ್ಯಾದ ಕ್ರಾಂತಿ ನಮ್ಮ ಸಮಾಜದ ಮೇಲೆ ...ರುವ ಪ್ರಭಾವಕ್ಕೆ ಸಾಕ್ಷಿ.

...ಮ್ರಾಜ್ಯಶಾಹಿ ಹೊಸ ಧಾಳಿ

...ಆದರೆ ರಷ್ಯಾದ ಸಮಾಜವಾದಿ ವ್ಯವಸ್ಥೆಯ ...ನಾನಂತರ ಇತಿಹಾಸದ ಪ್ರಕ್ರಿಯೆಯನ್ನು ...ಮುರುವುಗೊಳಿಸುವ ಒಂದು ವಿಧಾನ ಕಾಣುತ್ತಿದೆ. ಸಾಮ್ರಾಜ್ಯಶಾಹಿಯು ಮತ್ತೆ ತನ್ನ ಆಟಗಳನ್ನು ಆರಂಭಿಸಿದೆ. ಆದರೆ ಇದು ಯಶಸ್ವಿಯಾಗುವುದಿಲ್ಲವೆಂದು ಇರಾಕಿನ ಘಟನೆಗಳು ತೋರಿಸುತ್ತಿವೆ. ಅಮೇರಿಕಾಕ್ಕೆ ತನ್ನ ಮಿತ್ರರ ಮನವೊಲಿಸುವುದು ಸಾಧ್ಯವಾಗಿಲ್ಲ ಮಾತ್ರವಲ್ಲ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಇರಾಕಿನ ಮೇಲಿನ ಆಕ್ರಮಣಕ್ಕೆ ಬೆಂಬಲಗಳಿಸುವುದು ಸಾಧ್ಯವಾಗಿಲ್ಲ. ಅಮೇರಿಕಾದ ಅಧ್ಯಕ್ಷ ಯುದ್ಧ ಗೆದ್ದಿದ್ದೇವೆ ಎಂದು ಘೋಷಿಸಿದ ನಂತರವೂ 210 ಅಮೇರಿಕಾದ ಸೈನಿಕರು ಸತ್ತಿದ್ದಾರೆ. ಒಟ್ಟಾರೆ ಈ ಸಂಖ್ಯೆ 348 ಕ್ಕೇರಿದೆ. ವಿಯೆಟ್ನಾಮ್ ಮತ್ತು ಕೋರಿಯಾ ಯುದ್ಧದ ಪಿಶಾಚಿಗಳು ಅಮೇರಿಕಾವನ್ನು ಬೇಟೆ ಯಾಡಲು ಆರಂಭಿಸಿವೆ. ಏಕಧ್ರುವಿ ಜಗತ್ತು ನಿರೀಕ್ಷಿಸಿದಷ್ಟು ಸ್ಥಿರವಲ್ಲ ಎಂಬುದು ಸಾಬಿತಾಗುತ್ತದೆ. ಅಮೇರಿಕ ಏಕಧ್ರುವಿ ಜಗತ್ತನ್ನು ನಿರ್ಮಿಸಿ ಮುಂದುವರೆಯಲು ಬಯಸುತ್ತಿರುವಾಗಲೇ ಸೋವಿಯತ್ ರಷ್ಯಾದ ಕಾಲದಲ್ಲಿ ಇದ್ದಂತಹ ಬಹುಧ್ರುವಿ ಜಗತ್ತು ಮತ್ತೆ ನಿರ್ಮಾಣವಾಗುತ್ತಿದೆ. ಇತ್ತೀಚಿಗೆ ಕ್ಯಾನ್‌ಕುನ್‌ನಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಆದ ಹಿನ್ನಡೆಯು ಸಾಮ್ರಾಜ್ಯಶಾಹಿ ಯನ್ನು ತಡೆಯಲು ಸಾಧ್ಯವಿದೆ ಎಂಬುದರ ದ್ಯೋತಕವಾಗಿದೆ. ತನ್ನ ಸಾಮ್ರಾಜ್ಯಶಾಹಿಪರವಾದ ನೀತಿಯ ಹೊರತಾಗಿಯು ಭಾರತವು ಮೂರನೇ ಜಗತ್ತಿಗೆ ದೇಶಗಳ ಜೊತೆ ಸ್ಥಿರವಾಗಿ ನಿಂತಿದೆ. ವಿರೋಧ ಪಕ್ಷಗಳ ಟೀಕೆ ಮತ್ತು ಮುಂಬರುವ ಚುನಾವಣೆಗಳ ಭಯದಿಂದಾಗಿ ಭಾರತ ಸರ್ಕಾರವು ಇರಾಕಿನ ಆಕ್ರಮಣದಲ್ಲಿ ಅಮೇರಿಕಾಕ್ಕೆ ಸಹಾಯ ಮಾಡಲು ತನ್ನ ಸೇನೆಯನ್ನು ಕಳುಹಿಸಲಿಲ್ಲ ಎಂಬುದನ್ನು ನೋಡಬೇಕಾಗಿದೆ.



ನಮ್ಮ ಮುಂದಿರುವ ಗುರಿ ಸ್ಪಷ್ಟವಾಗಿದೆ. ಸೋವಿಯತ್ ರಷ್ಯಾದ ಪತನ ನಂತರದಲ್ಲಿ ಸಾಮ್ರಾಜ್ಯಶಾಹಿಯ ಆಕ್ರಮಣಗಳು ಹೆಚ್ಚಾಗಿದ್ದಾಗ್ಯೂ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ಮತ್ತು ವರ್ಗರಹಿತ ಸಮಾಜ ನಿರ್ಮಾಣದ ಗುರಿಯು ನಮ್ಮ ಮುಂದಿದೆ. ಆದರೆ ಇತಿಹಾಸದ ಬೆಳವಣಿಗೆಗಳನ್ನು ಸರಿಯಾಗಿ ಅರ್ಥೈಸಿಕೊಂಡು ನಾವು ಕೆಲಸ ನಿರ್ವಹಿಸುತ್ತಿರುವ ಪ್ರದೇಶದ ಪರಿಸ್ಥಿತಿಯನ್ನು ಅರಿತುಕೊಂಡು ವರ್ಗಾ ಬಲಾಬಲಗಳನ್ನು ನೋಡಿಕೊಂಡು ನಾವು ಇಂತಹ ಹೋರಾಟವನ್ನು ಮಾಡಬೇಕಾಗಿದೆ. ಬದಲಾವಣೆಗಾಗಿ ಕೆಲಸ ಮಾಡುವುದು ಅತ್ಯಂತ ಸ್ಫೂರ್ತಿಯ ಕೆಲಸ ಆದರೆ ಸಂಘಟಿತವಾಗಿ ಮತ್ತು ವೈಜ್ಞಾನಿಕವಾಗಿ ಬದಲಾವಣೆಗಾಗಿ ಕೆಲಸ ಮಾಡುವುದು ದುಡಿಯುವ ಜನಸಮುದಾಯದ ಐಕ್ಯತೆ ಮತ್ತು ಶಕ್ತಿಯನ್ನು ಬಯಸುತ್ತದೆ. ಹಾಗೆಯೇ ಇದು ಅಪಾರ ತಾಳ್ಮೆ ಮತ್ತು ವಿಶ್ಲೇಷಣೆಯನ್ನು ಬಯಸುತ್ತದೆ. ಯಾವುದು ತನ್ನಿಂದ ತಾನೇ ಸಂಭವಿಸುವುದಿಲ್ಲ. ಇದರಲ್ಲಿ ಯುವ ಜನತೆ ಅತ್ಯಂತ ಗಂಭೀರ ಪಾತ್ರವನ್ನು ವಹಿಸಬೇಕಾಗಿದೆ. ಮಾನವ ಜನಾಂಗ ಭವಿಷ್ಯ ಅವರ ಕೈಯಲ್ಲಿದೆ. ○



ಅಂತರ್‌ರಚನಾ ಸೌಕರ್ಯಗಳಲ್ಲಿ ಚೀನಾ ಭಾರತಕ್ಕಿಂತ ಮುಂದು

ಚೀನಾ ಮತ್ತು ಭಾರತಗಳನ್ನು ಹೋಲಿಸುವುದು ಸಾಮಾನ್ಯವಾಗಿ ಹೋಗಿದೆ. ಭಾರತದ ಉದಾರೀಕರಣವಾದಿಗಳಂತೂ ಭಾರತಕ್ಕೆ ಜಾಗತಿಕ ವ್ಯಾಪಾರದ ಸಂದರ್ಭದಲ್ಲಿ ಹಲವು ಅನುಕೂಲಗಳಿವೆ ಎಂದು ಹೇಳುತ್ತಿದ್ದಾರೆ.

ಹೆಚ್‌ಪಿ ಎಂಬ ಬಹುರಾಷ್ಟ್ರೀಯ ಕಂಪ್ಯೂಟರ್ ಕಂಪನಿಯ ಪ್ರಕಾರ ಮೂಲಭೂತ ಸೌಕರ್ಯಗಳಲ್ಲಿ ಭಾರತಕ್ಕಿಂತ ಚೀನಾ ಬಹಳ ಮುಂದಿದೆಯಂತೆ. ಭಾರತದಲ್ಲಿ ಪೂರೈಕೆ ಕೊಂಡಿಗಳು ಚೀನಾದಲ್ಲಿನ ದರಕ್ಕಿಂತ ಸಂಕೀರ್ಣವಾಗಿದೆ ಎಂದು ಈ ಕಂಪನಿಯ ಪ್ರಾದೇಶಿಕ ನಿರ್ದೇಶಕರು ಹೇಳಿದ್ದಾರೆ.

ಚೀನಾದೊಡನೆ ಸ್ಪರ್ಧೆ ಮಾಡಲು ನಮ್ಮ ಆತರಿಕ ನೀತಿಗಳಲ್ಲಿ ನಾವು ಬದಲಾವಣೆ ತಂದು ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕೆಂಬುದನ್ನು ಉದಾರೀಕರಣವಾದಿಗಳು ಎಂದು ತಿಳಿದುಕೊಂಡಾರು?


ಸಾಲ ನೀತಿಯ ಮಧ್ಯಾವಧಿ ಸಮೀಕ್ಷೆ

ಭಾರತೀಯ ರಿಸರ್ವ್ ಬ್ಯಾಂಕ್ ತನ್ನ 2003-04ರ ಸಾಲ ನೀತಿಯ ಮಧ್ಯಾವಧಿ ಸಮೀಕ್ಷೆ ನಡೆಸಿದೆ. ಸಾಮಾನ್ಯವಾಗಿ ಮಧ್ಯಾವಧಿ ಸಮೀಕ್ಷೆಯೆಂದರೆ ಈ ನೀತಿಯಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗುತ್ತದೆ. ಆರ್ಥಿಕ ದಿನನಿತ್ಯ ಬದಲಾವಣೆ ಆಗುತ್ತಲೇ ಇರುವುದರಿಂದ ಅದಕ್ಕೆ ತಕ್ಕಂತೆ ಈ ನೀತಿಯಲ್ಲಿ ಬದಲಾವಣೆಗಳನ್ನು ತರಲಾಗುತ್ತದೆ.

ಈ ಸಾರಿ ಐ.ಎಂ.ಎಫ್.ನ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿ ಬಂದಿರುವ ಡಾ.ವೈ.ವಿ.ರೆಡ್ಡಿಯವರು ಗವರ್ನರ್ ಆಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ಮಾಡುತ್ತಿರುವ ಮೊದಲ ಸಮೀಕ್ಷೆ.

ನೀತಿಯಲ್ಲಿ ಯಾವುದೇ ತರಹದ ಬದಲಾವಣೆಗಳನ್ನು ಮಾಡಿಲ್ಲ. ಬ್ಯಾಂಕ್ ಸಾಲದ ದರವನ್ನು ಇರುವ ದರದಲ್ಲೇ ಬಿಡಲಾಗಿದೆ. ರೆಡ್ಡಿಯವರ ಪ್ರಕಾರ ಇರುವ ನೀತಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದ್ದರಿಂದ ಈಗ ಇಲ್ಲಿ ಕೈಹಾಕುವ ಅವಶ್ಯಕತೆ ಸದ್ಯಕ್ಕಿಲ್ಲ.

ಉದಾರೀಕರಣ ಪ್ರಾರಂಭವಾದಾಗಿನಿಂದ ದೇಶದ ಕೇಂದ್ರ ಬ್ಯಾಂಕು ಆರ್ಥಿಕದ ವಿಷಯದಲ್ಲಿ ಅದರಲ್ಲೂ ಹೆಚ್ಚಾಗಿ ದೇಶದ ಬಡಜನತೆಯ ಪರವಾಗಿ ಕೈಹಾಕುವುದನ್ನು ಬಿಟ್ಟುಕೊಟ್ಟಿದೆ. ಇದರ ಅರ್ಥ ಬಂಡವಾಳಿಗರ ಪರವಾಗಿ ಅದು ಸತತವಾಗಿ ನೀತಿಗಳನ್ನು ರೂಪಿಸುತ್ತಿದೆ. ಹಣಕಾಸು ವಲಯವನ್ನು ಇಂತಹ ಒಲವುಗಳಿಗಿಂದ ತುಂಬುವ ಕೆಲಸವನ್ನು ಮಾಡುತ್ತಿದೆ.


ಆರ್‌ಬಿಐ ಗವರ್ನರ್ ರೆಡ್ಡಿ

ಬಂಡವಾಳಿಗರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ, ಜನ ಸಾಮಾನ್ಯರಿಗೆ ತಮ್ಮ ಉಳಿತಾಯದ ಮೇಲೆ ಅತಿ ಕಡಿಮೆ ಬಡ್ಡಿ ಇತ್ಯಾದಿಗಳೆಲ್ಲ ಇಂತಹ ನೀತಿಗಳ ಪರಿಣಾಮಗಳು.

ಆದ್ಯತೆಯ ವಲಯವಾದ ಕೃಷಿಗೆ ಬೇಕಾದ ಸಾಲ ಸಿಗದೇ ಇರುವುದು ಈ ಬಗ್ಗೆ ಬೇಕಾದಷ್ಟು ಗಮನ ನೀಡದೇ ಇರುವುದು ಸಣ್ಣ ಕೈಗಾರಿಕೆಗಳ ಉದಾರೀಕರಣದಡಿ ನಲುಗಿ ಹೋಗುತ್ತಿರುವುದು ಇವೆಲ್ಲ ಇವತ್ತಿನ ವಾಸ್ತವಗಳು.

ಬಂಡವಾಳಿಗರಿಗೆ ಶೇ.5-6 ಬಡ್ಡಿದರದಲ್ಲಿ ಸಾಲ ಸಿಗುವಂತಾದಾಗ ರೈತರಿಗೆ ಇದೇ ದರದಲ್ಲಿ ಸಾಲ ಸಿಗುವಂತಾಗಲಿ ಎಂಬ ಕಾಳಜಿಯೂ ಇಂದು ಇಲ್ಲ. ರೆಡ್ಡಿಯವರ ಸಾಲ ನೀತಿಯಿಂದ ಒಂದು ಮಾತು ಸ್ಪಷ್ಟವಾಗುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ಹಿಂದೆಯೂ ಐಎಂಎಫ್ ನೀತಿಗಳ ಪ್ರಕಾರವೇ ಕೆಲಸ ಮಾಡುತ್ತಿತ್ತು. ಆದ್ದರಿಂದ ಇಂದು ಐಎಂಎಫ್‌ನ ಜನರೇ ಗವರ್ನರ್ ಆದಾಗ ಅದು ಮುಂದುವರಿಯುತ್ತಿದೆ. ಯಾವುದೇ ಬದಲಾವಣೆಯ ಅವಶ್ಯಕತೆ ಇಲ್ಲ ಎಂದು.

ಈಗ ಈ ನೀತಿಗಳು ವಿಶಾಲ ಜನಸಮೂಹದ ಪರವಾಗಿ ಇರುವ ಬದಲು ಪೂರ್ತಿಯಾಗಿ ಬಂಡವಾಳಿಗರ ಪರವಾಗೇ ಇರುತ್ತದೆ. ಇಲ್ಲಿ ಯಾವುದೇ ಆಳುಕಿನ ಪ್ರಶ್ನೆ ಇಲ್ಲ. ದೇಶದ ಹಲವೆಡೆ ಸಾಲದ ಹೊರೆಯಿಂದಾಗಿ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಈ ಪ್ರಶ್ನೆ ಇಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಪ್ರಸ್ತುತವಲ್ಲ. ಆಳುವ ವರ್ಗದ ಹಿತರಕ್ಷಣೆ ಮಾತ್ರ ಅದರ ಇಂದಿನ ಕಾಳಜಿ ಅಲ್ಲವೆ?

ಜೀತಕ್ಕೆ ಮಣೆ ಹಾಕಿದವರು

ರಾಜ್ಯದ ಕೃಷ್ಣ ಸರ್ಕಾರ ನಾಲ್ಕು ವರ್ಷಗಳನ್ನು ಕಳೆದ ಸಂಭ್ರಮದಲ್ಲಿದೆ. ಸಾಧನೆಗಳ ಪಟ್ಟಿಯನ್ನು ಪೇಪರುಗಳಲ್ಲೆಲ್ಲ ಪ್ರಕಟ ಮಾಡಿಕೊಂಡಿದೆ. ಇದು ಸರ್ಕಾರಗಳ ಹವ್ಯಾಸ. ಅವರ ಅವ್ಯವಹಾರಗಳನ್ನು ಮುಚ್ಚಿಕೊಳ್ಳುವ ರೀತಿಯೂ ಹೌದು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಎ.ಎಸ್.ಆನಂದ ಅವರು ಕೃಷ್ಣ ಸರ್ಕಾರದ ಕಾಳಜಿಗಳ ಮಟ್ಟವನ್ನು ಎತ್ತಿ ತೋರಿಸಿದ್ದಾರೆ. ಒಂದು ಮಾನವ ಹಕ್ಕು ಆಯೋಗ ನಡೆಸಿದ ಸಮೀಕ್ಷೆಯ ಪ್ರಕಾರ 1862 ಜೀತದಾಳುಗಳನ್ನು ಗುರುತಿಸಲಾಗಿತ್ತಂತೆ. ಈ ಜೀತದಾಳುಗಳನ್ನು ಜೀತ ತಪ್ಪಿಸಿ ನೆಲೆಗೊಳಿಸುವ ಕಾರ್ಯವನ್ನು ಈ ಸರ್ಕಾರ ಮಾಡಿಲ್ಲ ಎಂದು ಅವರು ಹೇಳಿದ್ದಾರೆ.

ಜೀತ ಪದ್ಧತಿ ಅತ್ಯಂತ ಕ್ರೂರ ಪದ್ಧತಿ. ಯಾವುದೇ ನಾಗರಿಕ ಸಮಾಜ ಈ ಬಗ್ಗೆ ತಲೆ ತಗ್ಗಿಸಬೇಕು. ರಾಜ್ಯವನ್ನೇ ಹೈಟೆಕ್ ಮಾಡುವ ಸರ್ಕಾರಕ್ಕೆ ಜೀತ ಪದ್ಧತಿಯನ್ನು ನಿರ್ಮೂಲಗೊಳಿಸುವ ಕಾಳಜಿಯಿಲ್ಲ.


ಜೀತದಂತಹ ಪದ್ಧತಿ ಜಾರಿಯಲ್ಲಿರುವ ಸಮಾಜ ಅಭಿವೃದ್ಧಿಯ ಮಾತನಾಡಲೂ ಅನರ್ಹ. ಅಂತಹ ಪದ್ಧತಿಗೆ ಕೊಡಲಿಯೇಟು ಹಾಕಲು ವಿಫಲವಾದ ಸರ್ಕಾರ ಪತ್ರಿಕೆಗಳಲ್ಲಿ ನಾಲ್ಕು ವರ್ಷಗಳ ಸಾಧನೆಗಳ ಬಗೆಗೆ ಪ್ರಚಾರ ಮಾಡಿಕೊಂಡರೆ ಇದಕ್ಕಿಂತ ಹೆಚ್ಚಿನ ತಮಾಷೆ ಇನ್ನೇನಿದ್ದಿತು?

ಬಿಪಿಎಲ್ ಕಾರ್ಮಿಕ ನಾಯಕರಿಗೆ ಜೀವಾವಧಿ ಶಿಕ್ಷೆ

ಸರ್ಕಾರ-ಮಾಲಿಕರ ಪಿತೂರಿ

ಬಿಪಿಎಲ್ ಕಾರ್ಮಿಕರು ತಮ್ಮ ಹಕ್ಕುಗಳಿಗೋಸ್ಕರ ಸಂಘಟಿತರಾಗಿ ಹೋರಾಟ ಪ್ರಾರಂಭ ಮಾಡಿದ ತಕ್ಷಣ ಸುಮಾರು 500 ಕಾರ್ಮಿಕರ ವಜಾ, 300 ಕ್ಕೂ ಹೆಚ್ಚು ಜನರನ್ನು ಸಸ್ಪೆಂಡ್ ಮಾಡಿ, ಈ ಧಾಳಿಗಳಿಗೆ ಪೂರಕವಾಗಿ ಹೆಚ್ಚಿನ ಕ್ರಿಮಿನಲ್ ಕೇಸುಗಳನ್ನು ಹಾಕಿರುತ್ತಾರೆ. ಇವುಗಳನ್ನು ಎದುರಿಸಿ ಹೋರಾಟ ಮಾಡುತ್ತಿದ್ದ ಕಾರ್ಮಿಕರನ್ನು ಹಾಗೂ ಮುಖಂಡರನ್ನು ಬಗ್ಗುಬಡಿಯಲು ಆಡಳಿತವರ್ಗ, ಪೊಲೀಸ್ ಹಾಗೂ ಸರ್ಕಾರದ ಜೊತೆಗೂಡಿ ಹಲವಾರು ಪ್ರಯತ್ನಗಳನ್ನು ಮಾಡಿದ್ದು, ಇದಕ್ಕೆ ಸಂಘಟನೆ ಜಗ್ಗದೆ ಸರ್ಕಾರದ ಗಮನ ಸೆಳೆಯಲು ಬೆಂಗಳೂರಿನ ಕೆ.ಆರ್.ಸರ್ಕಲ್‌ನಲ್ಲಿ ಸಾಮೂಹಿಕ ಹಾಗೂ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದರು. ನಂತರದಲ್ಲಿ 800 ಕ್ಕೂ ಹೆಚ್ಚು ಜನ ಕಾರ್ಮಿಕರು ಮತ್ತು ಮುಖಂಡರು ಜೊತೆಗೂಡಿ ಜೈಲ್ ಭರೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸರ್ಕಾರ, ರಾಜ್ಯದ ನಾನಾ ಮೂಲೆಗಳಿಂದ ಬಂದಂತಹ, ಅದರಲ್ಲಿಯೂ ಹೆಚ್ಚು ಮಹಿಳಾ ಕಾರ್ಮಿಕರನ್ನು ಬಂಧಿಸಿ ಜೈಲಿನಲ್ಲಿಟ್ಟಿದ್ದರು. ಇವರ ಜೊತೆಗೆ ಸಿಐಟಿಯು ಮುಖಂಡರಾದ ಹೆಚ್.ಎಸ್.ಗೋಪಾಲಗೌಡ, ಎಸ್.ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಟಿ.ಕೆ.ಎಸ್.ಕುಟ್ಟಿ ಪಾಲ್ಗೊಂಡಿದ್ದರು. 8 ದಿನಗಳ ನಂತರ ಬಿಡುಗಡೆ ಮಾಡಿದ ಸರ್ಕಾರ, ಇವೆಲ್ಲಾ ರೀತಿಯಲ್ಲಿ ದಾಳಿ ದಬ್ಬಾಳಿಕೆಗಳನ್ನು ನಡೆಸಿದ ಆಡಳಿತ ವರ್ಗ ಕಾರ್ಮಿಕರು ಇದಾವುದಕ್ಕೂ ಮಣಿಯದಿದ್ದಾಗ ಕೊನೆಯ ಅಸ್ತ್ರವಾಗಿ ಮಾರ್ಚ್ 25 ರ ಘಟನೆ ಬಿಪಿಎಲ್ ಕಾರ್ಮಿಕರ ವ್ಯಾನಿಗೆ ಯಾರೋ ದುಷ್ಕರ್ಮಿಗಳು (ಬೆಂಕಿ ಹಚ್ಚಿದ ಘಟನೆ ಬಳಸಿ) ನೆಪ ಮಾಡಿಕೊಂಡು 302 ಸೆಕ್ಷನ್ ಅಡಿಯಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸರ್ಕಾರದ ನಿರ್ದೇಶನದಂತೆ ಆಡಳಿತ ವರ್ಗದ ಜೊತೆಗೂಡಿ, ಉಪವಾಸಕ್ಕೆ ಕುಳಿತಿದ್ದ 44 ಜನರನ್ನು ಕಾರಾಗೃಹಕ್ಕೆ ಕಳುಹಿಸಿತು. ಸುಮಾರು ಎರಡೂವರೆ ವರ್ಷ ಅವರಿಗೆ ಜಾಮೀನು ಸಹ ನೀಡದಂತೆ ನಿಗಾವಹಿಸಿ ಜಾಮೀನು ಸಿಗದ ವಾತಾವರಣ ಸೃಷ್ಟಿ ಮಾಡಿತು. ನಂತರ ಜಾಮೀನಿನ ಮೇಲೆ ಹೊರಬಂದ ಕಾರ್ಮಿಕರು, ಮುಖಂಡರು ಸಂಘಟನೆಯ ಹಾಗೂ ಹೋರಾಟದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಿಐಟಿಯು ಸಂಗಟನೆಯಲ್ಲಿ ಸಕ್ರಿಯವಾಗಿ ತೊಡಗಿದ್ದ ಮುಖಂಡರಾದ ಕಾಂ.ಆರ್.ಶ್ರೀನಿವಾಸ್ ಹಾಗೂ ಕಾಂ.ಟಿ.ಕೆ.ಎಸ್.ಕುಟ್ಟಿ ಮತ್ತು ಸಕ್ರಿಯ ಕಾರ್ಯಕರ್ತರಾದ ಕಾಂ.ರಮೇಶ್, ಕಾ.ಧರಣೇಶ್, ಕಾಂ.ಜಗದೀಶ್, ಕಾ.ಶರತ್, ಕಾ.ರವಿನಂದನ್ ರವರನ್ನು ದಿ.13-10-2003 ರಂದು ನ್ಯಾಯಾಲಯ ತೀರ್ಪು ಹೊರಡಿಸಿ ಈ 7 ಜನರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ. ಇದು ಮುಂದಿನ ಕಾರ್ಮಿಕ ಹೋರಾಟಗಳನ್ನು ಹಾಗೂ ಚಳುವಳಿಯನ್ನು ದಮನ ಮಾಡಲು ಒಂದು ವ್ಯವಸ್ಥಿತ ಸಂಚು ಆಗಿರುತ್ತದೆ. ಸರ್ಕಾರ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡುತ್ತ ಬಂಡವಾಳಗಾರರನ್ನು ಮೆಚ್ಚಿಸಲು ಈ ರೀತಿಯಾದ ಕಾರ್ಯಕ್ಕೆ ಇಳಿದಿರುವುದನ್ನು ಸಿಐಟಿಯು 9ನೇ ರಾಜ್ಯ ಸಮ್ಮೇಳನ ಖಂಡಿಸಿದೆ ಮತ್ತು ಈ ವಿಷಯದಲ್ಲಿ ಮುಂದಿನ ದಿನಗಳಲ್ಲಿ ಕಾರ್ಮಿಕ ಮುಖಂಡರನ್ನು ಹೊರತರಲು ಸೂಕ್ತ ಕಾರ್ಯಕ್ರಮ ರೂಪಿಸಿ ಎಲ್ಲಾ ರೀತಿ ಸಹಕಾರ, ಸಹಾಯದೊಂದಿಗೆ ಅವರನ್ನು ಹೊರತರಲು ಪ್ರಯತ್ನಿಸುವುದು ಮತ್ತು ಈ ವಿಷಯದಲ್ಲಿ ಐಕ್ಯ ಚಳುವಳಿ ಕಟ್ಟಿ ಬಂಡವಾಳಿಗರ ಹಾಗೂ ಸರ್ಕಾರದ ಕುತಂತ್ರವನ್ನು ಬಯಲಿಗೆಳೆಯಲು ಸಿಐಟಿಯು ರಾಜ್ಯ ಸಮ್ಮೇಳನ ಕರೆ ನೀಡಿದೆ.

ಶಿಫ್ಟ್‌ಗಳಲ್ಲಿ ಕೆಲಸ - ದೇಹ ಮನಸ್ಸುಗಳಿಗೆ ಆಯಾಸ



ಸುಮಾರು ಎಲ್ಲ ಕಾರ್ಮಿಕರಿಗೆ ಶಿಫ್ಟ್‌ಗಳಲ್ಲಿ ಕೆಲಸ ಮಾಡುವ ಅಗತ್ಯತೆ ಇರುತ್ತದೆ ಹಾಗೂ ಕೆಲವರಿಗೆ ಇದು ಅನಿವಾರ್ಯವೂ ಆಗಬಹುದು. ಶಿಫ್ಟ್‌ಗಳಲ್ಲಿ ಕೆಲಸ ಮಾಡುವುದು ಕಷ್ಟಕರವೇನೋ ನಿಜ, ಆದರೆ ಅದು ಅಸಾಧ್ಯವೇನಲ್ಲ. ಶಿಫ್ಟ್‌ಗಳಲ್ಲಿ ಕೆಲಸ ಮಾಡುವವರೊಂದಿಗೆ ಚರ್ಚಿಸಿ, ಅವರ ತೊಂದರೆಗಳನ್ನು ಅರಿತು ಅವರು ಒಪ್ಪಿಕೊಂಡ ಕೆಲವು ಸುಲಭ ಸೂತ್ರಗಳನ್ನು ಅರಿಯೋಣವೇ?

ಶಿಫ್ಟ್ ಕೆಲಸ ಮಾಡುವಾಗ ದಿನನಿತ್ಯದ ಕ್ರಮಗಳಾದ ನಿದ್ರೆ, ವ್ಯಾಯಾಮ, ಆಹಾರ ಸೇವನೆ ಹಾಗೂ ಸಾಮಾಜಿಕ ಸಂಪರ್ಕದಲ್ಲಿ ಏರುಪೇರು ಉಂಟಾಗುತ್ತಿದ್ದು ಶಿಫ್ಟ್ ಕೆಲಸ ಮಾಮೂಲಿನಂತಿರದೆ ಕಷ್ಟಕರವಾಗಿರಲು ಸಾಧ್ಯ. ಈ ಎಲ್ಲ ದಿನನಿತ್ಯದ ಕ್ರಮಗಳು ಏರುಪೇರಾದಾಗ ರೋಗರುಜಿನಗಳು ಉಂಟಾಗುವುದಲ್ಲದೆ, ಮಾನಸಿಕ ನೆಮ್ಮದಿ ಕೆಡುತ್ತದೆ. ಇದನ್ನು ಸರಿಪಡಿಸಲು ಸಾಮಾನ್ಯವಾಗಿ ಕಾರ್ಮಿಕರು ವೈದ್ಯರ ಹತ್ತಿರ ಹೋಗುತ್ತಾರೆ ಹಾಗೂ ಅನಗತ್ಯ ಚಿಕಿತ್ಸೆಗಳನ್ನು ತೆಗೆದುಕೊಳ್ಳುವ ಪರಿಪಾಠ ಉಂಟಾಗುತ್ತದೆ.

ನಿದ್ರೆ ಒಂದು ಸೂಕ್ಷ್ಮವಾದ ನಿತ್ಯಕ್ರಮ ದೇಹ ನಿದ್ರೆಯ ಸಮಯದಲ್ಲಿಯೇ ರೀಚಾರ್ಜ್ (recharge) ಆಗುತ್ತದೆ. ನಿದ್ರೆ ಅತ್ಯಗತ್ಯ, ಆದರೆ ನಿದ್ರೆಯ ಸಮಯದಲ್ಲಿ ಪ್ರತಿಯೊಬ್ಬರಲ್ಲೂ ವ್ಯತ್ಯಾಸವಿರಬಹುದು. ನಿದ್ರೆಕೆಟ್ಟರೆ ನಿದ್ರಾಹೀನತೆ, ಮಾನಸಿಕ ಕಿರಿಕಿರಿ, ದೇಹದೌರ್ಬಲ್ಯ, ಅಜೀರ್ಣ ಮುಂತಾದವುಗಳಾಗುತ್ತವೆ. ಶಿಫ್ಟ್ ಬದಲಾವಣೆ ಯಾದಾಗ ಉಂಟಾಗುವ ನಿದ್ರೆ ತೊಂದರೆ ಯಿಂದುಂಟಾಗುವ ತೊಂದರೆಗಳು ಸರಿಯಾಗಲು ಸಮಯ ಬೇಕಾಗುತ್ತದೆ. ಕಾರಣ ದೇಹ ಮೊದಲಿನ ಸ್ಥಿತಿಗೆ ಬರಲು ಸಮಯ ಅಗತ್ಯ. ಈ ತೊಂದರೆಗಳಿಗೆ ಚಿಕಿತ್ಸೆ ಅಗತ್ಯವಿಲ್ಲ.

ನಿದ್ರೆಗಿಂತ ಮುನ್ನ ಕೆಲವು ಅಭ್ಯಾಸಗಳನ್ನು ರೂಢಿ ಮಾಡಿಕೊಳ್ಳಿ ಉದಾ: ಪೇಪರ್ ಓದುವುದು, ಸಂಗೀತ ಕೇಳುವುದು, ಬಿಸಿನೀರು ಸ್ನಾನ ಮಾಡುವುದು. ಶಿಫ್ಟ್‌ನಿಂದ ಬಂದ ಕೂಡಲೇ ಈ ಅಭ್ಯಾಸಗಳು ರೂಢಿ ಇದ್ದವರು ಇವುಗಳನ್ನು ಅನುಸರಿಸಿದಲ್ಲಿ ನಿದ್ರೆ ಬರುವುದು. ಇದು ದೇಹಕ್ಕೆ, ಮನಸ್ಸಿಗೆ ವ್ಯಾಯಾಮ ಇದ್ದಂತೆ. ಶಿಫ್ಟ್ ಇಲ್ಲದವರೂ ಇಂತಹ ಅಭ್ಯಾಸಗಳನ್ನು ರೂಢಿ ಮಾಡಿ ಕೊಂಡಲ್ಲಿ, ನಿದ್ರೆಗೆ ತೊಂದರೆಯಾಗುವುದಿಲ್ಲ. ಸಾಮಾನ್ಯವಾಗಿ ಮಧ್ಯ ವಯಸ್ಸಿನವರಿಗೆ ನಿದ್ರೆ ತೊಂದರೆ ಇರುತ್ತದೆ, ಹಾಗೂ ಅವರು ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ನಿದ್ರೆ ತೊಂದರೆ ಉಲ್ಬಣ ಗೊಳ್ಳುತ್ತದೆ. ಚಿಕ್ಕ ವಯಸ್ಸಿನಲ್ಲಿ ನಿದ್ರೆಗೆ ಏನೂ ತೊಂದರೆ ಇಲ್ಲದ ಸಮಯದಲ್ಲಿ, ಈ ತರಹದ ಅಭ್ಯಾಸ ರೂಢಿ ಮಾಡಿಕೊಳ್ಳುವುದು ಕ್ಷೇಮ.

ಶಿಫ್ಟ್‌ನಲ್ಲಿ ಕನಿಷ್ಟ ಮೂರು ವಾರವಾದರೂ ಕೆಲಸ ಮಾಡಿ ಮೇಲಿಂದ ಮೇಲೆ ಶಿಫ್ಟ್ ಬದಲಾವಣೆ ತೊಂದರೆ ಉಂಟುಮಾಡಬಹುದು. ಶಿಫ್ಟ್ ಮೇಲಿಂದ ಮೇಲೆ ಬದಲಾವಣೆಯಾಗುವಂತಿದ್ದರೆ ಮೊದಲವಾರ ಬೆಳಗಿನ ಶಿಫ್ಟ್ ಎರಡನೇ ವಾರ ಮಧ್ಯಾಹ್ನದ ಶಿಫ್ಟ್, ಕೊನೆಯವಾರ ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡುವುದರಿಂದ ಕಡಿಮೆ ಅಪಾಯ ಶಿಫ್ಟ್ ಕೆಲಸಕ್ಕೆ ಸಾಮಾನ್ಯವಾಗಿ ಎಲ್ಲರೂ ಹೊಂದಿಕೊಳ್ಳುತ್ತಾರೆ. ಶಿಫ್ಟ್ ಕೆಲಸದಿಂದ ನಿದ್ರಾಹೀನತೆ ಉಂಟಾದಲ್ಲಿ ವೈದ್ಯರ ಆದೇಶ ಪಡೆದು ನಿದ್ರೆಮಾತ್ರೆ ಸೇವಿಸಬೇಕಾಗುತ್ತದೆ.

ನೀವೂ ಪ್ರಶ್ನೆ ಕಳಿಸಬಹುದು

ಅಮೆರಿಕದ ಕುಮ್ಮಕ್ಕಿನಿಂದ ಅರಾಫತ್ 'ಕಿತ್ತು ಬಿಸಾಕುವ' ಇಸ್ರೇಲಿ ಬೆದರಿ

ಭಯೋತ್ಪಾದಕ ಇಸ್ರೇಲ್ - ಅಮೇರಿಕಾದ ಬೆಂಬಲ

ಅರಾಫತ್‌ರನ್ನು 'ಕಿತ್ತುಬಿಸಾಕುವ' ಇಸ್ರೇಲಿ ಸರ್ಕಾರದ ಹೇಳಿಕೆ ಇಡೀ ಜಗತ್ತಿನ ಜನತೆಯ ಮನಸ್ಸನ್ನು ಕಲಕಿದೆ. ಇದು ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಮತ್ತು ಭದ್ರತಾ ಮಂಡಳಿಯ ಮುಂದೆ ಅದನ್ನು ಖಂಡಿಸುವ ನಿರ್ಣಯದಲ್ಲಿ ವ್ಯಕ್ತವಾಯಿತು. ಆದರೆ ಅಮೆರಿಕ ಅದನ್ನು ವಿಟೋ ಮಾಡಿ ವಿರೋಧಿಸಿದ ಏಕಮಾತ್ರ ದೇಶವಾಯಿತು. ಇರಾಕ್ ಮೇಲೆ 'ಅಪಾಯ ತಡೆಗಟ್ಟುವ' ದಾಳಿಯ ನೀತಿಯನ್ನು ಅನುಸರಿಸುತ್ತಿದೆ ಇಸ್ರೇಲ್. ಇತ್ತೀಚಿನ ಇಸ್ರೇಲಿ ಉದ್ಧಟತನ, ಉದ್ರೇಕಕಾರಿ ಕುಕೃತ್ಯಗಳಿಗೆ ಅಮೆರಿಕ 'ಸ್ಫೂರ್ತಿ' ಮಾತ್ರವಲ್ಲ, ಕುಮ್ಮಕ್ಕು ಕೊಡುತ್ತಿದೆ. 'ಭಯೋತ್ಪಾದನೆ ವಿರುದ್ಧ ಯುದ್ಧ'ದ ಹೆಸರಲ್ಲಿ 'ಸರ್ಕಾರಿ ಭಯೋತ್ಪಾದನೆ' ನೀತಿ ಅನುಸರಿಸುತ್ತಿದೆ. ಭಯೋತ್ಪಾದನೆಯನ್ನು ಹುಟ್ಟುಹಾಕಿದ್ದು ಇಸ್ರೇಲಿನ ಕುಕೃತ್ಯಗಳೇ. ಈ ಸರ್ಕಾರಿ ಭಯೋತ್ಪಾದನೆ ವಿರುದ್ಧ ಇನ್ನಾದರೂ ಎಲ್ಲಾ ದೇಶಗಳು ಎಚ್ಚೆತ್ತುಕೊಳ್ಳಬೇಕು




ಇಸ್ರೇಲಿ ಸರ್ಕಾರ ಮತ್ತು ಅದರ ಪ್ರಧಾನಿ ಶಾರೋನ್ ಅರಾಫತರನ್ನು 'ಕಿತ್ತುಬಿಸಾಕುವ' ಬೆದರಿಕೆಯನ್ನು ಪದೇಪದೇ ಒಡ್ಡುತ್ತಿದ್ದಾರೆ. ಇದರರ್ಥ ಏನು ಅಂತ ಎಲ್ಲೂ ಪೂರ್ತಿಯಾಗಿ ಸ್ಪಷ್ಟಪಡಿಸಿಲ್ಲ. ಆದರೆ ಅರಾಫತ್‌ರ 'ಕೊಲೆ ಮಾಡುವುದು' ಸರ್ಕಾರದ ಮುಂದಿರುವ ಆಯ್ಕೆಗಳಲ್ಲಿ ಒಂದು' ಎಂದು ಇಸ್ರೇಲಿನ ಉಪಪ್ರಧಾನಿ ಹೇಳಿದ್ದಾರೆ. ಒಂದು ದೇಶದ ಪ್ರಧಾನಿ ನೆರೆಯ ದೇಶದ ಅಧ್ಯಕ್ಷನನ್ನು 'ಕೊಲೆ ಮಾಡುವುದಾಗಿ' ಹೇಳುವುದಕ್ಕಿಂತ ಹೆಚ್ಚಿನ ಅನಾಕರಿಕತೆ, ಮಧ್ಯಯುಗದ ಬರ್ಬರತೆಗೆ ಉದಾಹರಣೆ ಬೇರೆ ಇದ್ದೀತೆ? ಇರಾಕ್‌ನ ಆಗಿನ ಅಧ್ಯಕ್ಷ ಸದ್ದಾಂ ಹುಸೇನ್ ತೊಲಗಬೇಕು, ಇಲ್ಲದಿದ್ದರೆ ಆತನನ್ನು ಮುಗಿಸಿಬಿಡುತ್ತೇವೆ ಎಂದು ಹಾರಾಡುತ್ತಿದ್ದ ಅಮೆರಿಕ ಅಧ್ಯಕ್ಷ ಬುಶ್ ಮಾತ್ರ ಅನಾಕರಿಕತೆ, ಬರ್ಬರತೆಯಲ್ಲಿ ಸರಿತೂಗಿಸಬಲ್ಲ, ಮೀರಿಸಲೂ ಬಲ್ಲ. ನಿಜವಾಗಿಯೂ ಶಾರೋನ್‌ಗೆ ಬುಶ್‌ನೇ ಸ್ಫೂರ್ತಿ. ಮಾತ್ರವಲ್ಲ ಶಾರೋನ್ ಈ ಕುಕೃತ್ಯಗಳಿಗೆ ಬುಶ್ ಸರ್ಕಾರದ ಕುಮ್ಮಕ್ಕೂ ಇದೆ.

'ಕಿತ್ತು ಬಿಸಾಕು'ವುದರ ಬಗ್ಗೆ ಇನ್ನೊಂದು ವಿವರಣೆ, ಇಸ್ರೇಲ್ ಅರಾಫತ್‌ರನ್ನು ಪ್ಯಾಲೆಸ್ಟೀನ್‌ನಿಂದ ಓಡಿಸಿಬಿಟ್ಟು ದೇಶಭ್ರಷ್ಟನನ್ನಾಗಿಸುವ ಹುನ್ನಾರ ನಡೆಸಿದೆ ಅಂತ. ಆದರೆ ಅಂತರ್ರಾಷ್ಟ್ರೀಯವಾಗಿ ಅತ್ಯಂತ ದೀರ್ಘಕಾಲದ ಪ್ರತಿಷ್ಠೆ ಇರುವ ಅರಾಫತರನ್ನು ದೇಶಭ್ರಷ್ಟ ಮಾಡುವುದು ರಾಜಕೀಯವಾಗಿ ಆತ್ಮಹತ್ಯಾಕಾರಿ ಎಂದು ಇಸ್ರೇಲಿಗೆ ಗೊತ್ತಿದೆ. ಆದ್ದರಿಂದ 'ಕಿತ್ತು ಬಿಸಾಕು'ವುದರಿಂದ ಏಕಮಾತ್ರ ಅರ್ಥಪೂರ್ಣ ವಿವರಣೆಯೆಂದರೆ ಅರಾಫತ್ ಕೊಲೆಯೇ ಎಂದು ಹಲವು ವೀಕ್ಷಕರ ಅಭಿಪ್ರಾಯ. ಅಲ್ಲದೆ ಇದು ಬರಿಯ ಹುಸಿ ಬೆದರಿಕೆ ಅಲ್ಲ. ಈಗಾಗಲೇ ಪ್ಯಾಲೆಸ್ಟೀನ್ ಸರ್ಕಾರದ ಮತ್ತು ಹಲವು ಹಿರಿಯ ಪ್ರತಿಷ್ಠಿತ ನಾಯಕರ ಕೊಲೆ ನಡೆಸಿದೆ ಮತ್ತು ಹಲವು ಪ್ರಯತ್ನಗಳನ್ನು ನಡೆಸಿದೆ. ಇತ್ತೀಚೆಗೆ ಹಮಾಸ್ ನಾಯಕನೊಬ್ಬನ ಮನೆ ಮೇಲೆ ಲೇಸರ್ ನಿರ್ದೇಶಿತ ಕ್ಷಿಪಣಿಗಳನ್ನು ಎಸೆಯಲಾಯಿತು. ಆತ ಮನೆಯಲ್ಲಿ ಇಲ್ಲದ್ದರಿಂದ ಬದುಕಿಕೊಂಡರೂ, ಆತನ ಕುಟುಂಬ ಮತ್ತು ಇತರ ಹಲವು ನಾಗರಿಕರು ಸತ್ತರು.

ಇದಲ್ಲದೆ ಇಸ್ರೇಲ್ ಪ್ಯಾಲೆಸ್ಟೈನ್ ಪ್ರದೇಶಗಳನ್ನು ಬೇಲಿ ಹಾಕಿ ಪ್ರತ್ಯೇಕಿಸಬಾರದು. ಪ್ಯಾಲೆಸ್ಟೀನ್ನರ ಸ್ವತಂತ್ರ ಸಂಚಾರಕ್ಕೆ ಅಡ್ಡಿ ಮಾಡಬಾರದು ಎಂಬ ನಿರ್ಣಯ ವನ್ನು ಇಸ್ರೇಲ್ ನಿರ್ಲಕ್ಷಿಸಿದೆ. ನಿತ್ಯ ಉಲ್ಲಂಘಿಸುತ್ತಿದೆ. ವಿಶ್ವಸಂಸ್ಥೆ ಇಸ್ರೇಲಿ ಉದ್ಧಟತನವನ್ನು ಖಂಡಿಸಿದಾಗಲೆಲ್ಲ, ಅಮೆರಿಕ ತನ್ನ ವಿಟೋ ಚಲಾಯಿಸಿ ಇಸ್ರೇಲನ್ನು ಕಾಪಾಡುತ್ತದೆ.

ಈ ಬಾರಿಯೂ ಅರಾಫತ್‌ರ ಮೇಲಿನ



ಶರೋನ್

ಬೆದರಿಕೆಯನ್ನು ಸಾಮಾನ್ಯ ಸಭೆ, ಭದ್ರತಾ ಸಮಿತಿ ಸರ್ವಸಮ್ಮತಿಯಿಂದ (ಅಮೆರಿಕ ಮತ್ತು ಇತರ ಒಂದೆರೆಡು ಸಣ್ಣ ದ್ವೀಪ, ದೇಶಗಳು ಬಿಟ್ಟರೆ) ಖಂಡಿಸಿದಾಗ ಇದೇ ಆದದ್ದು. ಇದು ಇಸ್ರೇಲಿಗೆ ಕುಮ್ಮಕ್ಕು ಕೊಟ್ಟ ಹಾಗೆ. ಪ್ಯಾಲೆಸ್ಟೀನ್ ನಾಯಕರ ಕೊಲೆ ಪ್ರಯತ್ನಕ್ಕೆ ಅನುವಾಗುವ ವಿಶೇಷ ಲೇಸರ್ ನಿರ್ದೇಶಿತ ಕ್ಷಿಪಣಿ ಇರುವ ಹೆಲಿಕಾಪ್ಟರುಗಳನ್ನು ಅಮೆರಿಕವೇ ಇಸ್ರೇಲಿಗೆ ಕೊಟ್ಟಿದೆ. ಅಮೆರಿಕದ ನೇರ ಕುಮ್ಮಕ್ಕಿನಿಂದ ಈ ದುಷ್ಕೃತ್ಯ ಜರುಗುತ್ತಿದೆ ಎಂದು ಇನ್ನೂ ಯಾರಿಗಾದರೂ ಅನುಮಾನ ಇದ್ದರೆ ಅದನ್ನು ಬುಶ್‌ನ ರಾಷ್ಟ್ರೀಯ ಭದ್ರತಾ ಸಮಿತಿ ಸಲಹಾಗಾರ್ತಿ ರೈಸ್ ನಿವಾರಿಸಿದ್ದಾರೆ. ಮಧ್ಯ ಏಶ್ಯಾ ಶಾಂತಿಗೆ 'ಅರಾಫತ್ ಕುತ್ತು'. ಆತನನ್ನು ಹೇಗೆ 'ನಿಭಾಯಿಸಬೇಕು' ಎಂದು ನಿರ್ಧರಿಸಬೇಕಾಗಿದೆ ಎಂದು ಹೇಳಿಕೆ ಇತ್ತಿದ್ದಾರೆ.

ಸಿರಿಯಾ ಮೇಲೆ ಇಸ್ರೇಲ್ ಮಾಡಿದ ಕ್ಷಿಪಣಿ ಧಾಳಿ ಸಹ ಅಮೆರಿಕದ ಸ್ಫೂರ್ತಿ, ಕುಮ್ಮಕ್ಕಿನಿಂದಲೇ ಆದದ್ದು. ಇರಾಕ್ ಯುದ್ಧದ ಮತ್ತು ಆ ಮೇಲಿನ ಸಂದರ್ಭದಲ್ಲಿ ಸಿರಿಯಾ 'ಭಯೋತ್ಪಾದನೆ'ಗೆ ಪ್ರಚೋದನೆ ಕೊಡುತ್ತಿದೆ, ಅದರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಅಮೆರಿಕ ಹೇಳುತ್ತಾ ಬಂದಿದೆ. ಇಸ್ರೇಲ್ ಒಂದು ಹೆಜ್ಜೆ ಮುಂದೆ ಹೋಗಿ ಕ್ಷಿಪಣಿ ದಾಳಿ ನಡೆಸಿದೆ.

ಪ್ಯಾಲೆಸ್ಟೀನರ ಮೇಲೆ ಇಸ್ರೇಲ್ ನಡೆಸುತ್ತಿರುವ ಅತ್ಯಾಚಾರ, ಆಕ್ರಮಣಗಳನ್ನು ಅಮ್ನೇಸ್ಟಿ ಇಂಟರ್‌ನ್ಯಾಷನಲ್ ಸಹ ಖಂಡಿಸಿದೆ. **ಕಳೆದ ಮೂರು ವರ್ಷಗಳು ಇಸ್ರೇಲಿ ಸೈನ್ಯ ಎರಡು ಸಾವಿರಕ್ಕೂ ಹೆಚ್ಚು ನಾಗರಿಕರ (ಸುಮಾರು 400 ಮಕ್ಕಳು ಸೇರಿದಂತೆ) ಹತ್ಯೆ ನಡೆಸಿದೆ. ಪ್ಯಾಲೆಸ್ಟೀನ್ ನಾಗರಿಕರ ಕೆಲಸ, ತಮ್ಮ ಜೀವನೋಪಾಯಕ್ಕಾಗಿ ತಿರುಗಾಡುವ ಹಕ್ಕನ್ನು ಮೊಟಕುಗೊಳಿಸಿ,** ಶೇಕಡಾ 50 ಪ್ಯಾಲೆಸ್ಟೀನ್‌ರನ್ನು ಬಡತನದ ರೇಖೆಯ ಕೆಳಗೆ ತಳ್ಳುವ ಇಸ್ರೇಲ್ ಕುಕೃತ್ಯಗಳು ಕೂಡಾ ಮಾನವ ಹಕ್ಕುಗಳ ದಮನ ಎಂದು ಅಮ್ನೆಸ್ಟಿ ವರದಿ ಹೇಳಿದೆ.

ಭಾರತ-ಅಮೆರಿಕಾ ಕೂಟದ ಹುನ್ನಾರ

ಈ ಬಗ್ಗೆ ಭಾರತ ಸರ್ಕಾರ ಸ್ಪಷ್ಟ ನಿಲುವು ತೆಗೆದುಕೊಂಡಿಲ್ಲ. ಇಸ್ರೇಲ್ ಇಂತಹ ಕುಕೃತ್ಯಗಳಲ್ಲಿ ತೊಡಗಿರುವಾಗ ಆ ದೇಶದ ಪ್ರಧಾನಿಯನ್ನು ಭಾರತ ಭೇಟಿಗೆ ಆಹ್ವಾನಿಸಿದ ಬಗ್ಗೆ ಭಾರತದ ಎಲ್ಲೆಡೆ ತೀವ್ರ ವಿರೋಧ ವ್ಯಕ್ತವಾಗಿದೆ. ಪ್ಯಾಲೆಸ್ಟೀನ್‌ರ ಸ್ವಾತಂತ್ರ್ಯವನ್ನು ಬೆಂಬಲಿಸುವ ಹಲವು ದಶಕಗಳ ಭಾರತದ ನೀತಿಯನ್ನು ಅಧಿಕೃತವಾಗಿ ಬದಲಾಯಿಸಿಲ್ಲ. ಆದರೆ ಸರ್ಕಾರ, ಬಿಜೆಪಿ-ಸಂಘ ಪರಿವಾರದ ನಾಯಕರಿಗೆ ಇಸ್ರೇಲಿ 'ಸರ್ಕಾರಿ ಭಯೋತ್ಪಾದನೆ' ಉತ್ತಮ ಮಾದರಿ. ಇಸ್ರೇಲ್-ಭಾರತ-ಅಮೆರಿಕ ಕೂಟವೊಂದು ರಚಿಸುವ ಹುನ್ನಾರದಲ್ಲಿದ್ದಾರೆ.

ಅಮೆರಿಕವನ್ನು ಸಂಪ್ರೀತ ಗೊಳಿಸಲು, ಇಸ್ರೇಲನ್ನು ಸಂಪ್ರೀತಗೊಳಿಸುವುದು ಅಗತ್ಯ ಎಂದು ಸರ್ಕಾರ ಅಭಿಪ್ರಾಯಪಟ್ಟಂತಿದೆ. ಸುರ್ಜಿತ್ ಈ ಸಂದರ್ಭದಲ್ಲಿ ಪ್ರಧಾನಿ ವಾಜಪೇಯಿಗೆ ಒಂದು ಪತ್ರ ಬರೆದು ಸರ್ಕಾರ ದೇಶದ ದಶಕಗಳ ನೀತಿಯನ್ನು ಬದಲಾಯಿಸಿ ದೆಯೇ? ಅಥವಾ ಆ ನೀತಿಗಳನ್ನು ಸ್ಪಷ್ಟವಾಗಿ ಎತ್ತಿ ಹಿಡಿಯುತ್ತಿದೆಯೇ? ಎಂದು ದೇಶಕ್ಕೆ ಸ್ಪಷ್ಟಪಡಿಸಬೇಕು ಎಂದಿದ್ದಾರೆ. ಈ ದುಷ್ಕೃತ್ಯಗಳಿಗೆ ಇಸ್ರೇಲಿ, ಅಮೆರಿಕಗಳನ್ನು ಖಂಡಿಸುವ ಅವರನ್ನು ತಡೆಯುವ ಅಂತರ್ರಾಷ್ಟ್ರೀಯ ಪ್ರಯತ್ನಕ್ಕೆ ಭಾರತ ನಾಯಕತ್ವ ಕೊಡಬೇಕು.

ಸುರ್ಜಿತ್ ಪತ್ರ

'ಪ್ಯಾಲೆಸ್ಟೀನ್ ಬಗ್ಗೆ ನಿಮ್ಮ ನೀತಿ ಏನು, ಅಟಲ್‌ಜೀ?'

ಇಸ್ರೇಲಿ ಪ್ರಧಾನಿ ಶಾರೋನ್ ಭೇಟಿ ಸಮಯದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಪ್ರಧಾನಿ ವಾಜಪೇಯಿಗೆ ಪತ್ರ ಬರೆದು ಪ್ಯಾಲೆಸ್ಟೀನ್ ಬಗ್ಗೆ ಸರ್ಕಾರದ ನೀತಿ ಏನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದ್ದರು. ಪ್ಯಾಲೆಸ್ಟೀನ್ ಬಗ್ಗೆ ಭಾರತದ ದಶಕಗಳ ನೀತಿ ಬದಲಾಯಿಸುತ್ತಿರೇನು ಎಂದು ಪ್ರಶ್ನಿಸಿದ್ದರು. ಪ್ಯಾಲೆಸ್ಟೀನ್ ಬಗ್ಗೆ ಭಾರತದ ನೀತಿಯನ್ನು ವಿವರಿಸಿ, ಅದನ್ನು ಬದಲಾಯಿಸುವಿರಾ ಎಂದು ಪ್ರಶ್ನಿಸುವ ಪತ್ರದ ಕೊನೆಯ ಭಾಗವನ್ನು ಇಲ್ಲಿ ಕೊಡಲಾಗಿದೆ.

"ಇಸ್ರೇಲಿ ಪ್ರಧಾನಿ ಶಾರೋನ್‌ಗೆ ಭೇಟಿಗೆ ಆಹ್ವಾನ ಕೊಟ್ಟ ಕೇಂದ್ರ ಸರ್ಕಾರ ಪ್ಯಾಲೆಸ್ಟೀನ್ ಬಗ್ಗೆ ತನ್ನ ನೀತಿ ಸ್ಪಷ್ಟಪಡಿಸಬೇಕು. ಭಾರತದ ಈವರೆಗಿನ ಕೆಳಗಿನ ಅಂಶಗಳನ್ನೊಳಗೊಂಡ ನೀತಿಯನ್ನು ಮುಂದುವರೆಸುವರೋ ಎಂದು ಸ್ಪಷ್ಟಪಡಿಸಬೇಕು.


1. ವಿಶ್ವಸಂಸ್ಥೆ ನಿರ್ಣಯ ನಂ. 242(1967) ಮತ್ತು 338 (1973) ಗಳ ಪ್ರಕಾರ ಪ್ಯಾಲೆಸ್ಟೀನ್ ಒಂದು ಸ್ವತಂತ್ರ ದೇಶವಾಗಬೇಕು.
2. ಪಶ್ಚಿಮ ದಂಡೆ, ಗಾಜಾ ಪಟ್ಟಿ ಮತ್ತು ಪೂರ್ವ ಜೆರೋಸಲಂನಿಂದ ಇಸ್ರೇಲಿ ಸೈನ್ಯ ಕಾಲ್ತೆಗೆಯಬೇಕು.
3. ಇಸ್ರೇಲ್ ಆಕ್ರಮಿಸಿಕೊಂಡಿರುವ ಪ್ರದೇಶಗಳಿಂದ ಎಲ್ಲಾ ಇಸ್ರೇಲಿ ವಲಸೆಗಾರರು ಹಿಂದಿರುಗಬೇಕು.
4. ಎಲ್ಲಾ ಪ್ಯಾಲೆಸ್ಟೀನ್ ನಿರಾಶ್ರಿತರು ವಾಪಸು ಬರಲು ಅವಕಾಶವಾಗಬೇಕು.
5. ಸೆಪ್ಟೆಂಬರ್ 1993 ರ ಒಸ್ಲೋ ಒಪ್ಪಂದ ಬೆಂಬಲಿಸಬೇಕು.
6. ಪ್ಯಾಲೆಸ್ಟೀನ್‌ನ ಜನತೆಯ ನಿಜವಾದ ಪ್ರತಿನಿಧಿ ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆ ಎಂದು ಮಾನ್ಯತೆ ನೀಡಬೇಕು.
7. ಈ ಪ್ರದೇಶದಲ್ಲಿ ಶಾಂತಿ ನೆಲೆಸಲು ಒಂದು ಅಂತರ್ರಾಷ್ಟ್ರೀಯ ಶಾಂತಿ ಸಮ್ಮೇಳನ ನಡೆಸಬೇಕು. ಈ ಬಗೆಗಿನ ವಿಶ್ವಸಂಸ್ಥೆ ಸಾರ್ವತ್ರಿಕ ಸಭೆಯ ನಿರ್ಣಯ 38/58ಸಿ (1983) ಮತ್ತು 43/176 (1998) ಗಳನ್ನು ಪೂರ್ಣವಾಗಿ ಜಾರಿ ಮಾಡಬೇಕು.



ಭಯೋತ್ಪಾದನೆಗೆ ಈಡಾದ ಪ್ಯಾಲೆಸ್ಟೀನಿಯನ್

ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಸಿಡಿದೆದ್ದು ಹೋರಾಡಲು ಸಿದ್ಧರಿದ್ದರು. ಬೀದಿ ದೀಪ ಒಡೆಯುವುದು, ಬಸ್ ಕಛೇರಿಗಳಿಗೆ ಬೆಂಕಿಯಿಕ್ಕುವುದರಿಂದ ಏನೂ ಪ್ರಯೋಜನವಿಲ್ಲವೆಂದು ಅರಿತ ಬಳಿಕ ಅಕ್ರಮ ಕಾಳಸಂತೆಖೋರರ ವಿರುದ್ಧ ಹೋರಾಡಲು ಸಿದ್ಧರಾದರು. ದಿಗಿಲುಗೊಂಡ ಲಾಭಕೋರರು ರಾತ್ರಿಯಲ್ಲಿ ಸಭೆ ಸೇರಿ ಚರ್ಚಿಸಿದರು. ಚಳುವಳಿ ಯಾವ ದಿಕ್ಕು ಹಿಡಿಯಿತು?

ಖ್ಯಾತ ಹಿಂದಿ ಕಥೆಗಾರ **ಹರಿಶಂಕರ ಪರಸಾಯಿಯವರ** ಕಥಾ ಸಂಗ್ರಹದಿಂದ.
ಅನುವಾದ : **ಜಿ.ಭಾಸ್ಕರ ಮಯ್ಯ**
ಜನವಾದಿ ಪ್ರಕಾಶನ, ಗುಂಡ್ಮಿ ಉಡುಪಿ



ಲಾಭಕೋರರ ಕ್ರಾಂತಿ

ಬಸ್ಸುಗಳನ್ನು ಸುಡಲಾಯಿತು. ಅಂಚೆ ಕಚೇರಿಗಳಿಗೆ ಬೆಂಕಿ ಕೊಡಲಾಯಿತು. ಇಬ್ಬರು ಮೂವರು ಪ್ರೊಫೆಸರುಗಳಿಗೆ ಹೊಡೆಯಲಾಯಿತು. ಬೆದರಿಕೆ ಹಾಕಿ ಮಾರ್ಕ್ಸ್ ಹೆಚ್ಚಿಸಿಕೊಳ್ಳಲಾಯಿತು. ಹೋಟೆಲುಗಳಲ್ಲಿ ಸಾಕಷ್ಟು ಕುಡಿದು ತಿಂದು ಬಿಲ್ ಕೊಡದೆ ಮ್ಯಾನೇಜರ್‌ಗೆ ಹೊಡೆದೂ ಬಡಿದೂ ಕಾಲೇಜಿನ ಕಿಟಕಿಗಳ ಗ್ಲಾಸ್ ಒಡೆದುದೂ ಆಯ್ತು. ರೈಲುಗಳಿಗೆ ಕಲ್ಲು ಹೊಡೆದಾಯ್ತು. ಪರಸ್ಪರ ಚೂರಿ ಹಾಕಿಯೂ ಆಯ್ತು. ಬೈದು, ಬೈಸಿಕೊಂಡೂ ಮುಗಿಯಿತು.

ಕ್ರಾಂತಿಕಾರಿ ವಿದ್ಯಾರ್ಥಿಗಳಿಗೆ ಈಗ ಬೋರಾಗಿತ್ತು. ಮುಖಂಡರೊಡನೆ ಕೇಳಿದರು. "ಇನ್ನೇನು ಮಾಡಲಿ? ಎಲ್ಲಾ ಮಾಡಿ ಆಯ್ತು" ವಿದ್ಯಾರ್ಥಿಗಳಿಗೆ ಬೇಜಾರಾಗಿತ್ತು. ಆಗ ಒಬ್ಬ ತಿಳಿವಳಿಕೆಯುಳ್ಳ ಮನುಷ್ಯ ಅವರಿಗೆ ಸಿಕ್ಕಿದ.

ಅವನೆಂದ "ನಿಮ್ಮ ಹತ್ತಿರ ಬಹಳ ಶಕ್ತಿಯಿದೆ. ಆದರೆ ಆ ಶಕ್ತಿಯನ್ನು ಎಲ್ಲಿ ಉಪಯೋಗಿಸಬೇಕೆಂಬುದು ನಿಮಗೇ ಗೊತ್ತಿಲ್ಲ."

ವಿದ್ಯಾರ್ಥಿ ಮುಖಂಡರು ಕೇಳಿದರು - "ಹಾಗಾದರೆ ಏನು ಮಾಡಬೇಕು"

ಆತ ಹೇಳಿದ "ನೋಡಿ, ಜಪಾನಿನ ವಿದ್ಯಾರ್ಥಿಗಳು ಅಮೆರಿಕದ ರಾಷ್ಟ್ರಪತಿ ಐಸೆನ್ ಹೋವರನ್ನು ಜಪಾನಿ ನೆಲದಲ್ಲಿ ಕಾಲಿಡಲು ಬಿಡಲಿಲ್ಲ. ಹಿರೋಶಿಮಾ ಮತ್ತು ನಾಗಸಾಕಿಯಲ್ಲಿ ನಾವು ಸಾಕಷ್ಟು ಅನುಭವಿಸುತ್ತಿದ್ದೇವೆ. ನಮ್ಮ ಹಿರಿಯರು ಇಂದೂ ಅಣುಬಾಂಬಿನ ವಿಸ್ಫೋಟದಿಂದ ರೋಗಿಗಳಾಗಿದ್ದಾರೆ. ಇನ್ನು ನಮ್ಮ ಪೀಳಿಗೆ ಅಮೆರಿಕದ ಮೋಸಕ್ಕೆ ಬಲಿಯಾಗುವುದಿಲ್ಲ ಜಗತ್ತಿನ ಎರಡು ಮಹತ್ತಮ ಶಕ್ತಿಗಳಲ್ಲೊಂದಾದ ಅಮೆರಿಕಾದ ರಾಷ್ಟ್ರಪತಿಗೆ ವಿದ್ಯಾರ್ಥಿಗಳು ತಮ್ಮ ನೆಲವನ್ನು ಮುಟ್ಟಲು ಕೂಡಾ ಬಿಡಲಿಲ್ಲ."

ಆತ ವಿಚಿತ್ರವಾಗಿ ಮಾತನಾಡುವ ವ್ಯಕ್ತಿಯೆಂದು ಜನರು ತಿಳಿದಿದ್ದರು. ಪ್ರಾಯಶಃ ಸ್ವಲ್ಪ ಲೂಜಿರಬೇಕು.

ಮುಂದೆ ಆತ ಹೇಳಿದ ಫ್ರಾನ್ಸಿನಲ್ಲಿ ವಿದ್ಯಾರ್ಥಿಗಳು ಸಂಘಟಿತರಾಗಿ. "ಫ್ರಾನ್ಸ್ ಏನು ಬಯಸುತ್ತದೆಂಬುದನ್ನು ನಾನು ನನ್ನನ್ನೆ ಪ್ರಶ್ನಿಸಿಕೊಳ್ಳುತ್ತೇನೆ" ಎಂದ. ದಿಗಾಲ್‌ನಂತಹ ಶಕ್ತಿಶಾಲಿ ಮತ್ತು ಅಹಂಕಾರಿ ರಾಷ್ಟ್ರಪತಿಯನ್ನು ಅವರು ಮಣಿಸಿದರು.

ವಿದ್ಯಾರ್ಥಿಗಳು ಗಂಭೀರವಾದರು. ಕೊನೆಗೆಂದರು-"ಹಾಗಾದರೆ ನಾವೇನು ಮಾಡಬೇಕು?"

ಆ ಮನುಷ್ಯನೆಂದ "ನೀವು ದಾರಿ ತಪ್ಪಿದವರು. ನಾಲ್ಕೂ ಕಡೆ ಕತ್ತಿಯಿಂದ ಗಾಳಿಯನ್ನು ಕತ್ತರಿಸುತ್ತೀರಿ. ಸಣ್ಣಪುಟ್ಟ ಗಲಾಟೆಯನ್ನು ಕ್ರಾಂತಿಯೆಂದು ತಿಳಿಯುತ್ತೀರಿ. ನೀವು ಮೂಲಭೂತ ಸಮಸ್ಯೆಯನ್ನೇ ಅರ್ಥಮಾಡಿಕೊಂಡಿಲ್ಲ. ವೈರಿಗಳನ್ನು ನೀವು ಗುರುತಿಸಿಕೊಳ್ಳದಿದ್ದರೆ ಕತ್ತಿಯನ್ನು ಯಾರ ಮೇಲೆ ಬೀಸುತ್ತೀರಿ?

ವಿದ್ಯಾರ್ಥಿಗಳು ಮತ್ತಷ್ಟು ಗಂಭೀರವಾದರು ಮತ್ತು ಸುಮ್ಮನೆ ಕುಳಿತರು.

ಕೊನೆಗೆ ಒಬ್ಬನೆಂದ "ಮತ್ತೆ ಯಾರೊಡನೆ ಹೋರಾಡಬೇಕು?"

ಆಗ ಆ ವ್ಯಕ್ತಿಯೆಂದ "ಸರಕಾರವು ಅದನ್ನು ತಡೆಯುವುದಿಲ್ಲ. ಕೆಲವು ಅಧಿಕಾರಿಗಳೂ ಅವರೊಡನೆ ಸೇರಿಕೊಂಡಿದ್ದಾರೆ. ಮತ್ತೆ ಕೆಲವರು ಹೆದರುತ್ತಾರೆ. ಅವರೆಲ್ಲಾದರೂ ಯಾವುದೇ ಸ್ಟಾಕಿಸ್ಟನ ಗೋದಾಮಿನ ಮೇಲೆ ದಾಳಿ ಮಾಡಿದರೆ ಅವರಿಗೆ ಕೂಡಲೇ ಟ್ರಾನ್ಸ್‌ಫರ್ ಆಗುತ್ತದೆ. ಇದನ್ನು ಜನತೆಯೇ ಸರಿಪಡಿಸಬೇಕು. ಅಂದರೆ ನೀವು. ಜನತೆಯ ದೊಡ್ಡ ಶಕ್ತಿಯೆಂದರೆ ನೀವೆ. ಹೋರಾಟ ಮಾಡುವುದಿದ್ದರೆ ಮೂಲಭೂತ ಸಮಸ್ಯೆಯನ್ನು ತೆಗೆದುಕೊಂಡು ಹೋರಾಡಿ. ತಾಕತ್ತಿದ್ದರೆ ಮೊಸಳೆ ತಿಮಿಂಗಿಲಗಳೊಡನೆ ಹೋರಾಡಿ. ಕೆರೆಯ ಸಣ್ಣ ಮೀನು ಹೊಡೆಯುವುದರಿಂದ ಏನು ಪ್ರಯೋಜನ.?

ಆ ಮನುಷ್ಯ ಮತ್ತೆ ಎಂದ "ಈ ಚಳಿಯಲ್ಲಿ ಹೊದಿಕೆ ಹೊದ್ದುಕೊಂಡು ಆರಾಮದಲ್ಲಿ ಕಾಲಗಲಿಸಿ ಮಲಗಿದರೆ ಬದಲಾವಣೆ ನಿಮ್ಮ ಮನೆ ಬಾಗಿಲಿಗೆ ಬಂದು "ಏಳು, ನಾನು ಬಂದೆ, ಚಾ ಕುಡಿ" ಎಂದು ಹೇಳುತ್ತದೆಂದು ತಿಳಿದಿದ್ದೀರಾ?

ವಿದ್ಯಾರ್ಥಿಗಳು ಬಿಸಿಯಲ್ಲಿದ್ದರು. ಮತ್ತೆ ಕೇಳಿದರು. "ಮತ್ತೇನು ಮಾಡಲಿ?" ಆತನೆಂದ "ನೀವು ದೊಡ್ಡ ಸ್ಟಾಕಿಸ್ಟರು ಮತ್ತು ಲಾಭಕೋರರನ್ನು ಹಿಡಿಯುವ ಕೆಲಸ ಮಾಡಬೇಕು. ಅವರನ್ನು ಹಿಡಿದು ಕತ್ತೆಗಳ ಮೇಲೆ ಕೂಡಿಸಿ ಮೆರವಣಿಗೆ ಮಾಡಿ. ಅವರ ಮುಖ ಕಪ್ಪು ಮಾಡಬೇಡಿ. ಏಕೆಂದರೆ ಜನ ಅವರನ್ನು ಗುರುತಿಸಲಿ. ನೀವು ಇದನ್ನೆಲ್ಲಾ ಮಾಡಲಾರಿರಿ. ಏಕೆಂದರೆ ಅವರು ಬುದ್ಧಿವಂತರು ಏಳು ಬಾಗಿಲುಗಳ ಸಂದುಗಳಲ್ಲಿ ತೂರಿ ಹೋಗುತ್ತಾರೆ."

ವಿದ್ಯಾರ್ಥಿಗಳೂ ಬುದ್ಧಿವಂತರು ತಿಳಿದುಕೊಳ್ಳಲು ತಯಾರಿದ್ದರು. ಆದರೆ ತಿಳಿಯಪಡಿಸುವವರಿಗೇ ಈ ದೇಶದಲ್ಲಿ ದೊಡ್ಡ ಕೊರತೆ. ಉಪದೇಶ ಕೊಡುವವರು ಸಾಕಷ್ಟು ಜನರಿದ್ದಾರೆ. ತಿಳಿಹೇಳುವವರು ಮತ್ತು ದಾರಿ ತೋರುವವರು ಕಡಿಮೆ. ಪ್ರತಿಯೊಂದು ವಿಷಯದಲ್ಲೂ ಈ ದೇಶದ ಮುಖಂಡರು ಕೊಡುವಷ್ಟು ಉಪದೇಶ ಮತ್ತು ಭಾಷಣವನ್ನು ಬೇರಾವ ದೇಶದಲ್ಲೂ ಕೊಡುವುದಿಲ್ಲ. ಬೆಳಿಗ್ಗೆ ಕೃಷಿ ವಿಜ್ಞಾನದ ಮೇಲೆ ಮತ್ತು ಸಂಜೆ ಅರವಿಂದ ದರ್ಶನದ ಮೇಲೆ. 25 ವರ್ಷಗಳಿಂದ ಈ ದೇಶದಲ್ಲಿ ರೊಟ್ಟಿಗೆ ಬದಲು ಭಾಷಣ ದೊರೆಯುತ್ತಿದೆ. ಜನರ ಜೀರ್ಣಶಕ್ತಿ ಹಾಳಾಗಿದೆ. ಬುದ್ಧಿ ವಾಂತಿ ಮಾಡಲು ತೊಡಗಿದೆ.

ಆಗ ವಿದ್ಯಾರ್ಥಿ ಮುಖಂಡರು ಮತ್ತೆ ಕೇಳಿದರು "ಏನು ಮಾಡಲಿ?"

ಆತನೆಂದ "ನಿಮಗೆ ದೊಡ್ಡ ದೊಡ್ಡ ಸ್ಟಾಕಿಸ್ಟರು. ಲಾಭಕೋರರು ಯಾರೆಂದು ಗೊತ್ತು. ಒಗ್ಗಟ್ಟಾಗಿ ಗೋದಾಮನ್ನು ಸುತ್ತುವರಿಯಿರಿ. ಸಾಧ್ಯವಾದರೆ ಬೀಗ ಮುರಿದು ಮಾಲು ಹೊರಗೆ ತೆಗೆಯಿರಿ. ನ್ಯಾಯಬೆಲೆಗೆ ಮಾರಿ. ಈಗ ಜನರು ನಿಮ್ಮನ್ನು ಲಫಂಗ ಎನ್ನುತ್ತಿದ್ದಾರೆ. ನಾಳೆ ನಿಮಗೆ ಜಯಕಾರ ಹಾಕುತ್ತಾರೆ.".

ಅದೇ ಬದಲಾವಣೆ. ಬೆಲೆ ಏರಿದೆ ಮತ್ತು ಲಾಭ ಹೆಚ್ಚು ಬರುತ್ತಿದೆಯೆಂದರೆ ಬೆಲೆ ಕಡಿಮೆ ಮಾಡುವುದು ಮತ್ತು ಲಾಭ ಕಡಿಮೆ ಮಾಡುವುದು ಬದಲಾವಣೆ. ಇದೇ ಕ್ರಾಂತಿ. ಹುಡುಗರು ಇದೇ ಕ್ರಾಂತಿ ಮಾಡಲು ತೊಡಗಿದರು.

ಎಲ್ಲಾ ಸೇಠುಗಳು ಚಿಂತೆಯಲ್ಲಿ ಮುಳುಗಿದರು. ಅವರೆನ್ನುತ್ತಿದ್ದರು "ಈ ಹುಡುಗರ ಗಲಾಟೆ ಭಾರೀ ಹೆಚ್ಚಾಯ್ತು. ಬದ್ಮಾಶಗಳು ಎಲ್ಲಾದರೂ ಬೆಂಕಿ ಹಚ್ಚುತ್ತಾರೋ ಏನೋ?"

ಒಬ್ಬ ಹೆದರಿದ. ಇನ್ನೊಬ್ಬ ಸೇಠ್ ಎಂದ - "ಸ್ಟಾಕ್ ನಮ್ಮದ್ದೋ ಅಥವಾ ಇವರ ಅಪ್ಪಂದೋ? ಮಂಡಿ ನಮ್ಮದ್ದೊ ಇವರ ಅಪ್ಪಂದೋ? ದುಡ್ಡು ಕೊಟ್ಟು ಮಾಲು ಕೊಂಡದ್ದು ನಾವೊ ಇವರ ಅಪ್ಪನೋ? ಮತ್ತೆ ಇವರಿಗೆ ಏನು ಹಕ್ಕಿದೆ? ಅವರ ಅಪ್ಪನಿಗೆ ತಾಕತ್ತಿದ್ದರೆ ಮಾಲು ಒಟ್ಟು ಮಾಡಲಿ" ಓದು ಬರಹ ಕಲಿ ಸೇಠ್ ಎಂದ.

"ಯಾವುದು ನಮ್ಮ ಹತ್ತಿರ ಇದೆಯೊ ಅದು ಎಲ್ಲರದ್ದು, ಒಬ್ಬರದ್ದೇ ಅಲ್ಲ ಎಂತ ಅವರು ಹೇಳುತ್ತಾರೆ".

ಸೇಠ್‌ಗಳಿಗೆಲ್ಲಾ ಆಶ್ಚರ್ಯ, ನಮ್ಮ ಸ್ಟಾಕು ಎಲ್ಲರದ್ದೂ ಆಗುವುದು ಹೇಗೆ?

ಓದು ಬರಹ ಕಲಿತ ಸೇಠ್ ಹೇಳಿದ - "ಇದನ್ನು ಅವರು ಸಮಾಜವಾದ ಎನ್ನುತ್ತಾರೆ.

ರಾಮ್‌ಗರೀಬ್ ಸೇಠ್ ಹೇಳಿದ - "ಇಂಥ ಸಮಾಜವಾದ ಬೆಂಕಿ ಬಿದ್ದು ಹೋಗಲಿ. ನಾಳೆ ಅವರು ನಮ್ಮ ಮಂಡಿಯ ಗೋದಾಮಿನ ಮೇಲೆ ಧಾಳಿ ಮಾಡಿ ಅದನ್ನು 'ಸಮಾಜವಾದ ಅಂತಾರೆ".

ಆಗ ಇನ್ನೊಬ್ಬನೆಂದ - "ಎಲ್ಲರನ್ನೂ ಜೈಲಿಗೆ ಹಾಕಿಸುವ".

ಓದು ಬರಹ ಕಲಿತ ಸೇಠ್ ಹೇಳಿದ - "ಅವರೇನಾದರೂ ಮಾಡಿದರೆ ತಾನೆ ಜಾಲಿಗೆ ಹಾಕುವುದು?"

ಸೇಠ್ ಚತುರ್ಭುಜನೆಂದ "ಹಾಗಿದ್ದರೆ ಪೊಲೀಸರಿಗೆ ಹೇಳಿ ಲಾಟಿ ಚಾರ್ಜು ಮಾಡಿಸುವ." ಓದಿದ ಸೇಠ್ ಎಂದ - "ಅವರು ಎಷ್ಟೋ ಸಾರಿ ಹೋರಾಟ ಮಾಡಿ ಲಾಟಿ ಏಟಿನ ರುಚಿ ನೋಡಿದ್ದಾರೆ. ಈಗ ಅದಕ್ಕೇನೂ ಅವರು ಹೆದರುವುದಿಲ್ಲ. ಅವರು ಏನಾದರೂ ಮಾಡಿದರ ತಾನೆ ಪೊಲೀಸರು ಲಾಟಿ ಚಾರ್ಜ್ ಮಾಡುವುದು. ನಮ್ಮ ಹೋರಾಟವು ಶಾಂತಿಪೂರ್ಣವೂ ಅಹಿಂಸಾತ್ಮಕವೂ ಆಗಿರುತ್ತದೆ ಎಂದು ಅವರು ಹೇಳುತ್ತಾರೆ."

ಬಹಳ ಹೊತ್ತಿನ ತನಕ ಚರ್ಚೆ ನಡೆಯಿತು. ಕೊನೆಗೆ ಒಬ್ಬ ಉಸ್ತಾದ್ ಸೇಠ್ ಹೇಳಿದ.

"ಈಗ ಇರುವುದು ಒಂದೇ ದಾರಿ. ನಾವೂ ಕ್ರಾಂತಿಯಲ್ಲಿ ಸೇರಿಕೊಳ್ಳೋಣ."

ಎಲ್ಲರಿಗೂ ಆಶ್ಚರ್ಯವಾಯಿತು.

ಅವರು ಕೇಳಲು ತೊಡಗಿದರು. "ನೀನು ಏನು ಹೇಳುತ್ತಿದ್ದಿ? ಅವರೊಡನೆ ಸೇರಿ ನಾವು ನಮ್ಮ ಗೋದಾಮನ್ನೆ ಲೂಟಿ ಮಾಡುವುದೆ ? ಇದು ಅತಿಯಾಗಿ ಹೋಯ್ತು. ನಿನ್ನ ತಲೆ ಕೆಟ್ಟಿದೆ" ಆ ಸೇಟ್ ಹೇಳಿದ.

"ನೋಡಿ 25 ಗೂಂಡಾಗಳಿಗೆ ಹೇಳಿ. ಪ್ರತಿಯೊಬ್ಬರಿಗೂ 20.25 ರೂಪಾಯಿ ಕೊಡಿ. ಅವರಿಗೆ ಹುಡುಗರೊಡನೆ ಸೇರಿಕೊಳ್ಳಲು ತಿಳಿಸಿ. ಅವರು ಅಲ್ಲಿ ಇಲ್ಲಿ ಹುಡುಗರ ಹಿಂದಿರಲಿ. ಘೋಷಣೆಯನ್ನೂ ಕೂಗಲಿ. ಹುಡುಗರು ಗೋದಾಮಿನ ಹತ್ತಿರ ಹೋಗುತ್ತಲೆ ಅವರು ಪೊಲೀಸರ ಮೇಲೆ ಕಲ್ಲು ಎಸೆದು ಜಾರಿಕೊಳ್ಳಲಿ, ಮತ್ತೆ ನೋಡಿ ಏನು ಆಗುತ್ತದೆ ಅಂತ

ಮಾರನೆಯ ದಿನ ಹೀಗೇ ಆಯಿತು - ವಿದ್ಯಾರ್ಥಿಗಳು ಪೂರ್ಣ ಆತ್ಮವಿಶ್ವಾಸ ಮತ್ತು ಶಿಸ್ತಿನಿಂದ ಗೋದಾಮಿನೆಡೆಗೆ ಸಾಗುತ್ತಿದ್ದರು.

ಗೋದಾಮನ್ನು ಸಮೀಪಿಸುತ್ತಿದ್ದಂತೆಯೇ 25 ರೂಪಾಯಿಯ ಕ್ರಾಂತಿವೀರರು ಪೊಲೀಸರ ಮೇಲೆ ಕಲ್ಲಿನ ಸುರಿಮಳೆ ಸುರಿಸಿದರು ಮತ್ತು ಜಾರಿಕೊಂಡರು.

ಪೊಲೀಸರು ಗಾಯಗೊಂಡರು." ಬೇವಾರ್ಸಿ ಹುಡುಗರು ನಮಗೆ ಕ[illegible] ಹೊಡೆಯುತ್ತಿದ್ದಾರೆ".

ಪೊಲೀಸರು ಲಾಠಿ ಚಲಾಯಿಸಿದರು ಹುಡುಗರು ಸಿಟ್ಟಾಗಿ ಕಲ್ಲು ಎಸೆಯ[illegible] ತೊಡಗಿದರು.

ಗೋದಾಮಿನ ಬೀಗ ಇವರನ್ನು ನೋ[illegible] ನಗುತ್ತಿತ್ತು!

ಈಗ ಗೋದಾಮನ್ನು ಎಲ್ಲರೂ ಮ[illegible] ಬಿಟ್ಟರು. ಈಗ ಹೋರಾಟ ನೇರವಾಗಿ ಹುಡು[illegible] ಮತ್ತು ಪೊಲೀಸರ ನಡುವೆ ನಡೆಯತೊಡಗಿ[illegible] ಲಾಟಿ ಚಾರ್ಜ್, ಟಿಯರ್ ಗ್ಯಾಸ್, ಕೆಲವು [illegible] ಗುಂಡೇಟು ಇಡೀ ಪಟ್ಟಣದಲ್ಲಿ ಹುಡುಗರು [illegible] ಪೊಲೀಸರ ನಡುವೆ ಘರ್ಷಣೆ.

ಕ್ಷುದ್ರರಾದ ಹುಡುಗರು ಮತ್ತೆ ಹಿಂದಿನ [illegible] ಮರಳಿದರು.


ಅದೇ ಅಂಚೆ ಕಚೇರಿ ಸುಡುವುದು. [illegible] ಬೆಂಕಿ ಹಾಕುವುದು, ಗೋದಾಮು ಹೇಗಿ[illegible] ಹಾಗೆಯೇ ಇತ್ತು. ರಾತ್ರಿ ಸೇಠುಗಳೆಲ್ಲಾ ಸೇರಿ[illegible]

ಆಗ ಉಸ್ತಾದ್ ಸೇಠ್ ಹೇಳಿದ - "[illegible] ಹೇಳಿ, ಹೇಗಿದೆ ಉಪಾಯ ಕ್ರಾಂತಿಗೆ [illegible] ಸಹಕರಿಸಿದ್ದರಿಂದ ನಮ್ಮ ಗೋದಾಮುಗ[illegible] ಉಳಿದವು. ಈಗ ಹುಡುಗರೂ ಪೊಲೀ[illegible] ಗುದ್ದಾಡುತ್ತಿದ್ದಾರೆ. ನಾವು ಮಜವಾಗಿದ[illegible] ನೋಡಿದಿರಾ, ಕ್ರಾಂತಿಯ ಚಮತ್ಕಾರ!

ತಮಿಳುನಾಡು ಪತ್ರಕರ್ತರ [illegible] ಮೇಲೆ ದಬ್ಬಾಳಿಕೆ: ಸಿಪಿಐ(ಎಂ) ಖಂಡನೆ

ದಿ ಹಿಂದೂ ಪತ್ರಿಕೆಯ ಪ್ರಕಾಶ[illegible] ಮತ್ತು ಇತರೆ ಇಬ್ಬರು ಸಂಪಾದಕರು ಹಾ[illegible] ಇಬ್ಬರು ಪತ್ರಕರ್ತರನ್ನು ಶಿಕ್ಷೆಗೆ ಒಳಪಡಿ[illegible] ತಮಿಳುನಾಡು ವಿಧಾನಸಭೆಯ ನಿರ್ಧಾರ[illegible] ಪತ್ರಿಕಾ ಸ್ವಾತಂತ್ರ್ಯ ಮತ್ತು ನಾಗ[illegible] ಹಕುಗಳ ಮೇಲಿನ ಧಾಳಿ ಎ[illegible] ಸಿಪಿಐ(ಎಂ) ಬಣ್ಣಿಸಿದೆ. ಗೌರವಾ[illegible] ಪತ್ರಿಕೆಯ ಪತ್ರಕರ್ತರುಗಳಿಗೆ [illegible] ನೀಡುವುದು ವಿಧಾನಸಭೆಯ ಸದಸ್ಯರಿಗಿ[illegible] ಹಕುಗಳ ದುರುಪಯೋಗವೇ ಸರಿ. [illegible] ಹಿಂದೂ' ಮತ್ತು 'ಮುರಸೊ[illegible] ದಿನಪತ್ರಿಕೆಗಳ ಮೇಲಿನ ಆಕ್ರಂಣ[illegible] ಕ್ರಮಗಳು, ಯಾವುದೇ ಭಿನ್ನಾಭಿಪ್ರಾಯ[illegible] ಜಯಲಲಿತಾ ಸರಕಾರವು ತೋರಿಸುತ್ತಿ[illegible] ಅಸಹನೆಯ ಪರಕಾಷ್ಠೆಯಾಗಿದೆ. ಸರ[illegible] ನೌಕರರ ಸಾಮೂಹಿಕ ವಜಾ ಮತ್ತು [illegible] ಮುಷ್ಕರಕ್ಕೆ ಬೆಂಬಲ ನೀಡಿದ ವಿರ[illegible] ಪಕ್ಷದ ನಾಯಕರ ವಿರುದ್ಧ ಮೊಕ[illegible] ಮೊದಲಾದ ಅನಾಗರಿಕ ಕ್ರ[illegible] ಮುಂದುವರಿದ ಭಾಗ ಇದಾಗಿದೆ.

ಈ ದಬ್ಬಾಳಿಕೆಯನ್ನು ತೀವ್ರ[illegible] ವಿರೋಧಿಸಬೇಕೆಂದು ಕರೆ ನೀ[illegible] ಸಿಪಿಐ(ಎಂ), ಜಯಲಲಿತಾ ಸರಕಾರ[illegible] ಕ್ರಮಗಳನ್ನು ಪುನರ್ ವಿಮರ್ಶಿಸ[illegible] ಹಾಗೂ ಕೂಡಲೇ ಅವುಗಳ[illegible] ಹಿಂತೆಗೆದುಕೊಳ್ಳಬೇಕು ಎಂದು ಹೇ[illegible] ಇಂತಹ ಸರ್ವಾಧಿಕಾರಿ ಕ್ರಮಗಳ [illegible] ಐಕ್ಯ ಪ್ರತಿಭಟನೆ ನಡೆಸಬೇಕೆಂದು [illegible] ಪ್ರಜಾಪ್ರಭುತ್ವ ಶಕ್ತಿಗಳಲ್ಲಿ ವಿನಂತಿ ಮಾ[illegible]



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12. 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH